ISSN 2321 - 3590
ಪುಸ್ತಕ – ೨೭

ಅಕ್ಟೋಬರ್–ಡಿಸೆಂಬರ್: ೨೦೧೫

ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ITIHASA DARPANA (Quarterly)

A Peer Reviewed Journal of Historical Research in Kannada

BOOK - 27

OCTOBER-DECEMBER :2015

ವಿಶೇಷ ಸಂಚಿಕೆಗಳ ಮಾರಾಟ

'ಇತಿಹಾಸ ದರ್ಪಣ'ವು ಈವರೆಗೆ ಮೂರು ಸಂಗ್ರಹ ಯೋಗ್ಯವಾದ ವಿಶೇಷ ಸಂಚಿಕೆಗಳನ್ನು ಹೊರತಂದಿದೆ. ಆಯಾ ಕ್ಷೇತ್ರದ ತಜ್ಞರಿಂದಲೇ ಬರೆಸಿ ಹೊರತಂದ ಈ ಕೃತಿಗಳು ನಮ್ಮಲ್ಲಿ ಲಭ್ಯವಿವೆ.

೧. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ.

ಒಟ್ಟು ಪುಟಗಳು: ೧೨೦, ಬೆಲೆ: ರೂ. ೯೦/-

ಈ ಕೃತಿಯು ನಾಡಿನ ಮತ್ತು ಹೊರನಾಡಿನ ಹಿರಿಯ ಹಾಗೂ ಯುವ ಸಂಶೋಧಕರುಗಳಾದ ಎಂ.ವಿ.ಶ್ರೀನಿವಾಸ್, ಎಸ್.ಕೆ.ಅರುಣಿ, ಫಾದರ್ ಹೆರಾಸ್, ಶ್ರೀನಿವಾಸ ಶಿಸ್ತಲ, ಕೆ.ಜಿ.ಗೋಪಾಲಕೃಷ್ಣರಾವ್, ಸಿ.ಬಿ.ಪಾಟೀಲ, ಪಿ.ವಿ.ಕೃಷ್ಣಮೂರ್ತಿ, ಎನ್.ವೆಂಕಟರಮಣಯ್ಯ, ಎಚ್.ಎಸ್.ಗೋಪಾಲ್ ರಾವ್, ಮನು ವಿ. ದೇವದೇವನ್, ಹರಿಹರ ಶ್ರೀನಿವಾಸರಾವ್, ಕೆ.ವಸಂತಲಕ್ಷ್ಮಿ, ಕೂ.ಸ.ಅಪರ್ಣ, ಗಿರಿಜಾಪತಿ, ಆರ್.ಶೇಷಶಾಸ್ತ್ರಿ, ಅ.ಲ.ನರಸಿಂಹನ್ ಹಾಗೂ ಸುಂಕಂ ಗೋವರ್ಧನ ಅವರುಗಳ ವಿದ್ವತ್ಪೂರ್ಣ ಲೇಖನಗಳನ್ನು ಒಳಗೊಂಡಿದೆ.

೨. ನಮ್ಮ ಬೆಂಗಳೂರು.

ಒಟ್ಟು ಪುಟಗಳು: ೧೧೨, ಬೆಲೆ: ರೂ. ೧೦೦/-

ಈ ಕೃತಿಯು ಎಚ್.ಎಸ್.ದೊರೆಸ್ವಾಮಿ, ಸುಂಕಂ.ಗೋವರ್ಧನ, ಪಿ.ವಿ.ಕೃಷ್ಣಮೂರ್ತಿ, ಎಸ್.ಕೆ.ಅರುಣಿ, ಎಂ.ಜಮುನ, ಸುರೇಶ್ ಮೂನ, ಎಸ್.ಎಲ್.ಶ್ರೀನಿವಾಸಮೂರ್ತಿ, ವೇಮಗಲ್ ಸೋಮಶೇಖರ್, ರಶ್ಮಿ.ಎಸ್, ಆರ್.ಡಿ.ಪವಮಾನ, ಅ.ಲ.ನರಸಿಂಹನ್, ಹಂ.ಗು.ರಾಜೇಶ್, ಎಂ.ಎನ್.ಉಮೇಶ್ ಅವರ ಅಮೂಲ್ಯ ಲೇಖನಗಳ ಜೊತೆಗೆ ಬೆಂಗಳೂರು ಕುರಿತು ಈವರೆಗೂ ಪ್ರಕಟವಾಗಿರುವ ಕೃತಿಗಳ ವಿವರ ಮತ್ತು ಐತಿಹಾಸಿಕ ಚಿತ್ರಗಳ ಸಂಗ್ರಹವನ್ನು ಒಳಗೊಂಡಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಅವರು ಸಂಪಾದಿಸಿದ್ದಾರೆ.

೩. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು.

ಒಟ್ಟು ಪುಟಗಳು: ೧೭೬, ಬೆಲೆ: ರೂ. ೧೧೦/-

ಇದು ಕರ್ನಾಟಕದ ಪುರಾತತ್ವ ಅಧ್ಯಯನಗಳನ್ನು ಕುರಿತು ಸಂಕ್ಷಿಪ್ತ ಚಿತ್ರಣವನ್ನು ಕಟ್ಟಿಕೊಡುವ ಅಪರೂಪದ ಕೃತಿಯಾಗಿದೆ. ಈ ಕೃತಿಗೆ ನಾಡಿನ ಹಿರಿಯ ಮತ್ತು ಯುವ ಪುರಾತತ್ವ ತಜ್ಞರುಗಳಾದ-ಎಂ.ಎಸ್.ಕೃಷ್ಣಮೂರ್ತಿ, ಎಸ್.ನಾಗರಾಜು, ವಿ.ಶೋಭಾ, ಕೆ.ಬಿ.ಶಿವತಾರಕ್, ಎಚ್.ಎಂ.ಅನಿತಾ, ಲ.ನ.ಸ್ವಾಮಿ, ಸಿ.ಎಸ್.ವಾಸುದೇವನ್, ಜಗದೀಶ್ ಅವರುಗಳು ಕೊಡುಗೆ ನೀಡಿದ್ದಾರೆ. ಅಪೂರ್ವ ಛಾಯಾಚಿತ್ರಗಳನ್ನು ಒಂದೆಡೆ ಪ್ರತ್ಯೇಕವಾಗಿಯೇ ನೀಡಲಾಗಿದೆ. ಈ ಕೃತಿಯನ್ನು ಎಸ್.ಕೆ.ಅರುಣಿ ಮತ್ತು ಹಂ.ಗು.ರಾಜೇಶ್ ಸಂಪಾದಿಸಿದ್ದಾರೆ.

ಈ ಮೇಲಿನ ಬಿಡಿ ಕೃತಿಗಳು ಬೇಕಾದಲ್ಲಿ ಈ ಕೆಳಕಂಡ ವಿಳಾಸಕ್ಕೆ ಕೃತಿಯ ಮೊತ್ತದ ಜೊತೆಗೆ ರೂ.೨೦/- ಅಂಚೆವೆಚ್ಚ ಸೇರಿಸಿ, ಎಂ.ಓ /ಡಿ.ಡಿ ಯನ್ನು ತಮ್ಮ ವಿಳಾಸದ ಜೊತೆಗೆ ಕಳುಹಿಸಿಕೊಡಿ.

ವಿಶೇಷ ಕೊಡುಗೆ: ರೂ.೨೫೦/- ಗಳಿಗೆ ಮೂರೂ ಕೃತಿಗಳನ್ನು ಕಳುಹಿಸಿಕೊಡಲಾಗುವುದು.

ವಿಳಾಸ: ಸಂಪಾದಕರು, 'ಇತಿಹಾಸ ದರ್ಪಣ', #೩೩ ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು-೫೬೦೦೯೧. ಮೊ- ೭೮೯೯೪೦೪೦೬೩

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ISSN 2321 - 3590

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

ಇತಿಹಾಸ ದರ್ಪಣ

(ತ್ರೈಮಾಸಿಕ)

Itihasa Darpana

(Quarterly)

ಪುಸ್ತಕ : ೨೭

Book : 27

ಅಕ್ಟೋಬರ್–ಡಿಸೆಂಬರ್ : ೨೦೧೫

October-December : 2015

ಸಂಪಾದಕರು
ಹಂ.ಗು. ರಾಜೇಶ್
ಸಂ.ದೂ. : ೭೮೨೯೪೦೪೦೬೩

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

ಅಕ್ಷರ ಜೋಡಣೆ
ಮಹೇಶ್ ಎಂ.
ಸಂ.ದೂ. : ೯೬೩೨೨೬೫೧೮೧

ಮುಖಪುಟ ವಿನ್ಯಾಸ
ಸುರೇಶ್‌ಕುಮಾರ್ ಎಚ್.
ಸಂ.ದೂ. : ೮೯೭೦೬೬೬೮೦೯

ಮುದ್ರಕರು
ಶ್ರೀ ರಂಗನಾಥ ಪ್ರಿಂಟರ್ಸ್
ಸಂ.ದೂ. : ೯೬೩೨೫೧೭೭೫೫

Editor
H.G Rajesh
Mob : 7829404063

Sub Editors
Sunkam Govardhan
Rashmi S.
Shivakumari M.S.

DTP
Mahesh M.
Mob : 9632265181

Cover Design
Sureshkumar H.
Mob : 8970666809

Printed at
Sri Ranganatha Printers
Mob : 9632517755

ಓದುಗರ ಸಲಹೆ-ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.

E-mail : ***itihasadarpana@gmail.com***

ಈ ಪತ್ರಿಕೆಯ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. -ಸಂ.

"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE ICHR."

ಪರಿವಿಡಿ. . .

'ಇತಿಹಾಸ ದರ್ಪಣ'ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

'ಇತಿಹಾಸ ದರ್ಪಣ'ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು 'ನುಡಿ' ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ-ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು 'ಪೂರ್ವೋಕ್ತ' ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕ್ಷಣಡಲೇ ಉಲ್ಲೇಖಿಸುವ ಸಂದರ್ಭದಲ್ಲಿ 'ಇಲ್ಲೇ' ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' ' ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' '), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- *ಇತಿಹಾಸ ದರ್ಪಣ* ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **'itihasadarpana@gmail.com'**ಗೆ ಇ-ಮೇಲ್ ಮಾಡುವುದು.

–ಸಂಪಾದಕರು

ನುಡಿಗನ್ನಡಿ

ಚಾರಿತ್ರಿಕ ಕಾಲಘಟ್ಟದ ತಿರುವಿನಲ್ಲಿ ನಾವು...

'ಕಾಲ ಬದಲಾಗುತ್ತಿದೆ' ಎನ್ನುವ ಮಾತು ಕ್ಲೀಷೆ ಎನಿಸಿದರೂ ಎಲ್ಲಾ ಕಾಲಕ್ಕೂ ಸಲ್ಲುವಂತದ್ದು. ಏಕೆಂದರೆ ಎಲ್ಲಾ ಕಾಲಘಟ್ಟದಲ್ಲಿಯೂ ಆಯಾಯ ಕಾಲಘಟ್ಟದಲ್ಲಿ ಬದುಕಿದ್ದವರು ಹೀಗೆ ಹೇಳುವುದು ಸಹಜವೆ. ಇದನ್ನೇ ಯುಗಧರ್ಮವೆಂದು ಸಾಹಿತ್ಯಕ ಪರಿಭಾಷೆಯಲ್ಲಿ ಕರೆಯುವುದುಂಟು. ಆದರೆ ಚಾರಿತ್ರಿಕ ಕಾಲಾನುಕಾಲವನ್ನು ಇತ್ತೀಚಿನವರೆಗೆ ನೋಡುತ್ತಾ ಬಂದಾಗ ಕಳೆದ 3–4 ದಶಕಗಳಲ್ಲಿ ಆಗುತ್ತಿರುವ ಬದಲಾವಣೆ ಹಿಂದೆಂದೂ ಆಗಿರಲಾರದು. ಅಂದರೆ ಚಾರಿತ್ರಿಕ ಕಾಲಘಟ್ಟದ ತಿರುವಿನಲ್ಲಿ ನಿಂತಿರುವ ನಾವು ದಿನಬೆಳಗಾದರೆ ಆಗುತ್ತಿರುವ ಬದಲಾವಣೆಗಳನ್ನು ನಿತ್ಯಜೀವನದಲ್ಲಿ ಕಾಣುತ್ತಿದ್ದೇವೆ. ಈ ಬದಲಾವಣೆಯು ವಿಜ್ಞಾನ – ತಂತ್ರಜ್ಞಾನದಿಂದ ಆರಂಭವಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹೀಗೆ ಎಲ್ಲಾ ರಂಗದಲ್ಲಿಯೂ ಉಂಟಾಗುತ್ತಿದೆ. ಅಂದರೆ ಈ ಬದಲಾವಣೆಯು ನಮ್ಮ ನಿತ್ಯಜೀವನವನ್ನೇ ಬದಲಾಯಿಸುತ್ತಿದೆ. ಹಾಗಾದರೆ ಈ ಮಟ್ಟದ ತೀವ್ರತರದ ತಿರುವಿಗೆ ಹಿಂದೆಂದೂ ಚರಿತ್ರೆಯ ಕಾಲಗರ್ಭದಲ್ಲಿ ಜನಜೀವನ ಒಳಗಾಗಿರಲಿಲ್ಲವೆ? ಹಿಂದೆಯೂ ಆಗಿದೆ. ಆದರೆ ಈ ಪರಿಯಲ್ಲಲ್ಲ.

ನಾನಿಲ್ಲಿ ಮಾತನಾಡುತ್ತಿರುವುದು ಸಾವಿರಾರು ವರ್ಷಗಳಿಂದ ಭಾರತೀಯರ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದ ಅನೇಕ ಭೌತಿಕ ಮತ್ತು ಜೈವಿಕ ಅಂಶಗಳು ಇಂದು ಬೇರ್ಪಟ್ಟಿರುವ ವಿಚಾರ. ಆ ಅಂಶಗಳು ಇತ್ತೀಚಿನ ಆವಿಷ್ಕಾರಗಳೋ, ಹೊರಗಿನ ಪರಿಚಯಗೊಂಡ ಸಾಂಸ್ಕೃತಿಕ ಅಂಶಗಳೋ ಪಲ್ಲಟಗೊಳಿಸಿ ಆಕ್ರಮಿಸಿವೆ. ಇದನ್ನೇ ವಿವರವಾಗಿ ಹೇಳಬೇಕಾದರೆ, ಒಂದು ಕಾಲದಲ್ಲಿ ಪ್ರತಿ ಮನೆಯಲ್ಲಿರುತ್ತಿದ್ದ ಅರೆಯುವ ಗುಂಡು ಅಥವ ಹಸಿಕಲ್ಲು ಎಂದು ಕರೆಯುವ ಸಾಧನ ಇಂದು ಹಳ್ಳಿಗಾಡಿನಲ್ಲಿಯೂ ಬಳಕೆಯಲ್ಲಿಲ್ಲ. ಈ ಸಾಧನ ಮಿಕ್ಸರ್, ಗ್ರೈಂಡರ್‌ಗಳು ಹಳ್ಳಿಹಳ್ಳಿಗಳಿಗೂ ತಲುಪುವವರೆಗೂ ಕಾರ್ಯ ನಿರ್ವಹಿಸುತ್ತಿತ್ತು. ಕಳೆದ 20 ವರ್ಷಳಿಂದೀಚೆಗೆ ಕಣ್ಮರೆಯಾಗುತ್ತಾ ಬಂದವು. ಹಸಿಕಲ್ಲಿನ ಮೂಲಕ್ಕೆ ಹೋಗಬೇಕಾರೆ 5000 ವರ್ಷಗಳಷ್ಟು ಪ್ರಾಚೀನವಾದ ಹರಪ್ಪ ನಾಗರಿಕತೆಯನ್ನು ಗಮನಿಸಬಹುದು. ಹರಪ್ಪ ನಾಗರಿಕತೆಯ ನಿವೇಶನಗಳಲ್ಲಿ ನಮಗೆ ಹಸಿಕಲ್ಲಿನ ಅವಶೇಷಗಳು

ದೊರೆತಿವೆ. ಹಾಗೆಯೇ ಹರಪ್ಪ ನಾಗರಿಕತೆಯಲ್ಲಿ ಕಂಡುಬರುವ ಎತ್ತಿನ ಮರದ ಗಾಡಿಗಳು ಟೈರ್ ಗಾಡಿಗಳ ಆಗಮನದವರೆಗೂ ಪ್ರಮುಖ ಸರಕು ಸಾಗಣೆ ವಾಹನಗಳಾಗಿ ಬಳಕೆಯಲ್ಲಿದ್ದವು. ಕಳೆದ 2–3 ದಶಕಗಳಿಂದೀಚೆಗೆ ಟೈರ್ ಗಾಡಿ, ಟ್ರ್ಯಾಕ್ಟರ್, ಗೂಡ್ಸ್ ಆಟೋಗಳು ಬರಲಾಗಿ ಮರದ ಗಾಡಿಗಳು ಉರುವಲಾಗಿ ಉರಿದವು. ಹಾಗೆಯೇ ದೈನಂದಿನ ಬದುಕಿನಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಪಾತ್ರೆ ಮಡಕೆಗಳು. ಬಹುಪಯೋಗಿ ಈ ಮಡಕೆಗಳು ತಾಳಿಕೆ ಮತ್ತು ಬಾಳಿಕೆಯಲ್ಲಿ ಯಾವಾಗಲೂ ಹಿಂದೆ ಬಿದ್ದಿದ್ದವು. ಇದರ ಸಲುವಾಗಿಯೇ 2 ದಶಕಗಳ ಹಿಂದಿನ ಹಳ್ಳಿಯ ಮನೆಗಳಲ್ಲಿ ಅತ್ತೆ–ಸೊಸೆ, ಅಮ್ಮ–ಮಗಳ ನಡುವೆ ಆಗಾಗ್ಗೆ ಜಗಳಗಳು ಜರುಗುತ್ತಿದ್ದವು. ಕಾರಣ ಮಾತ್ರ ಆಸಕ್ತಿದಾಯಕವಾದುದು. ಮಗಳಾಗಲಿ, ಸೊಸೆಯಾಗಲಿ ಅತ್ತೆ ಅಥವಾ ಅಮ್ಮನ ಮೇಲಿನ ಕೋಪವನ್ನು ರಾಗಿಮುದ್ದೆ ತಿರುಗುವಾಗ ಮಡಕೆಯ ಮೇಲೆ ತೀರಿಸಿಕೊಳ್ಳುತ್ತಿದ್ದರು. ಇಂಥ ಮಡಕೆಗಳು ಸುಮಾರು 8–10 ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ಬಳಕೆಗೆ ಬಂದವು. ನವಶಿಲಾಯುಗದಲ್ಲಿ ಆಹಾರ ಉತ್ಪಾದನೆ ಆರಂಭಗೊಂಡಾಗ ಅವುಗಳನ್ನು ಸಂಗ್ರಹಿಸಲು ಕೈಯಿಂದ ಮಾಡಿದ ಮಡಕೆಗಳನ್ನು ಆರಂಭದಲ್ಲಿ ಬಳಸುತ್ತಿದ್ದರು. ನಂತರ ಚಕ್ರದಲ್ಲಿ ಮಡಕೆ ಮಾಡುವ ಪದ್ಧತಿ ರೂಢಿಗೆ ಬಂದಿತು. ಆದರೆ ಇಂದು ಸಿಲ್ವರ್, ಇಂಡಾಲಿಯಂ, ಸ್ಟೀಲ್ ಮೊದಲಾದ ಲೋಹ ಪಾತ್ರೆಗಳು ಹೆಚ್ಚು ಚಲಾವಣೆಗೆ ಬಂದಂತೆ ಮಡಕೆಗಳು ಪಳೆಯುಳಿಕೆಯ ವಸ್ತುಗಳಾಗಿ ಮನೆಯ ಮೂಲೆ ಸೇರಿದವು.

ನಮ್ಮ ಹಳ್ಳಿಯ ಸಾಮಾನ್ಯ ಮನೆಗಳಲ್ಲಿ ವಾರಕ್ಕೊಮ್ಮೆ ಸಗಣಿ ಮತ್ತು ಗಂಜಲದಿಂದ ನೆಲವನ್ನು ತಾರಿಸುತ್ತಿದ್ದರು. ಈ ಗಂಜಲ ಒಂದು ತರದಲ್ಲಿ ಇಂದಿನ ಪೆನಾಯಿಲ್‌ನಂತೆ ಬಳಕೆಯಾಗುತ್ತಿತ್ತು. ಗಾರೆ ನೆಲಗಳು ಬರಲಾಗಿ ಆ ಪದ್ಧತಿ ನಿಂತಿದೆ. ಅದರ ಸ್ಥಾನವನ್ನು ರಾಸಾಯನಿಕ ಉತ್ಪನ್ನಗಳು ಆವರಿಸಿವೆ. ಆದರೆ ಈ ಸಗಣಿ ಮತ್ತು ಗಂಜಲದಿಂದ ತಾರಿಸಿದ ನೆಲದ ಬಳಕೆಗೆ ಸಾವಿರಾರು ವರ್ಷಗಳ ಇತಿಹಾಸವಿರುವುದನ್ನು ಮರೆಯುವಂತಿಲ್ಲ. ಅದೇ ರೀತಿ ದಕ್ಷಿಣ ಭಾರತದಲ್ಲಿ ಉತ್ಪಾದಿಸಲ್ಪಡುವ ಪ್ರಮುಖ ಆಹಾರ ಧಾನ್ಯ ರಾಗಿ. ಕರ್ನಾಟಕದಲ್ಲಿ ಸುಮಾರು 5000 ವರ್ಷಗಳಿಗೂ ಪೂರ್ವದ ಶಿಲಾಯುಗದ ನಿವೇಶನದಲ್ಲಿ ಈ ಧಾನ್ಯದ ಅವಶೇಷಗಳು ಪತ್ತೆಯಾಗಿವೆ. ಆದರೆ ಇಂದು ಜೆಂಕ್‌ಫುಡ್, ಫಾಸ್ಟ್‌ಫುಡ್‌ಗಳ ಹಾವಳಿಯಿಂದ ರಾಗಿಯ ಉತ್ಪಾದನೆ ಹಾಗೂ ಬಳಕೆ ಕಡಿಮೆಯಾಗಿದೆ. ಇಂದು ರಾಗಿ ಕೇವಲ ಮಧುಮೇಹಿಗಳ ಆಹಾರೌಷಧವಾಗಿದೆ. ರಾಗಿಯ ಜೊತೆಗೆ ಬೆಳೆಯಲಾಗುತ್ತಿದ್ದ ನವಣೆ, ಹಾರಕ, ಸಜ್ಜೆ ಮೊದಲಾದ ಸಿರಿಧಾನ್ಯಗಳು ಪ್ರದರ್ಶನಾಲಯದ ಕಪಾಟಿನ ಅಲಂಕಾರಿಕ ವಸ್ತುಗಳಂತಾಗಿರುವುದು ಚಾರಿತ್ರಿಕ ವ್ಯಂಗ್ಯವೇ ಸರಿ. ಇಂದು ಅಡುಗೆ ಮಾಡುವ ಸೌದೆ ಒಲೆಗಳು ಅದರ ಎಡ–ಬಲಗಳಲ್ಲಿ ಇರುತ್ತಿದ್ದ ಹೊಗಾಲೆ (ಹೊಗೆಬಲೆ) ಇವೆಲ್ಲವನ್ನು ನನ್ನ ಕಣ್ಮುಂದೆಯೇ ಜನಸಾಮಾನ್ಯರ ಮನೆಗಳಲ್ಲಿಯೇ ಕಿತ್ತು ಹಾಕಿರುವುದುಂಟು. ಅವುಗಳ ಸ್ಥಾನವನ್ನು ಸೀಮೆಎಣ್ಣೆ ಸ್ಟೌವ್, ಗ್ಯಾಸ್ ಸ್ಟೌವ್, ಪಂಪ್ ಸ್ಟೌವ್‌ಗಳು ಅಲಂಕರಿಸಿವೆ. ಪ್ರತೀ ಮನೆಗಳಲ್ಲಿಯು ಶಾಸ್ತ್ರಕ್ಕಾದರೂ ಸ್ಥಾಪಿಸುತ್ತಿದ್ದ ಹೊರಳು ಕಲ್ಲುಗಳು ಇಂದು ಬೀದಿಬದಿಯಲ್ಲಿ ಅನಾಥವಾಗಿ ಬಿದ್ದಿರುವುದನ್ನು ಬೆಂಗಳೂರು ನಗರದಲ್ಲಿ ಅನೇಕ ಕಡೆಗಳಲ್ಲಿ ಗಮನಿಸಿದ್ದೇನೆ. ಹೊರಳು ಕಲ್ಲುಗಳನ್ನು ಸಹ ಮಿಕ್ಸರ್, ಗ್ರೈಂಡರ್‌ಗಳು ಹೊರದಬ್ಬಿವೆ. ಈ ಹೊರಳು ಕಲ್ಲುಗಳ ಆಗಮನ ಕೂಡ ಇತಿಹಾಸ ಪೂರ್ವಕಾಲಕ್ಕೆ ಸೇರುತ್ತವೆ. ನಾನು ಕಂಡಂತೆ ನಮ್ಮ ಹಳ್ಳಿಯ ಬದುಕಿನಲ್ಲಿ ಜನರು ನಿತ್ಯ ಬೆಳಗಾದರೆ

ಬೇವಿನಕಡ್ಡಿ, ಉಪ್ಪು, ಇದ್ದಿಲುಗಳಿಂದ ಹಲ್ಲು ಉಜ್ಜುತ್ತಿದ್ದರು. ಇನ್ನು ಕೆಲವರು ಇಟ್ಟಿಗೆಗೆ ನೀರನ್ನು ಹಾಕಿ ತೋರುಬೆರಳಿನಿಂದ ಉಜ್ಜಿದ ನಂತರ ಬಂದ ಗಸಿಯಿಂದ ಹಲ್ಲನ್ನು ಉಜ್ಜುತ್ತಿದ್ದರು. ಆದರೆ ಇಂದು ಉಪ್ಪು, ಇದ್ದಿಲು, ಬೇವಿನ ಕಡ್ಡಿಗಳ ಸ್ಥಾನವನ್ನು ಕೋಲ್ಗೇಟ್, ಪೆಪ್ಸುಡೆಂಟ್, ಕ್ಲೋಸ್‌ಅಪ್ ಅಂತಹ ಪೇಸ್ಟ್‌ಗಳು ಅಲಂಕರಿಸಿವೆ. ಅವುಗಳ ಬಳಕೆಗೆ ತರಾವರಿ ವಿನ್ಯಾಸದ ಬ್ರಷ್‌ಗಳು ಬಂದಿವೆ. ಅನಾದಿಕಾಲದಿಂದ ಬಳಕೆಯಲ್ಲಿದ್ದ ಪದ್ಧತಿಯನ್ನು ಮುರಿದ ಈ ಪೇಸ್ಟ್‌ಗಳದೊಂದು ತಮಾಷೆ ಏನೆಂದರೆ ಉಪ್ಪುಯುಕ್ತ, ಇದ್ದಿಲುಯುಕ್ತ ಬೇವುಯುಕ್ತ, ಲವಂಗಯುಕ್ತ ಎಂಬಿತ್ಯಾದಿ ಪೇಸ್ಟ್‌ಗಳು ಬಂದಿರುವುದು. ಹಿಂದೆ ನಾವು ಬಳಸುತ್ತಿದ್ದ ಸಾಂಪ್ರದಾಯಕ ವಿಶೇಷಗಳು ತುಂಬಿದ ಪೇಸ್ಟ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಬಹುರಾಷ್ಟ್ರೀಯ ಕಂಪನಿಗಳ ಮಾಯಾಜಾಲಕ್ಕೆ ಸಿಲುಕಿ ಈ ವಸ್ತುಗಳ ಬಳಕೆಗೆ ಮಾರುಹೋಗಿದ್ದೇವೆ. ನಿಂಬೆ ಷರಬತ್ತು, ಕರಬೂಜ ಪಾನಕಗಳ ಬದಲಿಗೆ ಕೂಲ್ ಡ್ರಿಂಕ್ಸ್ ಹೆಸರಿನಲ್ಲಿ ಅಪಾಯಕಾರಿ ಕ್ರಿಮಿನಾಶಕಗಳನ್ನು ಕುಡಿಸುವ ಮೂಲಕ ನಾವು ಕೈಯಾರೆ ನಮ್ಮ ಮಕ್ಕಳಿಗೆ ವಿಷಪ್ರಾಶನ ಮಾಡಿಸುತ್ತಿದ್ದೇವೆ. ಚಾರಿತ್ರಿಕ ವಿಸ್ಮೃತಿ ಎಂದರೆ ಇದೇ ಅಲ್ಲವೆ?

ಕಳೆದ 30–40 ವರ್ಷಗಳಿಂದಾಗುತ್ತಿರುವ ಬದಲಾವಣೆಯಿಂದ ನಮ್ಮ ದೈನಂದಿನ ಬದುಕಿನಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಯು ನಮ್ಮ ಆರೋಗ್ಯದ ಮೇಲೆ ಕೂಡ ತೀವ್ರ ಪರಿಣಾಮ ಬೀರಿದೆ. ಆಹಾರಕ್ರಮ, ಜೀವನಶೈಲಿ, ಬಳಸುವ ವಸ್ತುಗಳು ಇವೆಲ್ಲವೂ ನಮ್ಮ ಆರೋಗ್ಯದ ಮಟ್ಟವನ್ನು ಬದಲಿಸಿವೆ. ಅತಿಯಾದ ಜೆಂಕ್‌ಫುಡ್, ಫಾಸ್ಟ್‌ಫುಡ್, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕಯುಕ್ತ ಪದಾರ್ಥಗಳು, ಕೃತಕ ಬಣ್ಣಗಳು ಮೊದಲಾದವುಗಳ ಪರಿಣಾಮಗಳಿಂದ ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆಗಳಲ್ಲದೆ ಕ್ಯಾನ್ಸರ್‌ನಂತಹ ಅನೇಕ ಮಾರಕ ರೋಗಗಳು ಬಂದೆರಗುತ್ತಿವೆ.

ಇವೆಲ್ಲದರ ಜೊತೆಗೆ ಸಂವಹನ ಮಾಧ್ಯಮದಲ್ಲಿ ಉಂಟಾಗಿರುವ ಪ್ರಗತಿಯಿಂದ ಒಂದು ಕಡೆ ತಾತಾ, ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವ ಇತ್ಯಾದಿ ಕೌಟುಂಬಿಕ ಸಂಬಂಧಗಳು ಶಿಥಿಲಗೊಂಡು ಯಾಂತ್ರಿಕವಾಗಿವೆ. ಹಿಂದೆ ವಾರದ ಸಂತೆಗಳು ಈ ರೀತಿಯ ಸಂಬಂಧಗಳನ್ನು ಬೆಸೆಯುವ ತಾಣಗಳಾಗಿದ್ದವು. ಇತ್ತೀಚಿನ ವರ್ಷಗಳಲ್ಲಿ ವಾರದ ಸಂತೆಗಳೂ ಕೂಡ ಕಾಣೆಯಾಗುತ್ತಿವೆ. ಬದಲಿಗೆ ರಿಲೆಯನ್ಸ್ ಮಾರ್ಟ್, ರಾಯಲ್ ಮಾರ್ಟ್, ಮೆಟ್ರೊನಂತಹ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಮಾರುಕಟ್ಟೆ ಕ್ಷೇತ್ರಕ್ಕೆ ಅಡಿ ಇಡಲಾಗಿ ಸಂತೆಗಳು, ಕಿರಾಣಿ ಅಂಗಡಿಗಳು ಅವಸಾನದ ಅಂಚಿಗೆ ಸರಿಯುತ್ತಿವೆ. ಇದು ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಶೋಚನೀಯ ಹಂತಕ್ಕೆ ಕೊಂಡೊಯ್ಯುತ್ತಿರುವುದಕ್ಕೆ ನಿದರ್ಶನ.

ಅಂದಮಾತ್ರಕ್ಕೆ ನಮ್ಮ ಪುರಾತನ ಆಚಾರ–ವಿಚಾರಗಳೆಲ್ಲವೂ ಶ್ರೇಷ್ಠವಾಗಿದ್ದವು. ಅವೆಲ್ಲವೂ ನಶಿಸಿಹೋಗುತ್ತಿವೆ ಎಂದೇನೂ ನಾನು ಪರಿತಪಿಸುತ್ತಿಲ್ಲ. ಆದರೆ ನಮ್ಮ ನಿತ್ಯ ಬದುಕಿನಲ್ಲಿ ಉಂಟಾಗುತ್ತಿರುವ ಬದಲಾವಣೆಯು ನಮ್ಮ ಜೀವನಕ್ರಮ, ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಮಾತ್ರ ಹೇಳಬಲ್ಲೆ. ಆಧುನಿಕತೆ ಎನ್ನುವುದರ ಹಿಂದೆಯೂ ಒಂದು ಹುನ್ನಾರವಿದೆ. ಈ ಹುನ್ನಾರ ಬಂಡವಾಳಿಗರ ಮತ್ತು ಬೌದ್ಧಿಕ ಶೋಷಕರ ಮೂಲದ್ದು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

–ಹಂ.ಗು.ರಾಜೇಶ್

ಸಾದರ ಸ್ವೀಕಾರ

- *ಹೇಳುತ್ತೇನೆ ಕೇಳು ಹೆಣ್ಣಿನ ಆತ್ಮಕಥನಗಳು*
  ಸುಕನ್ಯಾ ಕನಾರಳ್ಳಿ
  ಪ್ರಕಾಶಕರು: ಲಂಕೇಶ್ ಪ್ರಕಾಶನ, ಬೆಂಗಳೂರು
  ವರ್ಷ: 2012, ಪುಟಗಳು: 280, ಬೆಲೆ:175/-

- *ಗಾಳಿಗೆ ಸಿಕ್ಕ ತರಗೆಲೆ*
  ಬಿ.ಆರ್. ರಮೇಶ್,
  ಪ್ರಕಾಶಕರು: ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು
  ವರ್ಷ: 2013, ಪುಟಗಳು: 222, ಬೆಲೆ:150/-

- *ಚಿತ್ರದುರ್ಗದ ರಾಜಾ ಬಿಚ್ಚುಗತ್ತಿ ಭರಮಣ್ಣ ನಾಯಕ*
  ಲಕ್ಷ್ಮಣ್ ತೆಲಗಾವಿ
  ಪ್ರಕಾಶಕರು: ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ
  ವರ್ಷ: 2015, ಪುಟಗಳು:144, ಬೆಲೆ: 100/-

- *ಚಮ್ಮಾರರು : ಸಾಮುದಾಯಿಕ ಗ್ರಹಿಕೆಗಳು*
  ಲಕ್ಷ್ಮಣ್ ತೆಲಗಾವಿ
  ಪ್ರಕಾಶಕರು: ಸುಂದರ ಪುಸ್ತಕ ಪ್ರಕಾಶನ, ಧಾರವಾಡ
  ವರ್ಷ: 2016, ಪುಟಗಳು: 190, ಬೆಲೆ: 120/-

■

ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಪುಸ್ತಕ ಕಳುಹಿಸುವ ಲೇಖಕರು ಮತ್ತು ಪ್ರಕಾಶಕರಲ್ಲಿ ಮನವಿ

- ಸಾದರ ಸ್ವೀಕಾರ ಮತ್ತು ವಿಮರ್ಶೆಗೆ ಕಳುಹಿಸುವ ಕೃತಿಗಳು ಇತಿಹಾಸ, ಪುರಾತತ್ವ, ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ, ನಾಣ್ಯಶಾಸ್ತ್ರಗಳಿಗೆ ಸಂಬಂಧಿಸಿರಬೇಕು.
- ಕೃತಿಯ ಒಂದು ಪ್ರತಿ ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರಕ್ಕೆ ಎಂತಲು, ಎರಡು ಪ್ರತಿಗಳನ್ನು ಕಳುಹಿಸಿಕೊಟ್ಟಲ್ಲಿ ಸಾದರ ಸ್ವೀಕಾರ ಮತ್ತು ಕೃತಿ ವಿಮರ್ಶೆಗೆ ಎಂತಲೂ ಪರಿಗಣಿಸಲಾಗುವುದು.
- ಕೃತಿಗಳನ್ನು ವಿಮರ್ಶೆಗೆ ಆದ್ಯತಾನುಸಾರ ಪರಿಗಣಿಸಲಾಗುವುದು.

ಪ್ರತಿಗಳನ್ನು ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ,
ಬೆಂಗಳೂರು-560091.
ಮೊ: 7829404063.

ಕೊಡಗಿನ ಪರಿಸರದ ಕಡಂಗಗಳು – ಚಾರಿತ್ರಿಕ ಹಿನ್ನೆಲೆ ಮತ್ತು ಮಹತ್ವ

□ ಎನ್.ಎಂ. ಪೂವಯ್ಯ
ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ, ಕನ್ನಡ ವಿ.ವಿ.,
ಹಂಪಿ. ವಿದ್ಯಾರಣ್ಯ–583276
ಹೊಸಪೇಟೆ ತಾ||, ಬಳ್ಳಾರಿ ಜಿ||
info@correspondenceeduction.org

ಕಡಂಗಗಳೆಂಬ ಕಂದಕಗಳ ರಚನೆ ಬಹುಶಃ ಕರ್ನಾಟಕದಲ್ಲಿ ಚರಿತ್ರೆಯಲ್ಲಿಯೇ ಬಹಳ ಅಪರೂಪ ವಾದುದು. ವಿಜಯನಗರೋತ್ತರ ಕಾಲದಲ್ಲಿ ಬಹಳ ಮುಖ್ಯವಾಗಿ ಕೊಡಗಿನ ಅನೇಕ ಕಡೆಗಳಲ್ಲಿ ನಿರ್ಮಾಣವಾದ ಕಡಂಗಗಳು ಸಂಶೋಧಕರಲ್ಲಿ ಆಸಕ್ತಿಯನ್ನು ಹುಟ್ಟಿಸಿವೆ. ಕೊಡಗು ದೇಶವನ್ನು ರೂಪಿಸುವಲ್ಲಿ ಮತ್ತು ಸಂಪರ್ಕ ಕಲ್ಪಿಸುವಲ್ಲಿ ಕಡಂಗಗಳು ಮಹತ್ತರ ಪಾತ್ರವಹಿಸಿದವು. ಒಕ್ಕ (ಕುಟುಂಬ) ಒಕ್ಕಗಳ ಮಧ್ಯೆ, ಊರು ಊರುಗಳ ಮಧ್ಯೆ, ನಾಡು ನಾಡುಗಳ ಮಧ್ಯೆ ಜನಸಂಚಾರ ಮತ್ತು ವ್ಯಾಪಾರ ವಹಿವಾಟು ಮಾರ್ಗಗಳಾಗಿಯೂ ಕಡಂಗಗಳು ಬಳಕೆ ಯಾದವು. ಇಷ್ಟೆಲ್ಲ ವಿವಿಧ ಆಯಾಮಗಳನ್ನು ಹೊಂದಿದ ಕಡಂಗಗಳು ಅಧ್ಯಯನ ಯೋಗ್ಯ ವಿಷಯವಾಗಿದೆ. ಒಕ್ಕ, ನಾಡು, ನುಡಿ, ಕಡಂಗಗಳು ಅಂದಿನ ಕೊಡಗು ದೇಶದ ಸಮಗ್ರಸ್ಥಾಪನೆಯಲ್ಲಿ ವಹಿಸಿದ ಪಾತ್ರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ನೆಲದ ಮೇಲೆ ನಿಂತ ಕೋಟೆ, ಕೊತ್ತಲಗಳು, ಗಡಿ ಬೇಲಿಗಳು, ಗೋಡೆಗಳು, ಕುಟುಂಬ, ಸಮಾಜ, ಸಮುದಾಯ, ಜಿಲ್ಲೆ, ರಾಜ್ಯ, ರಾಷ್ಟ್ರ, ಹೀಗೆಲ್ಲಾ ವಿಭಜಿಸುವಲ್ಲಿ ಸುಲಭದ ಪ್ರಯೋಗಗಳಾಗಿ ಕಂಡರೂ ಇವುಗಳ ಪಾತ್ರ ಕೇವಲ ವಿಭಜನೆ ಮಾತ್ರವಾಗಿ ಉಳಿಯದೆ ರಕ್ಷಣೆಯೂ ಅವುಗಳ ಆಶಯ ವಾದುದು ವಿಶೇಷವಾಗಿತ್ತು. ಕುಟುಂಬ–ಕುಟುಂಬ ಗಳೊಳಗಿಂದ ರಾಷ್ಟ್ರ–ರಾಷ್ಟ್ರಗಳವರೆಗೆ ಬೇರ್ಪಡಿಸಿಕೊಂಡು ಬದುಕುವ ರೀತಿಯಿಂದಾಗಿ ಕೋಟೆ ಕೊತ್ತಲಾದಿಗಳನ್ನು ಕಟ್ಟಲಾಗದ ಕಡೆಗಳಲ್ಲಿ ಕಡಂಗಗಳನ್ನು ತೋಡುವ ಪ್ರಕ್ರಿಯೆಗಳು

ಹುಟ್ಟಿಕೊಂಡವು. ಪ್ರತ್ಯೇಕತೆಯ ಕಾರಣಗಳೇನೇ ಇದ್ದರೂ ಪ್ರತ್ಯೇಕತೆಗೆ ಬಳಸಿದ ಸಾಧನಗಳೂ ವಿಭಿನ್ನವೆಂಬುದನ್ನು ನಾವಿಲ್ಲಿ ಮನಗಾಣಬೇಕಾಗುತ್ತದೆ. ಎಲ್ಲೆ ಎಂಬುದು ಏಕತೆಯ ಪ್ರೇರಕ; ಏಕತೆ ಎಂಬುದು ರಕ್ಷಣೆಯ ಪ್ರತೀಕ. ಈ ಹಿನ್ನೆಲೆಯಲ್ಲಿ ಕೊಡಗು ಸಮಗ್ರ ನಾಡಾಗಿ ರೂಪುಗೊಳ್ಳಲು ಕಡಂಗಗಳು ವಹಿಸಿದ ಪಾತ್ರವನ್ನು ಇಲ್ಲಿ ಅಧ್ಯಯನ ಮಾಡುವುದು ಸೂಕ್ತವಾಗಿದೆ.

– 1 –

'ಕಡಂಗ' ಎಂದರೆ ನಿಘಂಟಿನಲ್ಲಿ ಕಂದಕ, ಅಗಳು ಎಂಬರ್ಥಗಳಿವೆ. 'ಕಾಲುವೆಯಿಂದ ನೀರು ಹಾಯಿಸಲು ಮಾಡಿದ ಚಿಕ್ಕ ಹರಿವು' ಎಂಬ ಅರ್ಥವೂ ಕಡಂಗು ಪದಕ್ಕಿದೆ. ಕಡಂಗ ಎಂದರೆ ತೋಡು ಎಂದರ್ಥ. ಕಡ, ಕಡವು ಎನ್ನುವುದಕ್ಕೆ ಹೊಳೆಯನ್ನು ದಾಟುವ ಸ್ಥಳ, ಗದ್ದೆ ಅಥವಾ ಹೊಲದಲ್ಲಿ ಒಂದು ಸೀಳು ಎಂಬುದಾಗಿ ಪ್ರಯೋಗಿಸಲಾಗಿದೆ. ಒಟ್ಟಾರೆಯಾಗಿ 'ಕಡಂಗ' ನಿಘಂಟುಗಳಲ್ಲಿ, ಕಂದಕ, ಕಾಲುವೆ ಮುಂತಾಗಿ ಅರ್ಥ ಹೊಂದುತ್ತದೆ. ಕಡಂಗಕ್ಕೆ ಸಂವಾದಿಯಾಗಿರುವ ಅಗಳು ಪದ ತೋಡುವಿಕೆಯಿಂದಾದು ದೆಂಬುದನ್ನು ತೋರಗೊಡುತ್ತದೆ. ಕೊಡಗು ಭಾಷೆಯಲ್ಲಿ 'ಕಡಂಗಿ' ಎಂಬ ಶಬ್ದವು ನೀರಿಲ್ಲದ ಕಂದಕ ಎಂಬರ್ಥದಲ್ಲಿ ಬಳಕೆಯಲ್ಲಿದೆ. ಕೊಡವ – ಕನ್ನಡ ನಿಘಂಟಿನಲ್ಲಿ 'ಕಡಂಗ' ಎಂದರೆ ಉದ್ದಕ್ಕೂ ಕಟ್ಟೆ ಏರಿಸಲಾದ ಹಿಂದಿನ ಕಾಲದ ಮಣ್ಣಿನ ದಿಣ್ಣೆ. 'ಅಲ್ಲದೆ ಗ್ರಾಮದ ಸುತ್ತ ಹಿಂದಿನ ಕಾಲದಲ್ಲಿ ರಕ್ಷಣೆಗಾಗಿ ತೋಡಿದ ಇಲ್ಲವೆ ಗಡಿ ಗುರುತಿನ ಹಳ್ಳದೊಡನಾದ ಏರಿ' ಎಂಬ ಅರ್ಥದಲ್ಲಿಯೂ ಈ ಶಬ್ದ ಬಳಕೆಯಾಗಿದೆ. ಈ ಹಿನ್ನೆಲೆಯಲ್ಲಿ ಕೊಡಗಿನ ಕಡಂಗಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳು ಈ ಕೆಳಗಿನಂತಿವೆ :

- ರೆವರೆಂಡ್ ರಿಕ್ತರ್ ಅವರು ಕಡಂಗಗಳನ್ನು 'ವಾರ್ ಟ್ರೆಂಚಸ್' (ಕಾಳಗ ಕಂದಕಗಳು) ಎನ್ನುತ್ತಾನೆ.[1]
- ಬಿ.ಎಲ್.ರೈಸ್ ಅವರು "ನಾಯಕರು ತಮ್ಮ ಪ್ರಾಂತ್ಯವನ್ನು ರಕ್ಷಿಸಲು ಗಡಿಯಲ್ಲಿ ನಿರ್ಮಿಸಿದ ಕಂದಕಗಳೇ ಕಡಂಗಗಳು" ಎನ್ನುತ್ತಾರೆ.[2]
- ಡಿ.ಎನ್.ಕೃಷ್ಣಯ್ಯ ಅವರು "ಕೊಂಬುಗಳ ಮೇರೆಗಳಾಗಿ ಆಳವಾದ ಮತ್ತು ಅಗಲವಾದ ಕಡಂಗಗಳಿದ್ದವು. ನಾಯಕರ ಆಡಳಿತದ ನಂತರ ಆಳಿದ ಹಾಲೇರಿ ಅರಸರೂ ಮುಂದೆ ಕಡಂಗಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದರು. ಈ ಕಡಂಗಗಳು ಈಗಲೂ ಕೊಡಗಿನ ಎಲ್ಲ ಭಾಗಗಳಲ್ಲೂ ಕಂಡುಬರುತ್ತವೆ" ಎನ್ನುತ್ತಾರೆ.[3]
- ಐ.ಮಾ. ಮುತ್ತಣ್ಣ ಅವರು ಕಡಂಗಗಳನ್ನು "ಉದ್ದಕ್ಕೂ ಏರಿಸಲಾದ ಹಿಂದಿನ ಕಾಲದ ಮಣ್ಣಿನ ದಿಣ್ಣೆ" ಎನ್ನುತ್ತಾರೆ.[4]

– 2 –

ಕೊಡಗಿನ ಪರಿಸರದಲ್ಲಿ ಕಡಂಗಗಳು ವಿಜಯನಗರೋತ್ತರ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಚನೆಗೊಂಡರೂ ಕೂಡ ಅವುಗಳ ಆರಂಭಿಕ ಉಲ್ಲೇಖಗಳು ಕಿ.ಶ 9ನೆಯ ಶತಮಾನದಷ್ಟು ಪೂರ್ವಕ್ಕೆ ಹೋಗುತ್ತವೆ. ಕೊಡಗಿನ ಕಡಂಗಗಳ ಅಸ್ಥಿತ್ವವನ್ನು ಕುರಿತಂತೆ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ಕ್ರಿ.ಶ.9ನೇ ಶತಮಾನದ ಕಿಗ್ಗಟ್ಟು ನಾಡಿನ

ಬಿಳಿಯೂರು ಶಾಸನದಲ್ಲಿ 'ಪೆಣ್ಣೆ ಗಡಜ್ಜಲು'[5] ಪದ ಪ್ರಯೋಗ ಕಂಡುಬರುತ್ತದೆ. "ಪಾಲ್ಗುಣ ಮಾಸದ ಶ್ರೀ ಪಞಮ್ಚೆಯನ್ದು ಶಿವಣನ್ದಿ ಸಿದ್ಧಾನ್ತದ ಭಟರರಶಿಷ್ಯರ್ಸರ್ವ್ವಣನ್ದಿ ದೇವರ್ಗ್ಗೆ ಪೆಣ್ಣೆಗಡಜ್ಜದ ಸತ್ಯವಾಕ್ಯ ಜಿನಾಲಯಕ್ಕೆ ಪೆದ್ದೊರೆಗರೆಯ ಬಿಳಿಊರ್ಪ್ಪನ್ನಿರ್ಪ್ಪಳ್ಳಿಯುಮಂ..." ಎನ್ನುವ ಈ ಶಾಸನದ ಉಲ್ಲೇಖಗಳಲ್ಲಿ ಕಡಂಗದ ಪ್ರಸ್ತಾಪ ಬರುತ್ತದೆ. ಅದಲ್ಲದೆ ಕ್ರಿ.ಶ. 978ರಲ್ಲಿ ಸತ್ಯವಾಕ್ಯ ಕೊಂಗಣಿವರ್ಮನು ತಲಕಾಡಿನಲ್ಲಿ ಆಳುತ್ತಿದ್ದಾಗ ಅವನ ತಮ್ಮ ರಕ್ಕಸಗಂಗನು ಪೆದ್ದೊರೆಗರೆಯನ್ನು ಆಳುತ್ತಿದ್ದನೆಂದೂ ಆಗ ಪೆಗ್ಗಡೂರು ಮತ್ತು ಹೊಸ ಕಡಂಗಗಳನ್ನು ಯಾವ ಅಭ್ಯಂತರವೂ ಇಲ್ಲದೆ ಶ್ರವಣಬೆಳಗೊಳದ ಅನಂತವೀರಯ್ಯ ಎಂಬ ಜೈನಗುರು ದಾನಪಡೆದನೆಂದೂ ದಾಖಲಿಸುತ್ತದೆ.[6]

ಹಾಗಾಗಿ ಕಡಂಗಗಳು ಕೊಡಗಿನ ಪರಿಸರದಲ್ಲಿ ಸುಮಾರು 1200 ವರ್ಷಗಳಷ್ಟು ಹಳೆಯ ಇತಿಹಾಸವನ್ನು ಹೊಂದಿರಬಹುದಾದ ಸಾಧ್ಯತೆ ಇದೆ ಎನ್ನಬಹುದು. ತದನಂತರ ಕ್ರಿ.ಶ. 12ನೆಯ ಶತಮಾನದಲ್ಲಿ ಮೌಕ್ತಿಕ ಕವಿ ರಚಿಸಿದ *ಚಂದ್ರನಾಥಾಷ್ಟಕ*ದಲ್ಲಿ ಕಡಂಗದ ವಿವರಣೆ ದೊರೆಯುತ್ತದೆ. ಹಾಲೇರಿ ಅರಸರ ಆಳ್ವಿಕೆಯ ಕಾಲಕ್ಕೆ ಕಡಂಗಗಳ ವಿವಿಧ ರೂಪಗಳ ಪರಂಪರೆಯೇ ತೆರೆದುಕೊಳ್ಳುತ್ತದೆ. ಮುಂದೆ ಮುದ್ದರಾಜನ ಕಾಲದಲ್ಲಿ ನಾಡು ವಿಂಗಡಣೆಯಾದ ಸಂದರ್ಭದಲ್ಲಿ ಗಡಿಗಳನ್ನು ಗುರುತಿಸಲು ಕಡಂಗಗಳನ್ನು ಬಳಸಲಾಗಿದೆ.

ಕೊಡಗನ್ನು 49 ವರ್ಷಗಳ ಕಾಲ ಆಳಿದ ಕೊಡಗಿನ ಪ್ರಮುಖ ರಾಜರಲ್ಲಿ ಒಬ್ಬರಾದ ಸಿರಿಬಾಯಿ ದೊಡ್ಡ ವೀರಪ್ಪನ ಕಾಲದಲ್ಲಿ ರಕ್ಷಣೆಗೆ ಕಡಂಗಗಳನ್ನು ತೆಗೆಸಿದ ವಿಚಾರ ರಾಜೇಂದ್ರನಾಮೆಯಿಂದ ತಿಳಿದುಬರುತ್ತದೆ. "ಈಚೆಗೆ ದೊಡ್ಡವೀರಪ್ಪ ಒಡೆಯರವರು 18 ವರುಷ ಪರಿಯಂತರ ಕೊಡಗಿನ ರಾಜ್ಯದ ಒಳಗೆ ಯಾವತ್ತು ಕಡಂಗ ಕಂದುಕ ಮುಂತಾಗಿ ತೆಗೆಸಿ ಆಳ್ವೇರಿ ಒಕ್ಕ ಬಾಗಿಲು ಮುಂತಾಗಿ ತಯಾರು ಮಾಡಿಸಿ, ಈ ರಾಜ್ಯದಲ್ಲಿ ಇರುವ ಜಗಳದ ಅಗಳು ಮುಂತಾಗಿ ತೆಗೆಸಿ, ಕೊಡಗಿನ ರಾಜ್ಯವನ್ನು ಬಂದೋಬಸ್ತು ಮಾಡಿಕೊಂಡು ಸ್ವಸ್ಥಳದಲ್ಲಿ ರಾಜ್ಯಭಾಗ ಮಾಡಿಕೊಂಡು ಇರುತ್ತಾ ಇದ್ದಲ್ಲಿ"[7] ಎನ್ನುವ ಉಲ್ಲೇಖವು ದೊಡ್ಡವೀರಪ್ಪ ರಾಜನ ಕಾಲಘಟ್ಟದಲ್ಲಿ ಕಡಂಗಗಳ ನಿರ್ಮಾಣ ಕಾರ್ಯ ಸತತವಾಗಿ ನಡೆಯುತ್ತಿತ್ತು ಎಂಬುದನ್ನು ಸೂಚಿಸುತ್ತದೆ.

– 3 –

ಕಡಂಗಗಳ ಮಹತ್ವವನ್ನು ಅರಿಯುವ ಮೊದಲು ಅವುಗಳ ಸ್ವರೂಪ-ರಚನೆಯನ್ನು ಅರ್ಥಮಾಡಿಕೊಳ್ಳಬೇಕು. ಕಡಂಗಗಳಲ್ಲಿ ಕೆಲವು ಆಳ, ಅಗಲ, ಉದ್ದ, ಗಾತ್ರಗಳಲ್ಲಿ ದೊಡ್ಡವೆನಿಸಿದರೆ ಕೆಲವು ಚಿಕ್ಕವು. ಕಡಂಗಗಳನ್ನು ಆಳವಾದ ಕಂದಕ ತೋಡಿ ಅದರ ಬದಿಗೆ ಅಗೆದ ಮಣ್ಣನ್ನು ರಾಶಿಹಾಕಿ ರೂಪಿಸಲಾಗುತ್ತದೆ. ಬೆಟ್ಟ, ಗುಡ್ಡ, ಕಾಡು, ಊರು, ಮನೆಗಳನ್ನು ಸುತ್ತುವರಿದ ಕಡಂಗಗಳು ಮೈಲುಗಟ್ಟಲೆ ಹಬ್ಬಿರುವುದುಂಟು. ಇವು ಬೆಟ್ಟ ಶಿಖರಗಳನ್ನು ಸುತ್ತುವರಿದಿರುವುದನ್ನು ಕಾಣಬಹುದಾಗಿದೆ. ಕಡಂಗಗಳ ವೈವಿಧ್ಯತೆಯನ್ನು ಅರಿಯಲು ಮೇಂದಲೆ ನಾಡಿನ[8] ಕಡಂಗಗಳ ಮತ್ತು ಕಿಗ್ಗಟ್ಟು ನಾಡಿನ ಕಡಂಗಗಳ ರಚನೆಯನ್ನು ಗಮನಿಸಬಹುದು. ಮೇಂದಲೆ ನಾಡಿನ ಕಡಂಗಗಳು ಆಳವಾಗಿದ್ದು, ವಿಶಾಲ ರಚನೆ ಹೊಂದಿವೆ. ಮೇಂದಲೆ ನಾಡಿನ ಕಡಂಗಗಳು ಸಮಗ್ರ ರಚನೆಯಲ್ಲಿ ಏಕರೂಪತೆ ಸಾಧಿಸಿರುವುದು ವಿಶೇಷ. ಆದರೆ ಕಿಗ್ಗಟ್ಟು ನಾಡಿನಲ್ಲಿ[9] ಕಡಂಗಗಳು ಗಾತ್ರದಲ್ಲಿ ಚಿಕ್ಕದಾಗಿವೆ.

ಕಡಂಗಗಳ ಸಮಗ್ರ ರಚನೆಯಲ್ಲಿ ಏಕರೂಪತೆ ಕಾಣಬರುವುದಿಲ್ಲ. ಕಡಂಗಗಳ ಸ್ವರೂಪವು ಅವುಗಳ ಭೌಗೋಳಿಕ ಮೇಲ್ಮೈ ಲಕ್ಷಣವನ್ನು ಆದರಿಸಿರುತ್ತದೆ ಎಂಬುದನ್ನು ಗಮನಿಸಬಹುದು.

ಕಡಂಗಗಳು ತಮ್ಮದೇ ಆದ ದ್ವಾರಗಳನ್ನು ಹೊಂದಿರುತ್ತವೆ. ಕಡಂಗಗಳ ಹರವು ಮತ್ತು ಅವಶ್ಯಕತೆಗಳು ಅವುಗಳ ದ್ವಾರಗಳನ್ನು ನಿರ್ಧರಿಸುತ್ತವೆ. ಕಡಂಗಗಳನ್ನು ಪ್ರವೇಶಿಸುವ ಇಲ್ಲವೆ ಕಡಂಗಗಳನ್ನು ದಾಟುವ ದ್ವಾರ ಒರಟು ಕಲ್ಲಿನಿಂದ ನಿರ್ಮಿಸಿದ ತೆರೆದ ಬಯಲು ಭಾಗವಾಗಿರುತ್ತದೆ. ಇಲ್ಲವೆ, ಸ್ವಾಭಾವಿಕವಾಗಿಯೂ ದ್ವಾರಗಳು ನೆಲೆಗೊಂಡಿರುತ್ತವೆ.

ಕೊಡಗಿನಲ್ಲಿ ಹಿಂದಿನಿಂದಲೂ ಕಡಂಗಗಳಿದ್ದುವಾದರೂ ದೊಡ್ಡವೀರಪ್ಪನ ಕಾಲದಲ್ಲಿ ಅನೇಕ ಹೊಸ ಕಡಂಗಗಳು ನಿರ್ಮಾಣಗೊಂಡವು. ಈ ನೂತನ ಕಡಂಗಗಳು ಹಾಲೇರಿಯ ಆರಂಭದ ದೊರೆಗಳು ನಿರ್ಮಿಸಿದ ಕಡಂಗಗಳ ಮುಂದುವರಿದ ರೂಪಗಳಾಗಿದ್ದವು. ಕೊಡಗಿನ ಕಡಂಗಗಳನ್ನು ಭದ್ರಗೊಳಿಸುವಲ್ಲಿ ಕೊಡಗಿನ ಅರಸರ ಪಾತ್ರ ಪ್ರಧಾನವಾಗಿದ್ದು ದೊಡ್ಡ ವೀರಪ್ಪನ ಕಾಲದಲ್ಲಿ ರಚಿತವಾದ ಕಡಂಗಗಳು ಬಕ್ಕ ದ್ವಾರಗಳನ್ನು ಹೊರತು ಉಳಿದೆಡೆ ಕಡಂಗಗಳನ್ನು ಹತ್ತಲಾಗಲಿ, ಇಳಿಯಲಾಗಲಿ ಕಷ್ಟವಾಗುತ್ತಿತ್ತು. ದಾರಿ ಸೇರುವ ದ್ವಾರಗಳಲ್ಲಿ ಉಕ್ಕಡ (ರಕ್ಷಣಾ ಠಾಣೆ) ಗಳಿರುತ್ತಿದ್ದವು. ಅಂದಿನ ಕಾಲದ ತಂತ್ರಜ್ಞರುಗಳು ರೂಪಿಸಿದ ಈ ರಕ್ಷಣಾ ಕಡಂಗಗಳು ತೀರ ಸರಳ ಹಾಗೂ ಸಹಜ ರೀತಿಯದ್ದಾಗಿದ್ದವು.

ಕಡಂಗಗಳ ಶರೀರದ ಆಕಾರವು ವಿಶಿಷ್ಟ ರಚನೆಯದಾಗಿರುತ್ತದೆ. ಅಂದಿನ ಅಗತ್ಯಕ್ಕೆ ತಕ್ಕಂತೆ, ನಾಡಿನ ಪರಿಸರಕ್ಕೆ ಅನುಗುಣವಾಗಿ ಅಸ್ತಿತ್ವ ಪಡೆದ ಕಡಂಗಗಳು ಕೊಡಗಿನ ಜನರಿಗೆ ಅನುಕೂಲಕರವಾಗಿದ್ದವು. "ಕಡಂಗಗಳಲ್ಲಿ ವಿವಿಧ ಬಗೆಗಳಿವೆ. ಮನೆ, ಅರಮನೆ, ಬನ(ಕಾಡು)-ಬಾಣೆ, ಗದ್ದೆ, ಗ್ರಾಮ, ನಾಡು, ಕೋಟೆ ಇತ್ಯಾದಿಗಳ ಸುತ್ತಲು ಕಟ್ಟಿದ ಕಡಂಗಗಳಿವೆ, ಅರಸರು ಕಟ್ಟಿದ ರಕ್ಷಣಾತ್ಮಕ ಉದ್ದೇಶದ ಅರಮನೆ ಕೋಟೆಯ ಕಡಂಗಗಳಿಗೆ ಹೋಲಿಸಿದರೆ ಉಳಿದ ರಚನೆಯವು ಸರಳೀಕೃತ ರೂಪಗಳಾಗಿ ಕಾಣುತ್ತವೆ" ಎಂಬ ಎಂ.ಜಿ. ನಾಗರಾಜ್ ರವರು ಅಭಿಪ್ರಾಯ ಒಪ್ಪತಕ್ಕದಾಗಿದೆ.[10]

ಅರಮನೆಕಡಂಗ, ಪೊಟ್ಟಕಡಂಗ, ತೋರುಕಡಂಗ, ಹೂಕಡಂಗ, ಸಾಕ್ಷಿಕಡಂಗ, ಹದ್ದುಬಸ್ತಕಡಂಗ, ಸರಹದ್ದುಕಡಂಗ ಮೊದಲಾದ ಕಡಂಗಗಳನ್ನು ನಾಗರಾಜ್‌ರವರು ಉಲ್ಲೇಖಿಸಿದರೂ ಒಟ್ಟಾರೆಯಾಗಿ ಕೊಡಗಿನಾದ್ಯಂತ ಕಂಡುಬರುವ ಕಡಂಗಗಳ ಲಕ್ಷಣಗಳನ್ನು ಗಮನಿಸಿ ಮುಖ್ಯವಾಗಿ ಮೂರು ರೀತಿಯ ಕಡಂಗಗಳೆಂದು ವಿಂಗಡಿಸಬಹುದು.

1. ಐನ್‌ಮನೆ ಕಡಂಗಗಳು ಮತ್ತು ಜಮೀನು ಕಡಂಗಗಳು ಮತ್ತು ರಕ್ಷಣಾತ್ಮಕ ಕಡಂಗಗಳು
2. ಅರಮನೆ / ನಾಡು ಕಡಂಗಗಳು ಮತ್ತು ರಕ್ಷಣಾತ್ಮಕ ಕಡಂಗಗಳು
3. ಊರು ಕಡಂಗಗಳು, ದೇವನೆಲೆ ಕಡಂಗಗಳು ಮತ್ತು ಸರಹದ್ದು ಕಡಂಗಗಳು

ಐನ್‌ಮನೆ ಕಡಂಗಗಳು ಮತ್ತು ಜಮೀನು ಕಡಂಗಗಳು : ಐನ್‌ಮನೆ ಕಡಂಗಗಳು ಸರಳ ರೂಪದಲ್ಲಿ ರಚನೆಗೊಂಡಿದ್ದು ಕಿರು ದಿಬ್ಬದ ಬದಿಯಲ್ಲಿ ತಗ್ಗು ತೋಡುವುದರಿಂದ ತಯಾರಾಗುತ್ತಿದ್ದವು. ಇವು ಐನ್ ಮನೆಯ ಸುತ್ತ ಇರುತ್ತಿದ್ದವು. ಇವುಗಳು ಐನ್ ಮನೆ ಮತ್ತು ಕಾಡುಗಳ ನಡುವಣ ನೆಲೆಗಳಾಗಿದ್ದವು. ಈ ಒಕ್ಕಒಕ್ಕಗಳ ನಡುವಿನ ಗಡಿಗಳಾಗಿಯೂ ರೂಪುಗೊಂಡವು. ಎರಡು ಒಕ್ಕಗಳು ಹೊಂದಿರುವ ಜಮೀನುಗಳ ಸರಹದ್ದುಗಳನ್ನು ನಿರ್ಧರಿಸಲು ಈ ರೀತಿಯ ಕಡಂಗಗಳನ್ನು ತೋಡಲಾಗುತ್ತಿತ್ತು. ಬ್ರಿಟಿಷರು ಕೊಡಗಿನಲ್ಲಿ

ಕಾಫಿ ತೋಟಗಳನ್ನು ಪ್ರಾರಂಭ ಮಾಡುವ ಮೊದಲು ಮತ್ತು ಆಧುನಿಕ ಭೂಮಾಪನ ವಿಧಾನವನ್ನು ಅನುಸರಿಸುವ ಮುನ್ನ ಭೂಮಿಯ ಒಡೆತನವನ್ನು ನಿಗದಿಮಾಡಿಕೊಳ್ಳುವ ಸಲುವಾಗಿ ಎರಡು ಒಕ್ಕಗಳ ಜಮೀನುಗಳ ಮಧ್ಯೆ ಕಡಂಗಗಳನ್ನು ತೆಗೆಯಲಾಗುತ್ತಿತ್ತು, ಇಂತಹ ಕಡಂಗಗಳನ್ನು ಇವತ್ತಿಗೂ ಕೊಡಗಿನಾದ್ಯಂತ ಕಾಣಬಹುದು

ಒಕ್ಕ ಸಂಬಂಧಿ ಕಡಂಗಗಳು ಸರಳ ರೂಪದ ರಚನೆಗಳಾಗಿದ್ದು 'ಕುಂಡೋಣಿ' ಎಂದೂ ಕರೆಯಲ್ಪಡುತ್ತವೆ. ಇವು ಮಣ್ಣಿನ ಕಿರುದಿಬ್ಬದ ಬದಿಗೆ ಓಣಿರೂಪದ ತಗ್ಗು ತೋಡುವುದರಿಂದಾದುದಾಗಿವೆ. ಒಕ್ಕಗಳ ಆಸ್ತಿಗಳ ಸುತ್ತ ಇಂತಹ ಕಡಂಗಗಳು ಇರುತ್ತವೆ. ಕೊಡಗಿನಲ್ಲಿ ಮಳೆ ಹೆಚ್ಚಿರುವುದರಿಂದ ಮಳೆಯ ನೀರು ಮನೆಯೊಳಗೆ ಹರಿಯದೆ ಕಡಂಗದ ಮೂಲಕ ಹರಿದು ಹೋಗುತ್ತಿದ್ದುದರಿಂದ ರಕ್ಷಣೆ ಸಾಧ್ಯವಾಗುತ್ತಿತ್ತು. ಅಲ್ಲದೆ ಸಾಕು ಪ್ರಾಣಿಗಳನ್ನು ಕಾಡಿನ ಪ್ರಾಣಿಗಳಿಂದ ರಕ್ಷಿಸುವಲ್ಲಿಯೂ ಕಡಂಗಗಳು ಸಹಕಾರಿಯಾಗಿದ್ದವು. ಒಕ್ಕ ಸಂಬಂಧಿ ಕಡಂಗಗಳು ಅರಸರು ರೂಪಿಸಿದ ಅರಮನೆ ಕಡಂಗಗಳ ನಕಲುಗಳಂತೆ ಕಾಣಬರುತ್ತವೆ. ಐನ್ ಮನೆ ಕಡಂಗಗಳು ಮನೆಯನ್ನು ಸುತ್ತುವರಿದಿದ್ದು ಒಕ್ಕ ಬಾಗಿಲಿಗೆ ಸಂಪರ್ಕ ಪಡೆದಿದ್ದವು.

ಆದರೆ ಕೊಡಗಿನಾದ್ಯಂತ ಆಸ್ತಿ ಪಾಸ್ತಿಗಳ ಮಧ್ಯೆ, ಒಕ್ಕ ಒಕ್ಕಗಳ ಮಧ್ಯೆ ಸರಹದ್ದು ನಿರ್ಧಾರ ಮಾಡುವ ಸಣ್ಣ ಗಾತ್ರದ ಕಡಂಗಗಳು ಪ್ರತಿ ಮನೆಗಳ ಸುತ್ತಲೂ ಇರುತ್ತದೆ. ಈ ಕಡಂಗಗಳು ಗಾತ್ರದಲ್ಲಿ ಸಣ್ಣದಾಗಿದ್ದು ಭೂ ಅಳತೆ ಮಾಡುವ ಸರ್ವೆ ಇಲಾಖೆಯವರಿಗೆ ಅನುಕೂಲವಾಗಿದೆ. ಸುಮಾರು 10–15 ಅಡಿ ಅಥವಾ 20 ಅಡಿ ಆಳವಾಗಿರುವ ಈ ಕಡಂಗಗಳು ಸುಮಾರು 8–10 ಅಡಿ ಅಗಲವಾಗಿರುತ್ತದೆ. ಈ ಕಡಂಗಗಳು ತೋಟ ಮತ್ತು ಗದ್ದೆಗಳಿಗೆ ಬಸಿಕಾಲುವೆಯ ರೂಪದಲ್ಲಿಯೂ, ದನಕರುಗಳ ಸಂಚಾರಕ್ಕೆ ಅವಶ್ಯಕವಾಗಿಯೂ ಕೆಲಸ ಮಾಡುತ್ತವೆ. ಇಂತಹ ಕೆಲವು ಸಣ್ಣಗಾತ್ರದ ಕಡಂಗಗಳು ಕೆಲವು ಕುಟುಂಬಗಳ ಮಧ್ಯೆ ವ್ಯಾಜ್ಯಗಳನ್ನು ಇತ್ಯರ್ಥ ಮಾಡಲು ಅನುಕೂಲವಾದ ಪಾತ್ರವಹಿಸಿದ್ದು ಸಾಮಾಜಿಕ ಸಾಮರಸ್ಯಕ್ಕೆ ಮತ್ತು ಸಂಬಂಧಗಳನ್ನು ಬೆಸೆಯುವ ನಿಟ್ಟಿನಲ್ಲಿ ಕೆಲಸ ಮಾಡಿರುತ್ತವೆ ಎನ್ನುವುದು ವಿಶಿಷ್ಟವಾಗಿದೆ. ವೈಜ್ಞಾನಿಕವಾಗಿ ಇಂತಹ ಕಡಂಗಗಳು ಕೊಡಗಿನ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತವೆಂಬುದನ್ನು ಮನಗಾಣಬಹುದಾಗಿದೆ.

ಅರಮನೆ / ನಾಡು ಕಡಂಗಗಳು ಮತ್ತು ರಕ್ಷಣಾತ್ಮಕ ಕಡಂಗಗಳು: ಅರಮನೆ ಕಡಂಗಗಳು ಕೋಟೆಗೆ ಹೊಂದಿಕೊಂಡಂಥವು. ಎತ್ತರದ ದಿಬ್ಬ ಹಾಗೂ ತಗ್ಗಿನ ಕಂದಕವೂ ಸೇರಿ ಹೆಚ್ಚಿನ ಬಂದೋಬಸ್ತಿನದಾಗಿರುತ್ತಿದ್ದವು. 30 ರಿಂದ 60 ಅಡಿ ಎತ್ತರದವರೆಗೆ ಇದ್ದು 10 ಅಡಿಗೂ ಎತ್ತರದ ದಪ್ಪ ಮೇಲು ಬದಿ ದುಂಡಾಕಾರದ ಸುತ್ತುವರಿದ ರಚನಾ ವಿನ್ಯಾಸ ಹೊಂದಿರುತ್ತಿದ್ದವು. ಮಡಿಕೇರಿಯ ಅರಮನೆಯನ್ನು ಮೂಲತಃ ಮುದ್ದುರಾಜ ವಡೆಯರವರು ಕಟ್ಟಿಸಿದ್ದು 1680ರಲ್ಲಿ. ಟಿಪ್ಪು ಸುಲ್ತಾನನು ಮಡಿಕೇರಿಯನ್ನು ಆಕ್ರಮಿಸಿ ತನ್ನ ವಶದಲ್ಲಿ ಮಡಿಕೇರಿ ಕೋಟೆಯನ್ನು 1790ರ ವರೆಗೆ ಇಟ್ಟುಕೊಂಡಿದ್ದ ಸಂದರ್ಭದಲ್ಲಿ ಅರಮನೆ ಮತ್ತು ಕೋಟೆ ಅವರಣವನ್ನು ಕಲ್ಲಿನಿಂದ ಕಟ್ಟಿಸಿದನು. ಕೋಟೆಯ ಅವರಣದ ಸುತ್ತಲೂ ಕಡಂಗಗಳನ್ನು ಅಥವಾ ಕಂದಕಗಳನ್ನು ತೋಡಲಾಯಿತು ಎಂದು ರಿಕ್ಟರ್‌ರವರು ಅಭಿಪ್ರಾಯ ಪಡುತ್ತಾರೆ. ಹಾಗೆಯೇ ನಾಲ್ಕುನಾಡು ಅರಮನೆಯ ಸುತ್ತಲೂ ಕಡಂಗಗಳು

ನಿರ್ಮಾಣವಾಗಿರುವುದನ್ನು ಇವತ್ತಿಗೂ ಕಾಣಬಹುದು ಎನ್ನುತ್ತಾರೆ.[11] ಹಾಗಾಗಿ ಆ ಕಾಲಘಟ್ಟದಲ್ಲಿ ಕಡಂಗಗಳನ್ನು ನಿರ್ಮಿಸುವುದು ಆಡಳಿತ ಸೂತ್ರಹಿಡಿದ ರಾಜರಿಂದ ತೊಡಗಿ ಸಾಮಾನ್ಯ ಕೃಷಿಕ ಜಮೀನುದಾರನವರೆಗೂ ಅನಿವಾರ್ಯವಾಗಿತ್ತು ಎನ್ನಬಹುದು.

ಕಡಂಗಗಳು ಕಾಡುಗಳ ನಡುವೆ ಇರುವ ಕಾರಣ ಸುಮಾರು ಎತ್ತರದ ಮಣ್ಣಿನ ದಿಬ್ಬದಿಂದ ಸುತ್ತುವರಿದ ರಚನೆಗಳಾಗಿರುತ್ತವೆ. ದೇವರ ಬನ, ದೇವರ ಕಾಡು, ಬನ, ಬಾಣೆ ಮುಂತಾದವುಗಳ ಸುತ್ತಲೂ ಇವು ಕಾಣಬರುತ್ತವೆ. ಕಡಂಗಗಳಲ್ಲಿ ಅತಿ ಪ್ರಮುಖವಾಗಿ ಕಾಣಿಸಿಕೊಳ್ಳುವುದೆಂದರೆ ಅರಮನೆ ಕಡಂಗ. ಈ ಕಡಂಗಗಳು ಅರಸರ ಅರಮನೆ ಸುತ್ತಲೂ ರಕ್ಷಣೆಯ ಕಂದಕ ಮತ್ತು ಗೋಡೆಗಳಾಗಿ ಕೆಲಸ ಮಾಡುತ್ತವೆ. ಅರಮನೆಗೆ ಹೋಗುವ ದಾರಿಗಳೂ ಕೆಲವೊಮ್ಮೆ ಈ ರೀತಿಯ ಕಂದಕಗಳ ಮೂಲಕವೇ ಆಗಿರುತ್ತವೆ. ಅರಮನೆಯಿಂದ ಇನ್ನೊಂದು ಅರಮನೆಗೆ ಹೋಗುವ ದಾರಿ, ವ್ಯಾಪಾರ ವಹಿವಾಟಿಗಾಗಿ ರಾಜ ಪರಿವಾರ ಅಥವಾ ರಾಜ್ಯದ ಪ್ರಜೆಗಳು ಹೋಗುವ, ಬರುವ ಹೆದ್ದಾರಿಗಳು ಅರಮನೆ ಕಡಂಗಗಳ ಸಾಲಿಗೆ ಸೇರಿಕೊಳ್ಳುತ್ತವೆ. ಇನ್ನು ಅರಮನೆ ಕಡಂಗಗಳು ಆಳವಾಗಿಯೂ, ಅಗಲವಾಗಿಯೂ ಹೆದ್ದಾರಿಯನ್ನು ಹೋಲುವಂತಹದ್ದಾಗಿದ್ದರೂ, ಆ ಕಾಲದ ಸಂಪರ್ಕ ಮಾಧ್ಯಮಗಳಾದ ಕುದುರೆ ಹಾಗೂ ಎತ್ತುಗಳ ಮೇಲೆ ಸಾಗಣೆ ಮಾಡಲು ಅನುಕೂಲಕರವಾಗಿದ್ದವು. ಕಡಂಗಗಳ ತಳಭಾಗದಿಂದ ಮೇಲಿನ ದಿಣ್ಣೆಗೆ ಸುಮಾರು 40–60 ಅಡಿಗಳ ಎತ್ತರ ಸಾಧಾರಣವಾಗಿ ಕಂಡುಬರುತ್ತದೆ. ಕಡಂಗಗಳು ಸಾಧಾರಣವಾಗಿ ಕಾಡು ಮತ್ತು ದಿಣ್ಣೆಗಳನ್ನು ಸೀಳಿಕೊಂಡು ಬಯಲು ಪ್ರದೇಶಕ್ಕೆ ಏಕಾಏಕಿ ಬಂದು ಮುಟ್ಟುವಂತಿರುತ್ತವೆ.

ಬಯಲು ಮುಗಿದ ತಕ್ಷಣ ತಟ್ಟನೆ ಮತ್ತೊಂದು ಕಡಂಗದೊಳಗೆ ನುಸುಳಿ ಅದರ ಇನ್ನೊಂದು ಕೊನೆಯಲ್ಲಿ ಭತ್ತ ಗದ್ದೆಯ ಮೂಲೆಗೋ ಅಥವಾ ಮತ್ತೊಂದು ಬಯಲು ಪ್ರದೇಶಕ್ಕೊ ಪ್ರವೇಶ ಪಡೆಯುತ್ತವೆ. ಕೊಡಗಿನಾದ್ಯಂತ ಮೈಲುಗಟ್ಟಲೆ ಈ ರೀತಿ ಕಡಂಗಗಳು ಕಾಣುತ್ತವೆ.

ಅರಮನೆ ಕಡಂಗಗಳ ಇನ್ನೊಂದು ಬಗೆ ಎಂದರೆ ಕಾಳಗ ಕಡಂಗಗಳು. ಬಹುಶಃ ರೆ.ರಿಕ್ತರ್‌ರವರು ಇದನ್ನೇ 'ವಾರ್ ಟ್ರೆಂಚಸ್' ಎಂದು ಕರೆದಿರಬಹುದು. ಇಂತಹ ಕಡಂಗಗಳು ಗೆರಿಲ್ಲಾ ಕಾಳಗಕ್ಕೆ ಅನುಕೂಲಕರವಾಗಿತ್ತು. ಕೊಡಗಿನಲ್ಲಿ ನಾಯಕರ ಕಾಲಘಟ್ಟದಲ್ಲಿ ಹಾಗೂ ಲಿಂಗಾಯಿತ ಅರಸ ಕಾಲಘಟ್ಟದಲ್ಲಿ ಕಂಡುಬಂದಂತಹ ಘರ್ಷಣೆಗಳನ್ನು ಯುದ್ಧ ಎಂದು ಕರೆಯಲು ಸಾಧ್ಯವಿಲ್ಲ.

ಬಯಲು ಸೀಮೆಗಳಲ್ಲಿ ಕಂಡು ಬಂದಂತಹ ಘೋರ ಕದನಗಳು ಕೊಡಗಿನಲ್ಲಿ ನಡೆದಿಲ್ಲ. ಆದರೆ ಗೆರಿಲ್ಲಾ ಮಾದರಿಯ ಯುದ್ಧಗಳು ಕೊಡಗಿನಲ್ಲಿ ಸರ್ವೆ ಸಾಧಾರಣವಾಗಿ ತೀರ ಇತ್ತೀಚಿನವರೆಗೂ ಅಂದರೆ ಬ್ರಿಟಿಷ್ ಆಡಳಿತಕ್ಕೆ ಕೊಡಗು ಒಳಪಡುವವರೆಗೂ ನಡೆಯುತ್ತಿತ್ತು. ಎದುರಾಳಿಯನ್ನು ಅಡಗಿನಿಂತು ಸಂಚಿನಿಂದ ಕೊಲ್ಲುವುದು ಸ್ಥಳೀಯ ಯುದ್ಧ ತಂತ್ರಗಳಲ್ಲಿ ಒಂದು. ಹಾಗಾಗಿ ಕಡಂಗಗಳ ನಿರ್ಮಾಣ ಆ ಕಾಲಘಟ್ಟದಲ್ಲಿ ತುಂಬ ಅನಿವಾರ್ಯವಾಗಿತ್ತು. ಶತ್ರುಗಳನ್ನು ಏಕಾಏಕಿ ಮುಖಾಮುಖಿಯಾಗಿ ನಾಶಪಡಿಸುವ ಪ್ರಕ್ರಿಯೆಯಲ್ಲಿ ಕಡಂಗಗಳು ತುಂಬಾ ಉಪಯುಕ್ತವಾಗಿ ಪರಿಣಮಿಸುತ್ತಿದ್ದವು. ಅನೇಕ ಕಾಳಗಗಳು ಕಡಂಗಗಳಲ್ಲೆ ನಡೆಯುತಿತ್ತು ಎಂಬ ಪ್ರತೀತಿ ಇದೆ. ಹಾಗಾಗಿ ಕೊಡಗಿನಲ್ಲಿ

ಇಂತಹ ಕಾಳಗಗಳನ್ನು 'ಚದಿಪ' ಎಂದು ಕರೆಯುತ್ತಾರೆ. 'ಚದಿಪ' ಎಂದರೆ ಶತ್ರುವನ್ನು ಮೋಸಮಾಡಿ ಕೊಲ್ಲುವುದು, ನಂಬಿಸಿ ಕೊಲ್ಲುವುದು ಎಂದರ್ಥ. ಇವತ್ತಿಗೂ 'ಚದಿಪ' ಎನ್ನುವ ಪದ ಕೊಡಗಿನಲ್ಲಿ 'ನಂಬಿಕೆದ್ರೋಹ' ಎಂಬುದಕ್ಕೆ ಪರ್ಯಾಯವಾಗಿ ಬಳಸಲಾಗುತ್ತಿದೆ.

ಸಾಕಷ್ಟು ಮದ್ದುಗುಂಡು ಸಾಮಗ್ರಿಗಳನ್ನು ತುಂಬಿಸಿಕೊಂಡು ಯುದ್ಧ ಮಾಡಲು ಅನುಕೂಲವಾಗುವಂತಹ ರೀತಿಯಲ್ಲಿ ರಚಿಸಲಾಗಿತ್ತು. ಎಲ್ಲಾ ಅರಮನೆ ಕಡಂಗಗಳ ಬಕ್ಕ ಬಾಗಿಲುಗಳಲ್ಲಿಯೂ ಅರಸರ ಕಾಲದಲ್ಲಿ ಪಹರೆಯವರು ಇರುತ್ತಿದ್ದರು. ಮತ್ತು ಈ ಸ್ಥಳವು ಕರಿಕಲ್ಲಿನ ಬಾಗಿಲಿನ ರೂಪದಲ್ಲಿರುತ್ತಿತ್ತು.

ಊರು ಕಡಂಗಗಳು, ದೇವನೆಲೆ ಕಡಂಗಗಳು ಮತ್ತು ಸರಹದ್ದು ಕಡಂಗಗಳು: ಗ್ರಾಮ ಹಾಗೂ ನಾಡಿನ ಸುತ್ತ ಇರುವ ಕಡಂಗಗಳಿಗೆ 'ಸರಹದ್ದು ಕಡಂಗ'ಗಳೆಂದು ಹೆಸರು. ಇವು ಗಂಭೀರ ರಚನಾ ವಾಸ್ತು ಹೊಂದಿದವುಗಳಾಗಿವೆ. ನಾಡು ನಾಡುಗಳ ಸರಹದ್ದುಗಳನ್ನು ನಿರ್ಧರಿಸುವಲ್ಲಿ ಇವು ಮಹತ್ವದ ಪಾತ್ರವಹಿಸುತ್ತಿದ್ದವು.

ಉದಾಹರಣೆಗೆ ಕಡಿಯತ್ ನಾಡಿನಿಂದ ಕೇರಳಕ್ಕೆ ಹೋಗುವ ಹಾದಿಯಲ್ಲಿ ಉಡುಂಬೆ ಹೊಳೆ ಎದುರಾಗುತ್ತದೆ. ಕೇರಳ ಮತ್ತು ಕೊಡಗಿನ ಗಡಿಯಾಗಿ ಉಡುಂಬೆ ಹೊಳೆ ಇದ್ದು ಕಡಂಗಗಳು ಇಲ್ಲಿ ಕೊನೆಗೊಳ್ಳುತ್ತವೆ. ಕಡಂಗಗಳು ಕೊನೆಗೊಳ್ಳುವ ಭಾಗದಲ್ಲಿ ಕಲ್ಲಿನ ಎತ್ತರದ ಜೋಡಣೆಯ ರಚನೆ ಹೊಂದಿದ್ದು ಇದನ್ನು 'ಬಕ್ಕ ಕಂಡಿ' ಎನ್ನುತ್ತಾರೆ. ಇದೇ ರೀತಿಯ ರಚನೆಯನ್ನು ಕಕ್ಕಬ್ಬೆಯಿಂದ ಕೇರಳಕ್ಕೆ ಎತ್ತು ಪೋರಾಟ ಹೋಗುವ ದಾರಿ ಅಡಿಕೆ ತೆರಿ, ಪಾಂಬ್‌ಕೊಲ್ಲಿ, ಕುಂಡುಮಲೆ ಮೂಲಕ ಬಾಯಿಕಬ್ಬೆಗೆ ಸೇರುವ ಜಾಗದಲ್ಲಿಯೂ ಕಾಣಬಹುದು. ಈ ದಾರಿಯು ಕೇರಳದ ದೇವನೆಲೆಗಳಿಗೆ ಹೋಗಲು ಇವತ್ತಿಗೂ ಬಳಸಿಕೊಳ್ಳಲಾಗುತ್ತಿದೆ. ಊರುಗಳ ಸುತ್ತಲೂ ಹಾಗೂ ಊರುಗಳ ಮಧ್ಯಭಾಗಗಳಲ್ಲಿಯೂ ಒಂದು ಕಡೆಯಿಂದ ಇನ್ನೊಂದುಕಡೆ ಹೋಗಲು ಅನುಕೂಲವಾಗಲು ಕಡಂಗಗಳನ್ನು ನಿರ್ಮಾಣವಾಗಿದ್ದನ್ನು ಗಮನಿಸಬಹುದು. ಉದಾಹರಣೆಗೆ ಕರಡ ಮತ್ತು ಅರಪಟ್ಟು ಗ್ರಾಮದ ಸರಹದ್ದಿನಿಂದ ಪಾಲಂಗಾಲದೆ ಪೋಚೋಡ ಕೇರಿಯ ಮೂಲಕ ಗ್ರಾಮದ ಮಧ್ಯೆ ಕರಿನೆರವಂಡ ಒಕ್ಕದ ಜಮೀನುಗಳನ್ನು ದಾಟಿ ತೋರಬೆಟ್ಟದವರೆಗೆ ಹೋಗುವ ಕಡಂಗಗಳ ಅವಶೇಷಗಳನ್ನು ಇಂದಿಗೂ ಕಾಣಬಹುದುದಾಗಿದೆ. ಈ ಕಡಂಗಗಳು ಈ ಊರುಗಳ ದೇವನೆಲೆಗಳ ನಡುವಿನ ಕೊಂಡಿಯೂ ಆಗಿತ್ತು.

– 4 –

ಕೊಡಗಿನಲ್ಲಿ ಕಡಂಗ ನಿರ್ಮಿತಿಯು ನಾಯಕರ ಆಳ್ವಿಕೆಯ ಕಾಲಕ್ಕೂ ಪೂರ್ವದಲ್ಲಿ ಇದ್ದಿತೆಂಬುದಕ್ಕೆ ಶಾಸನಾಧಾರಗಳನ್ನು ಗಮನಿಸಿದ್ದೇವೆ. ಕಾಲಾಂತರಗಳಲ್ಲಿ ಕಡಂಗಗಳು ತಮ್ಮ ಮೂಲ ರೂಪ ರಚನೆ–ವಿನ್ಯಾಸ, ಉದ್ದೇಶ, ಉಪಯುಕ್ತತೆಗಳಲ್ಲಿ ವ್ಯತ್ಯಯಗಳನ್ನು ಹೊಂದುತ್ತಾ ಹಲವು ಮಾರ್ಪಾಡುಗಳಿಗೆ ಕಾರಣವಾಗಿವೆ. ಶತ್ರುಗಳಿಂದ ರಕ್ಷಣೆ, ಕೃಷಿ, ನೀರಾವರಿ ವ್ಯವಸ್ಥೆ, ವ್ಯಾಪಾರ, ಸಂಪರ್ಕ ಮಾರ್ಗ, ದೇವತಾಕಾರ್ಯ, ದನಕರುಗಳ ಸಂಚಾರ, ಆಡಳಿತದ ಅನುಕೂಲ, ಆಸ್ತಿ–ಪಾಸ್ತಿಗಳ ವಿಂಗಡಣೆ, ವನ್ಯ ಪ್ರಾಣಿಗಳಿಂದ ರಕ್ಷಣೆ ಮೊದಲಾದ ಉಪಯುಕ್ತ ಉದ್ದೇಶಗಳಿಗಾಗಿ ರೂಪುಗೊಂಡ ಕಡಂಗಗಳು ಕಾಲದಿಂದ ಕಾಲಕ್ಕೆ ಮಹತ್ವ ಪಡೆದಿವೆ.

ಒಕ್ಕ ಸಂಬಂಧಿ ಕಡಂಗಗಳು ಒಕ್ಕ ಅಥವಾ ಕುಟುಂಬವನ್ನು ಒಂದು ಭೌಗೋಳಿಕ ಪರಿಧಿಗೊಳಪಡಿಸಿ ಒಕ್ಕ ಸದಸ್ಯರನ್ನೆಲ್ಲ ಒಂದುಗೂಡಿಸಿ ಏಕತೆಯ ಭಾವವನ್ನು ಒಕ್ಕದೊಳಗೆ ಬೆಸೆಯುವಲ್ಲಿ ಮಹತ್ವದ ಪಾತ್ರವಹಿಸಿದ್ದವು. ಅಲ್ಲದೆ ಒಕ್ಕದ ಆಸ್ತಿ, ಪಾಸ್ತಿಗಳನ್ನು ತಲತಲಾಂತರಗಳಿಂದ ಉಳಿಸಿಕೊಂಡು ಬರಲು ಸಹಕಾರಿಯಾದ ಕಡಂಗಗಳು ಒಕ್ಕಗಳನ್ನು ರೂಪಿಸಿ, ರೂಪಾಂತರಿಸಿದವು. ಹಿಂದಿನಿಂದಲೂ ಹಲವು ಸಂಸ್ಕೃತಿಗಳನ್ನು ಮೈಗೂಡಿಸಿ ಕೊಂಡು ಬೆಳೆಯುತ್ತಿರುವ ಕೊಡಗು ಕಡಂಗಗಳ ಕಾರಣದಿಂದಾಗಿಯೂ ವಿಶಿಷ್ಟವಾಗಿದೆ.

ಹಾಗೆಯೇ ನಾಯಕರ ಆಡಳಿತ ಕಾಲದಲ್ಲಿ ನಾಡು-ನಾಡುಗಳ ಮಧ್ಯೆ ರಕ್ಷಣೆಯ ಕಡಂಗಗಳು ನಿರ್ಮಾಣಗೊಂಡಿದ್ದನ್ನು ಗಮನಿಸಬಹುದು. ಗ್ರಾಮದ ಸುತ್ತಲೂ ರಕ್ಷಣೆಯ ಸಲುವಾಗಿ ಕಡಂಗಗಳು ನಿರ್ಮಾಣವಾಗಿದ್ದು, ಇವು ಗಾತ್ರದಲ್ಲಿ ಅರಮನೆ ಕಡಂಗಗಳಿಂತ ಚಿಕ್ಕವಾಗಿದ್ದವು.

ವಿಶಾಲವಾದ ಊರಿನ ಮಧ್ಯ ಭಾಗದಲ್ಲಿ ದೇವತಾ ಕಾರ್ಯಗಳ ಕಾರಣಕ್ಕಾಗಿ, ದೇವಾಲಯಗಳಿಗೆ ಊರಿನವರು ಹೋಗಲು ಬರಲು ಅನುಕೂಲ ಆಗುವ ಹಾಗೆ, ಭೂತದ ಕೋಲ ಅಥವಾ ತೆರೆಯ ಎತ್ತರದ ಮುಡಿಯು ಕಾಡಿನ ಮರಗಳಿಗೆ ತಗುಲದೆ ಸುಸೂತ್ರವಾಗಿ ಸಾಗಲು ಅನುಕೂಲವಾಗುವಂತೆ ಭೂಮಿಯನ್ನು ಊರಿನವರು ಕೊರೆದು ಮಾಡಿರುವ ಕಡಂಗಗಳನ್ನು ಕೂಡ ನೋಡಬಹುದು. ಈ ರೀತಿಯ ಕಡಂಗಗಳಲ್ಲಿ ಕೆಲವೊಮ್ಮೆ ನಡೆದಾಡಲು ಅನುಕೂಲವಾಗುವ ಹಾಗೆ ಕೆಲವು ಜಾಗಗಳಲ್ಲಿ ಕಲ್ಲಿನ ಹಾಸುಗಳನ್ನು ಹಾಕಿರುವುದನ್ನು ಗಮನಿಸಬಹುದು.

20 ಅಡಿಗಳಿಗಿಂತ ಆಳವಾಗಿರುವ ಕಡಂಗಗಳಲ್ಲಿ ವರ್ಷದ 8 ತಿಂಗಳು ಸದಾ ನೀರಿನ ಬುಗ್ಗೆಗಳು ಸಣ್ಣದಾಗಿ ಹೊರಹೊಮ್ಮಿ ನೆಲಜಲದ ಪ್ರಮಾಣವು ಭೂ ಫಲವತ್ತತೆಗೆ ಅನುಕೂಲಕರವಾಗುವಂತೆ ಮಾಡಿತ್ತು. ಆದರೆ ಸುಮಾರು 25-30 ವರ್ಷಗಳಿಂದೀಚೆಗೆ ಮರಕಾಡುಗಳ ನಾಶದ ಫಲವಾಗಿ ಕಡಂಗಗಳಲ್ಲಿ ಉದ್ಭವವಾಗುತ್ತಿದ್ದ ನೀರಿನ ಬುಗ್ಗೆಗಳು ಕಾಣದಾಗಿರುವುದನ್ನು ಗಮನಿಸಬಹುದು. ಕೊಡಗಿನಲ್ಲಿ ಕೆಲವು ಶತಮಾನಗಳ ಹಿಂದೆ ಕೆರೆಗಳ ಕಲ್ಪನೆ ಅಷ್ಟಾಗಿ ಇರಲಿಲ್ಲ. ಆದರೆ ನೈಸರ್ಗಿಕವಾದ ಜಲವನ್ನು ಕೃಷಿಕಾರಣಕ್ಕಾಗಿ ಹೇಗೆ ಬಳಸಿಕೊಳ್ಳಬಹುದು ಎನ್ನುವ ವೈಜ್ಞಾನಿಕ ದೃಷ್ಟಿಕೋನ ಅಂದಿನ ಕೃಷಿಕರಿಗೆ ಇತ್ತು ಎನ್ನುವುದು ಇಂದಿನ ಆಧುನಿಕ ಕೃಷಿಕರಿಗೂ ಉತ್ತೇಜನ ಕೊಡುವಂತದ್ದಾಗಿದೆ.

– 5 –

ಬ್ರಿಟಿಷರ ಆಳ್ವಿಕೆಯ ಮುನ್ನ ಹಾಲೇರಿ ಅರಸರ ಕಾಲ ಹಾಗೂ ಅದಕ್ಕೂ ಮುನ್ನ ನಾಯಕರ ಆಡಳಿತದಲ್ಲಿ ಹರಿದು ಹಂಚಿಹೋಗಿದ್ದ ಕೊಡಗಿನಲ್ಲು ಆಳಿನಿಂದ ಅರಸನವರೆಗೆ ಪ್ರತಿಯೊಬ್ಬನಿಗೂ ರಕ್ಷಣೆಯ ಅವಶ್ಯಕತೆ ಇತ್ತು. ಆಸ್ತಿ ಪಾಸ್ತಿಯ ದೃಷ್ಟಿಯಿಂದ. ಬೆಳೆಗಳ ರಕ್ಷಣೆಯ ದೃಷ್ಟಿಯಿಂದ ಅವಶ್ಯಕವಾಗಿದ್ದಿತು. ನಾಯಕರ ಕಾಲದಲ್ಲಿ ನಾಡು ನಾಡುಗಳ ಮಧ್ಯೆ ವೈಷಮ್ಯ ವಿಪರೀತವಾಗಿತ್ತು. ವೈವಾಹಿಕ ಸಂಬಂಧಗಳನ್ನು ಬೆಳೆಸಲು ಕೂಡ ಸಮ್ಮತಿಸದಂತಹ ವೈಷಮ್ಯ ಅದಾಗಿತ್ತು. ಉದಾಹರಣೆಗೆ ಕಡಿಯತ್ತು ನಾಡು ಹಾಗೂ ಬೆಪ್ಪು ನಾಡು ಜನರು ಹಳೇ ವೈಷಮ್ಯದ ಕಾರಣ ಪರಸ್ಪರ ಹೆಣ್ಣು ಕೊಡುವುದು ತರುವುದು ಮಾಡುತ್ತಿರಲಿಲ್ಲ. ಹಾಗೆಯೇ ಕೊಡಗಿನ ಅರಸರ ಕಾಲದಲ್ಲಿ ಕೇರಳ ಮೈಸೂರು

ಕಡೆಯಿಂದ ಬರುವ ಶತ್ರುಗಳನ್ನು ಎದುರಿಸಲು ಸಿರಿಬಾಯಿ ದೊಡ್ಡವೀರಪ್ಪನ ಕಾಲದಲ್ಲಿ ಕೊಡಗು ದೇಶದಾದ್ಯಂತ ಕಡಂಗಗಳ ಅಥವಾ ಕಂದಕಗಳ ರಚನೆಯಾಯಿತು ಎಂಬುದು ತಿಳಿದು ಬರುತ್ತದೆ. ಈ ಕುರಿತು ರಿಕ್ತರ್ ಹೀಗೆ ದಾಖಲಿಸಿದ್ದಾರೆ.[12] ಈ ಕುರಿತು ರಿಕ್ತರ್ ಹೀಗೆ ದಾಖಲಿಸಿದ್ದಾರೆ:

ಕೊಡಗಿನ ಬೆಟ್ಟಗುಡ್ಡಗಳಲ್ಲಿ, ದೇಶದ ಉದ್ದಗಲಕ್ಕೂ ಕಾಣಬರುವ ಕಂದಕಗಳನ್ನು ಕಡಂಗಗಳೆಂದು ಕರೆಯುತ್ತಾರೆ. ತಮ್ಮ ಭೂಪ್ರದೇಶಗಳ ರಕ್ಷಣೆಗೋಸ್ಕರ ಈ ಕಡಂಗಗಳನ್ನು ತೆಗೆಯಲಾಗಿದೆ. ಈ ರೀತಿಯ ಕಡಂಗಗಳು ಶತಮಾನಗಳ ಹಿಂದೆಯೇ ಕೊಡಗಿನ ಪರಿಸರದಲ್ಲಿ ಕಂಡು ಬಂದಿದ್ದು, ಕೊಡಗನ್ನು 49 ವರ್ಷಗಳ ಕಾಲ ಆಳಿದ ದೊಡ್ಡ ವೀರಪ್ಪ ಅರಸನ ಕಾಲಕ್ಕೂ ಮುನ್ನವೇ ಕಡಂಗಗಳಿದ್ದವೆಂಬುದಕ್ಕೆ ರಾಜೇಂದ್ರನಾಮೆಯಲ್ಲಿ ಉಲ್ಲೇಖವಿದೆ. "ಮೊದಲು ಇದ್ದ ಕಡಂಗಗಳನ್ನು ದುರಸ್ತಿ ಮಾಡಿದಲ್ಲದೆ, ಕೊಡಗಿನಾದ್ಯಂತ ಹೊಸ ಕಡಂಗಗಳನ್ನು ಅಗೆಸಿ, ಹದ್ದು ಬಸ್ತು ಉಕ್ಕಡಗಳನ್ನು ಮಾಡಿ, ಕಾಳಗ ಕಡಂಗಗಳ ನಿರ್ಮಾಣ ಮಾಡಿ ದೇಶದ ಸುಭದ್ರತೆಯನ್ನು ಕಾಪಾಡುವ ವ್ಯವಸ್ಥೆ ಮಾಡಿದರು" ಎಂದು ರಿಕ್ಟರ್‌ರವರು ಹೇಳುತ್ತಾರೆ. ಬೆಟ್ಟಗಳ ಸುತ್ತಲೂ, ಬಯಲು ಪ್ರದೇಶಗಳಲ್ಲಿ ನೂರಾರು ಮೈಲಿಗಳವರೆಗೆ, ಬೇರೆ ಬೇರೆ ದಿಕ್ಕುಗಳಲ್ಲಿ, ವಿಭಿನ್ನ ಗಾತ್ರಗಳಲ್ಲಿ ಕಡಂಗಗಳು ಕಾಣಿಸಿಕೊಳ್ಳುತ್ತವೆ. ಮೇಂದಲೆ ನಾಡಿನ ಕಡಂಗಗಳು ದೊಡ್ಡ ಗಾತ್ರದವುಗಳಾಗಿದ್ದು, ಕಡಂಗಗಳು ಆಳವಾಗಿಯೂ, ಅಗಲವಾಗಿಯೂ ಇರುತ್ತದೆ, ಆದರೆ ಕಿಗ್ಗಟ್ಟ್‌ನಾಡಿನಲ್ಲಿ ಕಡಂಗಗಳು ಸಣ್ಣ ಗಾತ್ರದವಾಗಿರುತ್ತದೆ. ಈಗಾಗಲೇ ಹೇಳಿದಂತೆ ಇವುಗಳು ಕಾಳಗ ಕಡಂಗಗಳಾಗಿದ್ದು, ಅನೇಕ ಬಾರಿ ನಾಡು ನಾಡುಗಳ ನಡುವಿನ ಸರಹದ್ದು ಕಡಂಗಗಳೂ ಆಗಿರುತ್ತದೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನನೊಂದಿಗಿನ ಸಮರದ ಸಮಯದಲ್ಲಿ ಕೊಡಗಿನಾದ್ಯಂತ ಕಡಂಗಗಳನ್ನು ಜೀರ್ಣೋದ್ಧಾರ ಮಾಡಿ ಕಲ್ಲಿನ ಉಕ್ಕಡಗಳನ್ನು ನಿರ್ಮಿಸಲಾಯಿತು. ಈ ರೀತಿಯಲ್ಲಿ ಕಂಡು ಬರುವ ಕಡಂಗಗಳು 1834ರಲ್ಲಿ ಬ್ರಿಟಿಷರು ಕೊಡಗನ್ನು ವಶಕ್ಕೆ ತೆಗೆದುಕೊಳ್ಳುವಾಗಲು, ಅವರ ಸೈನ್ಯಕ್ಕೆ ಕೂಡ ದುರ್ಗಮವಾಯಿತು.

ಎನ್ನುವ ರಿಕ್ಟರ್‌ರವರ ಮಾತುಗಳಲ್ಲಿ ಕಡಂಗಗಳ ಉದ್ದೇಶ, ವ್ಯಾಪ್ತಿ, ಪ್ರಾಮುಖ್ಯತೆ ಮತ್ತು ಚರಿತ್ರೆಗಳನ್ನು ಒಳಗೊಂಡಿದೆ.

ಇನ್ನೊಬ್ಬ ಪಾಶ್ಚಾತ್ಯ ವಿದ್ವಾಂಸ ವಾಕರ್ ವಿಲ್ಕಿನ್ಸ್ ಅವರು ಹೀಗೆ ಹೇಳುತ್ತಾರೆ:

"ಬಹುಶಃ ಪ್ರಪಂಚದ ಯಾವುದೇ ಭಾಗಗಳಲ್ಲೂ ಇಷ್ಟೊಂದು ಪುರಾತನ ಭೂಉತ್ಖನನ ಕಾರ್ಯವನ್ನು ಕಂಡಿದ್ದು ಇಲ್ಲ. ಖಂಡಿತವಾಗಿಯೂ ಈ ಪ್ರಮಾಣದ ಭೂಉತ್ಖನನವಾದ ಭೂಪ್ರದೇಶ ಇನ್ನೊಂದಿಲ್ಲ. ಬಹಳ ದುರ್ಗಮವಾದ, ಆಳವಾದ ರಚನೆಗಳನ್ನು ಬೆಟ್ಟಗಳ ಸುತ್ತಲೂ ಕಾಣಬಹುದು. ಸರಳವಾದ ಮತ್ತು ನೈಸರ್ಗಿಕವಾದ ವಿಧಾನವನ್ನು ಅನುಸರಿಸಿದ ಆ ಕಾಲಘಟ್ಟದ ಅಭಿಯಂತರರ ಕಾರ್ಯ ಮೆಚ್ಚುವಂತದ್ದು. ಕಂದಕಗಳನ್ನು ತೆಗೆದ ಮಣ್ಣನ್ನು ಇಳಿಜಾರಾಗಿ ಹೊಂದಿಸಿ ಸುಲಭವಾಗಿ ಆ ಕಡೆಯಿಂದಲೂ ಶತ್ರುಗಳು ಹತ್ತಲು ಆಗದಂತೆ ನಿರ್ಮಿಸಲಾಗಿದೆ. ಶತಮಾನಗಳಿಂದ ನಿರ್ಮಿಸಲಾಗಿರುವ ಈ ಕಡಂಗಗಳು ಪೂರ್ವರಾಷ್ಟ್ರಗಳಲ್ಲೆಲ್ಲೂ ಕಂಡುಬರುವುದಿಲ್ಲ. ಈ ಮಟ್ಟದ ಕಡಂಗಗಳ ನಿರ್ಮಾಣಕ್ಕೆ ಬಳಸಲಾದ, ಕಾರ್ಮಿಕ ಶಕ್ತಿಯನ್ನು ಊಹಿಸಿದರೆ, ಆ ಕಾಲಘಟ್ಟದ ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ"[13]

ಈ ಸರಹದ್ದನ್ನು ಊರ್ಜಿತಗೊಳಿಸಲು ಮೂರು ಸಂಸ್ಥಾನಗಳ ಪ್ರತಿನಿಧಿಗಳ ಸಮುಖದಲ್ಲಿ ಸರಹದ್ದು ನಿಶಾನಿಗಳನ್ನು ನಿಲ್ಲಿಸುವ ಕೆಲಸ ಪ್ರಾರಂಭಿಸಲಾಯಿತು. ಕೆಲವು ಕಡೆಗಳಲ್ಲಿ ಕಂದಕಗಳನ್ನು ತೆಗೆಸಲಾಯಿತು ಸುಮಾರು ನೂರತ್ತೊಂಬತ್ತಾರು ಕಂಪನಿ ಸರಕಾರದ ಮುದ್ರೆ ಕಲ್ಲುಗಳನ್ನು ಕೆತ್ತಿಸಿ ನೆಡಿಸಲಾಯಿತು. ಕೆಲವುಕಡೆ ಮರದ ಗೂಟಗಳನ್ನು ನಿಲ್ಲಿಸಲಾಯಿತು. ಹೀಗೆ ಕೈಗೊಂಡ ಸರಹದ್ದು ವಿಂಗಡಣಾ ಕ್ರಮದ ತಪಶೀಲನ್ನು ಕೊಡಗು ಸಂಸ್ಥಾನದ ದೊರೆಗಳಿಗೆ ಜಾನ್ ಹೆನ್ರಿಪೀಲ್‌ರವರು ಕಳಿಸಿಕೊಟ್ಟರು. ಆ ತಪಶೀಲನ ಸರಕಾರ ಈ ಕೆಳಗಿನಂತಿದೆ.

"ಎರಡೂ ಕಡೆಸರಕಾರಕ್ಕೆ (ಕೊಡಗು ಮತ್ತು ಮೈಸೂರು ಸಂಸ್ಥಾನಗಳು) ಇದ್ದ ಸರಹದ್ದಿನ ತಕರರಾರು ಎರಡು ಕಡೆ ಪ್ರತಿನಿಧಿಗಳ ಸಮ್ಮುಖದಲ್ಲಿ ತಪಶೀಲುಮಾಡಿ ತೀರಿಸಲಾಗಿದೆ. ಮೆಕೆಂಜಿ ಸಾಹೆಬರ ಸಹಿಮಾಡಿದ್ದ ತಪಶೀಲನ್ನು ಈ ಪತ್ರದೊಡನೆ ತಮ್ಮ ಅವನಾಹನೆಗೆ ಕಳಿಸಿಕೊಡಲಾಗಿದೆ. ಎಲ್ಲ ವ್ಯಾಜ್ಯಗಳೂ ಇಲ್ಲಿಗೆ ಮುಗಿದ ಹಾಗೆ ಆಯಿತು. ಕಲ್ಲು ಕಂಬಗಳು ಮತ್ತು ಮರದ ಗೂಟಗಳನ್ನು ಸರಹದ್ದಿನ ಉದ್ದಕ್ಕೂ ನೆಡಲಾಗಿದೆ ಕಲ್ಲಿನ ಕಂಬಗಳಿಗೆ ಕಂಪನಿ ಸರಕಾರದ ಮುದ್ರೆ ಇದೆ. ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಮಧ್ಯೆ ಕಂದಕ (ಕಡಂಗ)ಗಳನ್ನು ತೆಗೆಸುವುದು ಒಳ್ಳೆಯದು ಎಂದು ನಮಗೆ ಅನಿಸುತ್ತದೆ. ಪ್ರತೀ ವರ್ಷ ತೆಗೆಯಲಾಗುವ ಕಡಂಗಗಳ ಲೆಕ್ಕ ಅಮಲುದಾರರ ಮುಖಾಂತರ ನಮಗೆ ಒದಗಿಸಬೇಕು. ಈ ಸಲಹೆಗಳನ್ನು ಪಾಲಿಸಿದರೆ ಇನ್ನು ಮುಂದೆ ಸರಹದ್ದಿಗೆ ಸಂಬಂಧಿಸಿದ ತಕರಾರು ಇನ್ನು ಬರಲಿಕ್ಕಿಲ್ಲ ಎಂಬ ಅಭಿಪ್ರಾಯ ನಮ್ಮದು. ಕಲ್ಲು ಕಂಬಗಳ ಮಧ್ಯೆ ಕಂದಕಗಳನ್ನು ಗುಂಡಿಗಳನ್ನು ತೆಗೆಸಿ ಅಲ್ಲಿಯೂ ರಾಜಮುದ್ರೆಯಿರುವ ಕಲ್ಲುಗಳನ್ನು ನೆಡಿಸಬೇಕು. ಕಿಡಿಗೇಡಿಗಳು ಈ ಸರಹದ್ದುಗಳನ್ನು ಬದಲಾಯಿಸಲು ಅವಕಾಶ ಕೊಡಕೂಡದು. ಈ ಸರಹದ್ದುಗಳನ್ನು ಬದಲಾಯಿಸಲು ಅವಕಾಶ ಕೊಡಕೂಡದು. ಈ ರೀತಿಯ ಮೇರೆ ಕಡಂಗಗಳು ಸುಬ್ರಮಣ್ಯದ ಸರಹದ್ದಿನಿಂದ, ಹೆಗ್ಗಡದೇವನಕೋಟೆ ಪರಿಯಂತ ಬೈನಾಡಿನವರೆಗೆ ತಯಾರಾಗಬೇಕು. ಈ ಬಗ್ಗೆ ಮೈಸೂರು ಸರಕಾರದ ಇಲಾಖೆಯವರಿಗೂ ತಾವು ಮನದಟ್ಟು ಮಾಡಿ ಕಂದಕ ತೆಗೆಯುವ ಕೆಲಸಗಳನ್ನು ಅವರಿಗೂ ಒಪ್ಪಿಸಬೇಕು ಎಂದು ಕೊಡಗಿನ ಅರಸರಿಗೆ ಕೋರಲಾಗಿದೆ."[15]

ಈ ವಿವರಗಳನ್ನು ಗಮನಿಸಿದಾಗ ಸರಹದ್ದುಗಳ ನಿರ್ಮಾಣ ಕಾರ್ಯದ ಅಗತ್ಯತೆ ಮತ್ತು ಬ್ರಿಟಿಷ ಸರ್ಕಾರದ ಚಾಣಾಕ್ಷ ಹಾಗೂ ವ್ಯವಸ್ಥಿತ ನಿಲುವುಗಳಿಗೆ ಸಾಕ್ಷಿಯಾಗಿದೆ. ಈ ಸಂದರ್ಭದಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೆಂದರೆ ಕಡಂಗಗಳೆಂಬ ಕಂದಕಗಳು ಬ್ರಿಟಿಷ್ ಆಡಳಿತಕ್ಕೆ ಹೇಗೆ ಪೂರಕವಾಗಿ ಕೆಲಸಮಾಡಿದವು ಎನ್ನುವ ವಿಚಾರ ಮತ್ತು ಕಡಂಗಗಳನ್ನು ತೆಗೆಯಲು ಅದರ ಕಷ್ಟವಾಗುವುದರಿಂದ ಕಲ್ಲುಗಳನ್ನು ಕೆತ್ತಿ ರಾಜಮುದ್ರೆ ಒತ್ತಿ ನೆಡಿಸಿ ಗಡಿ ನಿರ್ಧಾರ ಮಾಡುವ ಕ್ರಮವನ್ನು ಅನುಸರಿಸಿರುವುದು ಗಮನಾರ್ಹ ವಿಚಾರ. ಕೊಡಗಿನ ಗಡಿ ನಿರ್ಧಾರ ಮಾಡುವಲ್ಲಿ ಆಧುನಿಕ ವಿಧಾನಗಳು ಕಾಲಿಟ್ಟ ಈ ಕಾಲಘಟ್ಟ ಚಾರಿತ್ರಿಕವಾಗಿ ಬಹಳ ಮುಖ್ಯವಾಗುತ್ತದೆ.

ಕೊನೆಯ ಮಾತು: ಕೊಡಗಿನ ಪರಿಸರದಲ್ಲಿ ಕಂಡುಬರುವ ಕಡಂಗಗಳಲ್ಲಿ ಸಾಕಷ್ಟು ಮರಗಿಡಗಳು ಬೆಳೆದು ಶತಮಾನಗಳು ಉರುಳಿರುವುದರಿಂದ ನಿರ್ದಿಷ್ಟವಾಗಿ ಇವುಗಳ

ರೂಪುರೇಷೆಗಳನ್ನು ಗುರುತಿಸುವುದು ಕಷ್ಟವಾಗುತ್ತದೆ. ಇದಲ್ಲದೆ ಆಧುನಿಕ ಯಂತ್ರಗಳಾದ ಜೆ.ಸಿ.ಬಿ./ಎಕ್ಸ್‌ಕವೇಟರ್‌ಗಳಂತಹ ಭೂಮಿಯನ್ನು ಅಗೆಯುವ ಯಂತ್ರಗಳು ಕೊಡಗಿನಾದ್ಯಂತ ಇಂತಹ ಅದೆಷ್ಟೋ ಚಾರಿತ್ರಿಕ ವಿಶೇಷತೆಗಳನ್ನೊಳಗೊಂಡ ಕಡಂಗಗಳನ್ನು ತೋಟ ಮಾಡುವುದರ ಸಲುವಾಗಿ ಹಾಗೂ ಪಟ್ಟಣಗಳನ್ನು ಕಟ್ಟುವುದರ ಸಲುವಾಗಿ ಮಣ್ಣು ಕಲ್ಲುಗಳನ್ನು ಮುಚ್ಚಿ ನೆಲವನ್ನು ಸಮತಟ್ಟಾಗಿ ಮಾಡುವ ಆಧುನಿಕತೆಯ ಭರಾಟೆಗೆ ಸಿಲುಕಿ ಕಡಂಗಗಳು ಕಣ್ಮರೆಯಾಗಿವೆ. ಒಂದರ್ಥದಲ್ಲಿ ಕಾಫಿತೋಟ ವಿಸ್ತರಣೆಯೂ ಕಡಂಗಗಳಿಗೆ ಮುಳುವಾಯಿತು.

ಒಟ್ಟಾರೆಯಾಗಿ ಕೊಡಗಿನ ಕಡಂಗಗಳು ತನ್ನದೇ ಆದ ವಿಶಿಷ್ಟ ರಚನೆಗಳಿಂದಾಗಿ ಕೊಡಗಿನ ಜನಜೀವನದ ಮೇಲೆ ಗಾಢವಾದ ಪ್ರಭಾವ ಬೀರುವುದರ ಜೊತೆಗೆ ಕೊಡಗಿನ ಚರಿತ್ರೆಯನ್ನು ಅರ್ಥೈಸಿಕೊಳ್ಳುವಲ್ಲಿಯೂ, ಕೊಡಗಿನ ಸಂಕೀರ್ಣ ಜೀವನವನ್ನು ಅರಿತುಕೊಳ್ಳುವಲ್ಲಿಯೂ ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ಅಧ್ಯಯನ ಮಾಡಿದ ಯಾರಿಗಾದರೂ ಅನ್ನಿಸದೇ ಇರದು. 'ಒಕ್ಕ'ಗಳೆಂಬ ಕೊಡಗಿನ ಅವಿಭಕ್ತ ಕುಟುಂಬ ಪದ್ಧತಿಗೆ ಮತ್ತು ಒಕ್ಕಗಳು ವಾಸಿಸುವ 'ಐನ್‌ಮನೆ'ಗಳಿಗೂ ಕಡಂಗಗಳ ಕೊಡುಗೆ ಬಹುಮುಖ್ಯವಾದುದಾಗಿದೆ. ಏಕೆಂದರೆ ಒಂದು ಒಕ್ಕವು ರೂಪುಗೊಳ್ಳಬೇಕಾದರೆ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶ ಒಳಗೆ ಬೆಳೆಯಬೇಕಾದುದು ಅನಿವಾರ್ಯವಾಗಿತ್ತು. ಹಾಗಿದ್ದ ಸಂದರ್ಭದಲ್ಲಿ ಹಂತಹಂತವಾಗಿ ಅಸ್ತಿತ್ವಕ್ಕೆ ಬರುತ್ತಿದ್ದ ಒಕ್ಕಗಳಿಗೆ ಅವುಗಳ ರಕ್ಷಣೆ ತುಂಬ ಅಗತ್ಯವಾಗಿತ್ತು. ಹಾಗೆಯೇ ನೆರೆಯ ಒಕ್ಕದವರ ಆಸ್ತಿಪಾಸ್ತಿಗೆ ಸಂಬಂಧಪಟ್ಟಂತೆ ತಂಟೆ ತಕರಾರುಗಳು ಬರದಂತೆ ಸರಹದ್ದುಗಳನ್ನು ನಿರ್ಮಿಸಿಕೊಳ್ಳಬೇಕಿತ್ತು. ಒಕ್ಕಗಳ ಆಸ್ತಿ, ಗದ್ದೆಗಳು, ಮನೆ ಮೊದಲಾದ ಕಡೆಗಳಲ್ಲಿ ತಮ್ಮದೇ ಸರಹದ್ದುಗಳನ್ನು ಗುರುತುಗಳನ್ನು ಕಂಡುಕೊಳ್ಳಬೇಕಿತ್ತು. ಅಲ್ಲದೆ, ತಮ್ಮ ಒಕ್ಕದ ಅನನ್ಯತೆಯ ಪ್ರಶ್ನೆ ಬಹಳ ಮುಖ್ಯವಾಗಿತ್ತು. ಹಾಗಾಗಿ ಕಾಲಾಂತರದಲ್ಲಿ ತಲೆಮಾರಿನಿಂದ ತಲೆಮಾರಿಗೆ ಕಡಂಗಗಳನ್ನು ನಿರ್ಮಿಸಿಕೊಂಡರು. ಕೇವಲ ಒಂದು ಒಕ್ಕದ ಪ್ರಶ್ನೆಯಾಗಿರಲಿಲ್ಲ. ಕೊಡಗಿನಾದ್ಯಂತ ಬದುಕಿ ಬಾಳಿದ ಒಕ್ಕಗಳನ್ನು ರೂಪಿಸಿ ಅನನ್ಯತೆಯನ್ನು ಕಾಪಾಡುವಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದವು ಎಂದರೆ ತಪ್ಪಾಗಲಾರದು. ಹಾಗೆಯೇ ಕಡಂಗಗಳು ಮುಖ್ಯವಾಗಿ ಮೇಲೆ ಹೇಳಿದಂತೆ ಮೂರು ಘಟ್ಟಗಳಲ್ಲಿ ನಿರ್ಮಾಣಗೊಂಡವು. ಆ ಕಾಲಘಟ್ಟದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅವಶ್ಯತೆಗಳಿಗನುಸಾರವಾಗಿ ಕಡಂಗಗಳು ಬಳಕೆಗೊಂಡವು. ಊರು ಊರುಗಳ ಮಧ್ಯೆ ನಾಡು ನಾಡುಗಳ ಮಧ್ಯೆ ಸಂಬಂಧ ಬೆಸೆಯುವಲ್ಲಿ ಕಡಂಗಗಳು ಪಾತ್ರವಹಿಸಿದವು. ಕೊಡಗು ದೇಶಕಟ್ಟ್ ಪಾಟನ ಪ್ರಕಾರ ಒಂದು ರಾಷ್ಟ್ರೀಯ ಕಲ್ಪನೆ ಕೊಡಗಿನಲ್ಲಿ ಬೆಳೆಯಲು ಮತ್ತು ಸುಭದ್ರ ದೇಶದ ಕಲ್ಪನೆಗೆ ಆಯಾಮವನ್ನು ಕೊಡುವಲ್ಲಿ ವಿವಿಧ ರೀತಿಯ ಕಡಂಗಗಳು ಮಹತ್ತರ ಪಾತ್ರವಹಿಸಿದವು. ಸಂಪರ್ಕ ಮಾಧ್ಯಮಗಳ ಕೊರತೆಯಿದ್ದ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಕೊಡುಕೊಳ್ಳುವಿಕೆಗೆ ಕಡಂಗಗಳು ಬಹಳವಾಗಿ ಬಳಕೆಗೊಂಡವು. ಹಾಗಾಗಿ ಒಕ್ಕ, ನಾಡು, ನುಡಿಗಳ ಸಮಗ್ರ ಬೆಳವಣಿಗೆಗೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕಡಂಗಗಳು ಪೂರಕವಾಗಿ ಕೆಲಸಮಾಡಿದವು ಎಂದರೆ ತಪ್ಪಾಗಲಾರದು. ಈ ಕಾರಣದಿಂದಾಗಿ ಶಿಷ್ಟತೆಯಿಂದ ಕೂಡಿದ ಕೊಡಗಿನ ಕಡಂಗ ಅಪರೂಪದ ಅಧ್ಯಯನದ ವಿಷಯವಾಗುತ್ತದೆ.

ಕೊನೆ ಟಿಪ್ಪಣಿಗಳು

1. Richter, 2014 (1870) :190–91.
2. Rice, 2004(1878): 98.
3. ಕೃಷ್ಣಯ್ಯ, 1995(1974): 67.
4. ಮುತ್ತಣ್ಣ, 1988: 33.
5. ಕ್ರಿ.ಶ.1120ರ *ಚಂದ್ರನಾಥಾಷ್ಟಕ*ದಲ್ಲಿ ಮೌಕ್ತಿಕ ಕವಿ 'ಪೆಣ್ಣೆ ಗಡಙ್ಗಲು'ಪದ ಪ್ರಯೋಗಿಸುತ್ತಾನೆ. ಪೆಣ್ಣಂಗಡಲು ಎಂದರೆ ಪನ್ನಗದ್ದೆ ಎಂದು, ಪನ್ನಗದ್ದೆ ಬನಗದ್ದೆಯ ಪಕ್ಕದಲ್ಲಿ ವಿಶಾಲವಾದ ಕೆರೆಯನ್ನು ಸೂಚಿಸುವಲ್ಲಿ ಕಡಂಗದ ರಚನೆ ಗದ್ದೆ ಹಾಗೂ ಕೆರೆಯ ನಡುವೆ ಇದ್ದುದರ ವಿವರವಿದೆ.
6. *ಎ.ಕ. (ಪರಿಷ್ಕೃತ), ಸಂ–1,* 1972: ಕೊಡಗು–98.
7. *ರಾಜೇಂದ್ರನಾಮೆ,* 2014(1957): 8.
8. ಮೇಂದಲೆ ನಾಡು ಎಂದರೆ ಕೊಡಗಿನ ಉತ್ತರ ಮತ್ತು ವಾಯವ್ಯ ಭಾಗದ ನಾಡುಗಳು. ಕೊಡಗಿನ ಸಂಸ್ಕೃತಿಯ ಪ್ರಾರಂಭಿಕ ಮೂಲಗಳು ಇಲ್ಲಿಂದಲೇ ಹುಟ್ಟುತ್ತದೆ.
9. ಕಿಗ್ಗಟ್ಟು ನಾಡು ಎಂದರೆ ಕೊಡಗಿನ ದಕ್ಷಿಣ ಭಾಗ, ಸಾಧಾರಣವಾಗಿ ಬಯಲು ಪ್ರದೇಶ.
10. ನಾಗರಾಜ್, 2004: 424.
11. Richter, 1870 : 192.
12. Rice, 2004(1878), ಪೂರ್ವೋಕ್ತ; ಕೃಷ್ಣಯ್ಯ, 1995(1974), ಪೂರ್ವೋಕ್ತ ಕೃತಿಗಳನ್ನು ಗಮನಿಸಬಹುದು.
13. Richter, 1870: 190–91.
14. Mogling, 1855: 31.
15. *ರಾಜೇಂದ್ರನಾಮೆ,* 1957 (2014): 261–64.

ಪರಾಮರ್ಶನ ಗ್ರಂಥ

1. ಕೃಷ್ಣಯ್ಯ, 1995(1974), *ಕೊಡಗಿನ ಇತಿಹಾಸ,* ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
2. ಗೋಪಾಲ್ ಬಾ.ರಾ., (ಸಂ.), 1972, *ಎಪಿಗ್ರಾಫಿಯ ಕರ್ನಾಟಿಕ ಸಂ–1, (ಪರಿಷ್ಕೃತ),* ಮೈಸೂರು: ಕನ್ನಡ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ.
3. ನಾಗರಾಜ್ ಎಂ.ಜಿ., 2004, *ಕೊಡಗಿನ ಹಾಲೇರಿ ರಾಜವಂಶವೂ ಭಾಗ–1,* ಹೊಸಪೇಟೆ: ಡೈರೆಕ್ಟರೇಟ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂ.
4. ಮುತ್ತಣ್ಣ, 1988, *ಕೊಡವ ನುಡಿ ಅರ್ಥಕೋಶ ಮತ್ತು ಸಂಸ್ಕೃತಿ ಅಧ್ಯಯನ,* ಬೆಂಗಳೂರು: ಕೊಡವ ಸಮಾಜ.
5. *ರಾಜೇಂದ್ರನಾಮೆ,* 2014(1957), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
6. Rice, 2004(1878), *Mysore and Coorg, A Gazetteer compile for the Government, Vol-3,* Bengaluru: Government of Karnataka.
7. Richter, 1984(1870), *Gazetteer of Coorg,* Dehli: B.R.Publishing Corporation.
8. Mogling Hermann, 2004(1855), *Coorg Memoirs,* Bangalore: Government of Karnataka.

■

ವಸಾಹತುಶಾಹಿ ವ್ಯವಸ್ಥೆಯಲ್ಲಿ ನೀರಾವರಿ ನೀತಿ ಮತ್ತು ಧೋರಣೆ (1831–1881) –ಒಂದು ಅಧ್ಯಯನ

❑ ಟಿ.ವಿ. ನಾಗರಾಜ
#475/ಬಿ, 15ನೇ ತಿರುವು,
ಐಡಿಯಲ್ ಹೋಮ್,
ರಾಜರಾಜೇಶ್ವರಿ ನಗರ,
ಬೆಂಗಳೂರು–560098.
nagarajatv1555@
gmail.com

1831ರಿಂದ 1881 ರವರೆಗಿನ 50 ವರ್ಷಗಳ ಅವಧಿಯನ್ನು ಬಿಟ್ಟರೆ ಮೈಸೂರು ರಾಜ್ಯ ಬ್ರಿಟಿಷರ ನೇರ ಆಡಳಿತವನ್ನು ಅನುಭವಿಸಲಿಲ್ಲ. ಆದರೆ 1799ರ ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ನಂತರ ರಾಜ್ಯದ ಆರ್ಥಿಕ ಸ್ಥಿತಿ ವಸಾಹತುಶಾಹಿಯ ತುಳಿತಕ್ಕೆ ಒಳಗಾಯಿತು. ಮೈಸೂರು ರಾಜ್ಯದಲ್ಲಿ ವಸಾಹತುಶಾಹಿಯ ತುಳಿತ 'ವಿಭಜನೆ ಒಪ್ಪಂದದಿಂದ' ಆರಂಭಗೊಂಡು, ನಂತರ 1799ರ 'ಸಹಾಯಕ ಸೈನ್ಯ ಒಪ್ಪಂದ' ಆನಂತರ 1831ರಲ್ಲಿ ನಡೆದ ನಗರ ದಂಗೆಯ ನಂತರ ರಾಜ್ಯದ ಆಡಳಿತವನ್ನು ತಮ್ಮ ನೇರ ಆಳ್ವಿಕೆಗೆ ವಹಿಸಿಕೊಂಡದ್ದು, 50 ವರ್ಷಗಳ ಅವರ ಸ್ವತಂತ್ರ ಆಡಳಿತ, ಕೊನೆಗೆ 1881ರ ಪುನರ್‌ದಾನ ಹೀಗೆ ಪ್ರತಿಯೊಂದು ಹಂತದಲ್ಲೂ ಹೆಚ್ಚುತ್ತಾ ಹೋಯಿತು. ಈ ಆರ್ಥಿಕ ಅಧೀನತೆಯ ಇತಿಹಾಸದಲ್ಲಿ ರಾಜ್ಯದ ನೀರಾವರಿ ಕಾಮಗಾರಿಗಳ ಬಗ್ಗೆ ಕಂಪನಿ ಸರ್ಕಾರ ಹಾಗೂ ಸಾರ್ವಭೌಮ ಸರ್ಕಾರದ ನಿಲುವು ಧೋರಣೆಗಳು ಪ್ರಮುಖವಾದವು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಬ್ರಿಟಿಷರ ನೇರ ಆಳ್ವಿಕೆಯ ಸಂಸ್ಥಾನದ ನೀರಾವರಿ ಕುರಿತಂತೆ ಅವರು ಅನುಸರಿಸಿದ ನಿಲುವು/ಧೋರಣೆಗಳನ್ನು ಕುರಿತು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

–1–

ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ನೇರ ಆಳ್ವಿಕೆ ಹಲವಾರು ಆಡಳಿತಾತ್ಮಕ ಬದಲಾವಣೆಗಳಿಗೆ ಕಾರಣ

ವಾಯಿತು. ಆದರೂ ಕೂಡ ಪರಂಪರಾನುಗತ ಸಾಮಾಜಿಕ ಚೌಕಟ್ಟು ಹಾಗೂ ಕೃಷಿ ಆಧಾರಿತ ಅರ್ಥವ್ಯವಸ್ಥೆ, ಗ್ರಾಮ ಸಮಾಜ ಹೆಚ್ಚಿನ ಬದಲಾವಣೆ ಕಾಣದೆ ಯಥಾಸ್ಥಿತಿ ಮುಂದುವರಿಯಿತು. ರಾಜ್ಯದಲ್ಲಿ ದಂಗೆಯಿಂದ ಪಾಠ ಕಲಿತ ಬ್ರಿಟಿಷರು ಕಂದಾಯ ಹಾಗೂ ಸೈನಿಕ ಸಂಘಟನೆಯೇ ಆಡಳಿತ ಚೌಕಟ್ಟಿನ ಮೂಲಾಧಾರ ಎಂಬ ತೀರ್ಮಾನಕ್ಕೆ ಬಂದರು. ಈ ಬದಲಾದ ವ್ಯವಸ್ಥೆಯಲ್ಲಿ ನೀರಾವರಿಗೆ ಆದ್ಯತೆ ಇರಲಿಲ್ಲ.

ಬದಲಾದ ಆಡಳಿತಾತ್ಮಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಕಮೀಷನರುಗಳ ಆಳ್ವಿಕೆಯ ಆರಂಭದಲ್ಲಿ ಪೋಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಮೊದಲ ಆದ್ಯತೆ, ಅರಣ್ಯ, ಭೂಮಾಪನ ಹಾಗೂ ಕಂದಾಯ, ಲೆಕ್ಕಪತ್ರಗಳು ಎರಡನೆ ಆದ್ಯತೆ ಪಡೆದು, ರಸ್ತೆ, ಸಾರ್ವಜನಿಕ ಕಟ್ಟಡಗಳು ಹಾಗೂ ನೀರಾವರಿ ಆದ್ಯತೆಯಲ್ಲಿ ಕೊನೆಯದಾಗಿದ್ದವು.

ಬರಗಾಲ ಮರುಕಳಿಸದಂತೆ ತಡೆಯುವಲ್ಲಿಯೂ ಶಾಶ್ವತ ಪರಿಹಾರವಾಗಿಯೂ ನೀರಾವರಿ ಕ್ಷೇತ್ರ ಆದ್ಯತೆ ಪಡೆಯಲಿಲ್ಲ. ಕೇವಲ ನೀರಾವರಿ ಹಾಗೂ ಸಾರಿಗೆ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವ ಮೂಲಕ ಕಂದಾಯದ ಮೂಲಾದಾಯಗಳನ್ನು ಸಂರಕ್ಷಿಸುವಷ್ಟರ ಮಟ್ಟಿಗೆ ಸರ್ಕಾರ ಕೆರೆ ನೀರಾವರಿ ಹಾಗೂ ಸಾರಿಗೆ ವ್ಯವಸ್ಥೆಗೆ ಆದ್ಯತೆ ಕೊಟ್ಟಿತು.[1]

ಕಮೀಷನರುಗಳ ಆಳ್ವಿಕೆಯ ಆರಂಭದಲ್ಲಿ ಕಂದಾಯ, ಸೈನ್ಯ, ನ್ಯಾಯಾಂಗ ಮತ್ತು ಆಡಳಿತ ಕ್ಷೇತ್ರಗಳನ್ನು ಕುರಿತಂತೆ ಸ್ಪಷ್ಟ ಹಾಗೂ ನಿರ್ದಿಷ್ಟ ನೀತಿ ಕಂಡು ಬಂದರೂ, ನೀರಾವರಿ ಅಭಿವೃದ್ಧಿ ಕುರಿತಂತೆ ಅನುಸರಿಸಬೇಕಾದ ಯಾವುದೇ ಕಾರ್ಯಯೋಜನೆ ಕಂಡು ಬರುವುದಿಲ್ಲ. ಆದಾಯದ ಮೂಲಗಳಲ್ಲಿ ಒಂದಾದ ಕೃಷಿಗೆ ಪೂರಕವಾಗಿ ನೀರಾವರಿಗೆ ಸ್ವಲ್ಪಮಟ್ಟಿನ ಒತ್ತು ಕೊಟ್ಟರೂ, ಅದು ಕಂದಾಯದ ಬಾಬ್ತಿನಲ್ಲಿ ಉಂಟಾಗಬಹುದಾದ ಖೋತಾ ಪಡೆಯಲು ಉದ್ದೇಶಿಸಲಾಗಿತ್ತು.

ನೀರಾವರಿ ಇಲಾಖೆ ರೂಪ ತಳೆಯುವ ನಿಟ್ಟಿನಲ್ಲಿ ಮೊದಲ ಅರೆ ಮನಸ್ಸಿನ ಪ್ರಯತ್ನವನ್ನು 1834ರಲ್ಲಿ ಸರ್ಕಾರ ನಡೆಸಿತು. 1855ರಲ್ಲಿ ನೀರಾವರಿ ಕ್ಷೇತ್ರದ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಕೆಲವು ಕೆರೆಗಳು ದುರಸ್ತಿಯಾಗಿವೆ. ಇನ್ನೂ ಕೆಲವು ಕೆರೆಗಳು ದುರಸ್ತಿಯಾಗಬೇಕಿದ್ದರೂ, ಹೆಚ್ಚುವರಿ ಸಾಗುವಳಿದಾರರು ಸಿಗುವವರೆಗೂ ಉತ್ಪನ್ನಕ್ಕೆ ಮಾರುಕಟ್ಟೆ ದೊರೆಯದ ನೆಪದಲ್ಲಿ ಕೆರೆ ನೀರಾವರಿಯನ್ನು ನಿರ್ಲಕ್ಷಿಸಿ, ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿದೆ.[3]

ಲೋಕೋಪಯೋಗಿ ಇಲಾಖೆ ತನ್ನ ಕಾರ್ಯ ನಿರ್ವಹಣೆಯಲ್ಲಿ ಸ್ಪಷ್ಟತೆ ಕಾಣದ ಸಂದರ್ಭದಲ್ಲಿ ರಚಿಸಲಾದ ಸಮಿತಿ, ಕೆರೆಗಳ ನಿರ್ವಹಣೆಯನ್ನು ಕಂದಾಯ ಅಧಿಕಾರಿಗಳಲ್ಲಿ ಇರಿಸಿ, ವೃತ್ತಿಪರಕೌಶಲ್ಯ ಅಗತ್ಯವಿರುವಂತಹ ಕಾಮಗಾರಿಗಳನ್ನು ಇಲಾಖೆಗೆ ವಹಿಸಲು ಶಿಫಾರಸ್ಸು ಮಾಡಿತು. ಮದ್ರಾಸ್ ಪ್ರಾಂತ್ಯದಲ್ಲಿದ್ದಂತೆ ಕೆರೆಗಳ ಸಂರಕ್ಷಣೆಯಲ್ಲಿ ಸ್ಥಳೀಯ ರೈತರು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಶಾಸನ ರೂಪದಲ್ಲಿ 1863ರಲ್ಲಿ ಹೊರಡಿಸಲಾಯಿತು. 1864ರಲ್ಲಿ ಸೀಮಿತ ಉದ್ದೇಶ ಹಾಗೂ ಕಾರ್ಯ ವ್ಯಾಪ್ತಿ ಹೊಂದಿದ್ದ ಪ್ರತ್ಯೇಕ ನೀರಾವರಿ ಇಲಾಖೆ ಅಸ್ತಿತ್ವಕ್ಕೆ ಬಂದಿತು.[4]

ಮಾರ್ಚ್ 22, 1866ರಲ್ಲಿ ದೇಶದಲ್ಲಿ ಆವರಿಸಿದ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಕೇಂದ್ರದಿಂದ ಬಂದ ಒಂದು ಪತ್ರವು ನೀರಾವರಿ ಕುರಿತಂತೆ ಅನುಸರಿಸಬೇಕಾದ ನೀತಿ ನಿರೂಪಣೆಗಳಿಗೆ ಮಾರ್ಗಸೂಚಿ ರೂಪದಲ್ಲಿದ್ದಿತು.[5] ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ಆದ್ಯತೆಗಳನ್ನು ಗುರುತಿಸಿಕೊಳ್ಳುವಾಗ, ಯಾವ ಕಾಮಗಾರಿಗಳನ್ನು ಪ್ರಥಮ ಆದ್ಯತೆಯಲ್ಲೂ ಹಾಗೂ ಪ್ರತಿಫಲದಾಯಕವೂ ಆಗಿರುವಂತಹವುಗಳನ್ನು ಎರಡನೆಯ ಆದ್ಯತೆಯಲ್ಲೂ ಪರಿಗಣಿಸಬೇಕು.

ಈ ಹಿನ್ನೆಲೆಯಲ್ಲಿ ಆರಂಭಗೊಂಡ ಪತ್ರವ್ಯವಹಾರ, ಸಂಸ್ಥಾನದಲ್ಲಿ ಕೆರೆಪದ್ಧತಿಯ ಚಿತ್ರಣವನ್ನು ಬಿಂಬಿಸಿ, ಅವುಗಳ ವ್ಯಾಪ್ತಿ, ಅಗಾಧತೆ, ಪರಂಪರಾನುಗತ ಕೌಶಲ್ಯಗಳನ್ನು ಗಮನಿಸುತ್ತ ಹೊಸ ಕಾಮಗಾರಿಗಳ ನಿರ್ಮಾಣಕ್ಕಿಂತ, ಇರುವ ಕಾಮಗಾರಿಗಳ ದುರಸ್ತಿ ಮತ್ತು ನಿರ್ವಹಣೆಯೇ ಪ್ರಧಾನವಾದುದು ಎಂಬ ಅಂಶ ಮಹತ್ವ ಪಡೆಯಿತು. ಕೆರೆ ಪದ್ಧತಿಯ ಸ್ಥಿತಿಗತಿಗಳನ್ನು ವಿಶ್ಲೇಷಿಸಿ, ನಿರ್ವಹಿಸಲು ಸಂಪನ್ಮೂಲಗಳ ಕೊರತೆಯನ್ನು ಗುರುತಿಸಿದ್ದಲ್ಲದೆ, ಕಾಮಗಾರಿಗಳ ನಿರ್ವಹಣೆ ಮತ್ತು ಉಸ್ತುವಾರಿಗಾಗಿ ಇಲಾಖಾ ಚೌಕಟ್ಟಿನ ವಿಕಸನ ಅನಿವಾರ್ಯವಾಯಿತು. ಹೊಸ ಇಲಾಖೆ ಅನುಸರಿಸಬೇಕಾದ ನೀತಿ, ನಿರೂಪಣೆಗಳು, ಕಾರ್ಯ ವಿಧಾನಗಳಲ್ಲಿ ಸ್ಪಷ್ಟತೆ, ನಿರ್ದಿಷ್ಟತೆ ಅಗತ್ಯವಾಗತೊಡಗಿದವು. ಹೀಗೆ ಗ್ರಾಮೀಣ ಸಮಾಜದ ಆರ್ಥಿಕ ಜೀವಾಳವಾದ ಕೆರೆ ನೀರಾವರಿ ವ್ಯವಸ್ಥೆ ಬಗ್ಗೆ ಒಂದು ಸ್ಪಷ್ಟ ಹಾಗೂ ನಿರ್ದಿಷ್ಟ ಕಾರ್ಯವಿಧಾನ ಹಾಗೂ ನೀತಿಯನ್ನು ತಳೆಯುವ ಮೂಲಕ ಸಂಸ್ಥಾನದ ನೀರಾವರಿ ನೀತಿಯಲ್ಲಿ ಒಂದು ಹೊಸ ಆಯಾಮ ರೂಪುಗೊಂಡಿತು. "ಇಲ್ಲಿಯವರೆಗೂ ಸಂಸ್ಥಾನದ ಕೆರೆ ಪದ್ಧತಿ ಬಗ್ಗೆ ಅನುಸರಿಸಬೇಕಾದ ಒಂದು ಸಾಮಾನ್ಯ ನೀತಿಯನ್ನು ಗುರುತಿಸಿರಲಿಲ್ಲ" ಎಂದು ಮೇ॥ ಸ್ಯಾಂಕಿ ಅಭಿಪ್ರಾಯ ಪಡುತ್ತಾರೆ.[6]

1868ರ ನಂತರ ಮೈಸೂರು ಸಂಸ್ಥಾನದಲ್ಲಿ ಕೆರೆ ನೀರಾವರಿ ವ್ಯವಸ್ಥೆಯ ನಿರ್ವಹಣೆ ಕುರಿತಂತೆ ವ್ಯಾಪಕ ಚರ್ಚೆಗಳು ನಡೆದವು. ಈ ಚರ್ಚೆಗಳು ಪ್ರತ್ಯೇಕ ನೀರಾವರಿ ಇಲಾಖೆ ಅಸ್ತಿತ್ವಕ್ಕೆ ಬರುವಲ್ಲಿ ಹಾಗೂ ಅದು ಅನುಸರಿಸಬೇಕಾದ ರೀತಿ ನೀತಿಗಳನ್ನು ಕುರಿತು ಸಲಹೆ-ಸೂಚನೆಗಳು ಹೊರಹೊಮ್ಮಿದವು. ಈ ಚರ್ಚೆಯಲ್ಲಿ ತೊಡಗಿದ್ದ ತಜ್ಞರು ಬ್ರಿಟಿಷರು ಮೈಸೂರನ್ನು ವಶಪಡಿಸಿಕೊಳ್ಳುವುದಕ್ಕೆ ಮುನ್ನ ಕೆರೆ-ನೀರಾವರಿ ಕುರಿತಂತೆ ಸಾಂಪ್ರದಾಯಕವಾಗಿ ಬೆಳೆದು ಬಂದಿದ್ದ ಕಾರ್ಯವಿಧಾನದ ಮಹತ್ವವನ್ನು ಒತ್ತಿ ಹೇಳಿ, ನಂತರದ ವರ್ಷಗಳಲ್ಲಿ, ಆಡಳಿತದಲ್ಲಾದ ಏರ್ಪಾಡುಗಳು ಹಾಗೂ ಪರಂಪರಾನುಗತ ಆಚಾರಗಳು ಮೂಲೆ ಗುಂಪಾದುದು ಕೆರೆ ವ್ಯವಸ್ಥೆಯು ಅಸ್ತವ್ಯಸ್ತವಾಗಲು ಮೂಲ ಕಾರಣ ಎಂಬ ತೀರ್ಮಾನಕ್ಕೆ ಬರಲಾಯಿತು. ಬ್ರಿಟಿಷರ ಅಧೀನದಲ್ಲಿ ಮೈಸೂರು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಆಡಳಿತ ನಡೆಸಬೇಕಾದ ಅನಿವಾರ್ಯತೆ ಒದಗಿದ ಹಿನ್ನೆಲೆಯಲ್ಲಿ ಅದಕ್ಕೆ ಹೊಂದಿಕೊಳ್ಳುವ ಒಂದು ಹೊಸ ನೀರಾವರಿ ನೀತಿಯ ಅಗತ್ಯ ಮನಗಂಡರು. ಸರ್ಕಾರ ನೀರಾವರಿಯನ್ನು ಕುರಿತಂತೆ ತೋರಿದ ಉತ್ಪ್ರೇಕ್ಷೆ ಈ ಒಂದು ಅಂಶಕ್ಕೆ ಮತ್ತೆ ಒತ್ತು ಕೊಟ್ಟಿತು.

1868ರ ನಂತರ ಮೈಸೂರು ಆಡಳಿತ ವಲಯದಲ್ಲಿ ಒಂದು ದೊಡ್ಡ ಚರ್ಚೆ ಆರಂಭವಾಯಿತು. ಈ ಚರ್ಚೆ ಗ್ರಾಮೀಣ ಪ್ರದೇಶದ ಕೆರೆಗಳ ಸಂರಕ್ಷಣೆಯಿಂದ ರಾಜ್ಯದ ಅಭಿವೃದ್ಧಿ ಹಾಗೂ ರೈತರ ಜೀವನ ಮಟ್ಟ ಸುಧಾರಿಸುವುದು ಎಂಬ ಅಂಶ ಸ್ಪಷ್ಟವಾಗಿದ್ದರೂ ಸಹ, ಈ ಕೆರೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಯಾರು ನಿರ್ವಹಿಸಬೇಕು? ಹೇಗೆ ನಿರ್ವಹಿಸಬೇಕು? ವೆಚ್ಚವನ್ನು ಹೇಗೆ ಕ್ರೋಢೀಕರಿಸಬೇಕು? ಎಂಬ ವಿಷಯಗಳ ಕುರಿತಂತೆ ಹಲವು ವರ್ಷಗಳ ಕಾಲ ವ್ಯಾಪಕ ಚರ್ಚೆ ನಡೆಯಿತು.[7]

1868ರಲ್ಲಿ 'ನೀರಾವರಿ ಸಮಿತಿ' ಸಂಸ್ಥಾನದಲ್ಲಿನ ಎಲ್ಲಾ ನೀರಾವರಿ ಕಾಮಗಾರಿಗಳ ದುರಸ್ತಿ ಕಾರ್ಯವನ್ನು ಇಲಾಖೆಯಿಂದ ಕಂದಾಯ ಅಧಿಕಾರಿಗಳಿಗೆ ವಹಿಸುವುದು, ದುರಸ್ತಿ ನಂತರ ಅವುಗಳನ್ನು ನಿರ್ವಹಣೆಗೆ ರೈತರಿಗೆ ವಹಿಸುವಂತೆ ಗೊತ್ತುವಳಿ ಅಂಗೀಕರಿಸಿತು.

ಹೊಸದಾಗಿ ನೀರಾವರಿ ಇಲಾಖೆ ಸೀಮಿತಿ ವ್ಯಾಪ್ತಿಯಲ್ಲಿ ಕೆಲಸ ಪ್ರಾರಂಭಿಸಿದಾಗಲೂ ಕೂಡ 500 ರೂ.ಗಳಿಗಿಂತ ಕಡಿಮೆ ಆದಾಯ ಇರುವ ಎಲ್ಲಾ ಸಣ್ಣ ಕೆರೆ ಕಾಮಗಾರಿಗಳನ್ನು ಕಂದಾಯ ಅಧಿಕಾರಿಗಳೇ ಉಸ್ತುವಾರಿ ನಡೆಸುತ್ತಿದ್ದರು. ಇದಕ್ಕೂ ಹೆಚ್ಚಿನ ಆದಾಯ ತರುವಂತಹ ನೀರಾವರಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಇಲಾಖೆ ಅಥವಾ ಕಂದಾಯ ಅಧಿಕಾರಿಗಳಿಗೆ ವಹಿಸುವ ಅಧಿಕಾರ ಕಮೀಷನರ್‌ರವರಲ್ಲಿ ಇದ್ದಿತು. ಈ ನೀತಿಗೆ 1867ರಲ್ಲಿ ಸ್ವಲ್ಪ ಮಾರ್ಪಟು ಮಾಡಿ ಎಲ್ಲಾ ದುರಸ್ತಿ ಕಾಮಗಾರಿಗಳಿಗೆ ಮುಖ್ಯ ಇಂಜಿನಿಯರ್‌ಗಳನ್ನು ಹೊಣೆಗಾರರನ್ನಾಗಿಸಿ, ಸಣ್ಣ ಕೆರೆಗಳಿಗೆ ಸಂಬಂಧಿಸಿದ ನಿರ್ವಹಣೆ ಕುರಿತಂಥ ಅಧಿಕಾರವನ್ನು ಕಂದಾಯ ಅಧಿಕಾರಿಗಳೇ ಉಳಿಸಿಕೊಂಡರು.

ಕಂದಾಯ ಹಾಗೂ ಲೋಕೋಪಯೋಗಿ ಇಲಾಖೆ ಜಂಟಿಯಾಗಿ ನಿರ್ವಹಿಸುತ್ತಿದ್ದ ನೀರಾವರಿ ಕಾರ್ಯಗಳ ಬಗ್ಗೆ ಉಂಟಾದ ಗೊಂದಲಗಳ ನಿವಾರಣೆ ಸಲುವಾಗಿ 1872-73ರಲ್ಲಿ ಪ್ರತ್ಯೇಕ ನೀರಾವರಿ ಇಲಾಖೆ ಕಂದಾಯ ಮತ್ತು ಲೋಕೋಪಯೋಗಿ ಇಲಾಖೆಗಳಿಂದ ಮುಕ್ತಿ ಹೊಂದಿ ಸ್ವತಂತ್ರ ಅಸ್ತಿತ್ವ ಪಡೆಯಿತು. ಮೈಸೂರು ರಾಜ್ಯದ ನೀರಾವರಿ ಇಲಾಖೆ supdt Engineer ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದು. ಸಂಸ್ಥಾನದ ನೀರಾವರಿ ಕಾಮಗಾರಿಗಳ ನಿರ್ಮಾಣ ಮತ್ತು ದುರಸ್ತಿ ಕುರಿತಂತೆ ಸ್ಪಷ್ಟ ಹಾಗೂ ನಿರ್ದಿಷ್ಟ ನೀತಿ ರೂಪ ಪಡೆಯಿತು.[9]

ಈ ಹಿನ್ನೆಲೆಯಲ್ಲಿ ಮೇ॥ ಸ್ಯಾಂಕಿ ಪ್ರತಿಪಾದಿಸಿದ್ದ 'ಸರಣಿ' ಪದ್ಧತಿ ಜಾರಿಗೊಳಿಸಲಾಯಿತು. 1873ರಲ್ಲಿ ಜಾರಿಗೆ ಬಂದ ಸರಣಿ ಪದ್ಧತಿಯಲ್ಲಿ ಹಲವು ಜಿಲ್ಲೆಗಳಲ್ಲಿನ ಮುಖ್ಯ ನದಿಗಳ ಸರಣಿಗಳಡಿಯಲ್ಲಿ ಬರುವ ಕೆರೆಗಳ ದುರಸ್ತಿ ಕಾರ್ಯ ಚಾಲನೆಗೊಂಡಿತು.[10]

ಆದರೆ ರಾಜ್ಯದಲ್ಲಿ ತಲೆದೋರಿದ ಕ್ಷಾಮ, ಬರಗಾಲದ ಪರಿಸ್ಥಿತಿ ಹಾಗೂ ಹಣಕಾಸಿನ ತೊಡಕುಗಳ ಪರಿಣಾಮವಾಗಿ ಮೇಲ್ಕಂಡ ಸರಣಿ ಪದ್ಧತಿಯೂ ನೆನೆಗುದಿಗೆ ಬಿದ್ದಿತು. ಸಂಸ್ಥಾನದಲ್ಲಿ ಕೆರೆ ನೀರಾವರಿ ಪದ್ಧತಿಯನ್ನು ವ್ಯವಸ್ಥಿತಗೊಳಿಸುವ ಮತ್ತೊಂದು ಪ್ರಯತ್ನವಾಗಿ 1878ರಲ್ಲಿ 'ಮೈಸೂರು ಟ್ಯಾಂಕ್ ಕೋಡ್'ನ್ನು ರೂಪಿಸಲಾಯಿತು.[11]

–2–

ಭೂ ಸರ್ವೇಕ್ಷಣಾಕಾರ್ಯ ಮುಗಿದು ಭೂ ಒಡುವಳಿ ಹಾಗೂ ನೀರಾವರಿ ಅಚ್ಚುಕಟ್ಟು ಕುರಿತಂತೆ ಮಾಹಿತಿ ದಾಖಲೆಗಳು ಲಭ್ಯವಾದ ನಂತರ ನೀರಾವರಿ ಸಲುವಾಗಿ ಸರ್ಕಾರ ವೆಚ್ಚಮಾಡಿದ ಹಣವನ್ನು ತುಂಬಿಕೊಡುವ ಜವಾಬ್ದಾರಿ ಅಚ್ಚುಕಟ್ಟುದಾರರದಾಗಿ ಈ ವೆಚ್ಚವನ್ನು ನೀರಾವರಿ ಶುಲ್ಕ ರೂಪದಲ್ಲಿ ಸಲ್ಲಿಸುವ ಪ್ರಸ್ತಾವನೆಗಳನ್ನು ಒಳಗೊಂಡ ಸರ್ಕಾರಿ ನಡಾವಳಿಗಳು ಹಾಗೂ 'ಮೈಸೂರು ಟ್ಯಾಂಕ್ ಕೋಡ್'ನ ಕರಡು ಪತ್ರವನ್ನು ಗೌರ್ನರ್ ಜನರಲ್‌ಗೆ ಕಳುಹಿಸಲಾಯಿತು. ಇದು ಸಂಸ್ಥಾನದಲ್ಲಿನ ಕೆರೆ ನೀರಾವರಿ ಕುರಿತಂತೆ ವ್ಯಾಪಕವಾಗಿ ನಡೆದ ಚರ್ಚೆ ತಜ್ಞರ ತಾಂತ್ರಿಕ ಜಿಜ್ಞಾಸೆಗೆ ವಸ್ತುವಾಯಿತೇ ಹೊರತು ಅದರ ಫಲಶ್ರುತಿ ಮಾತ್ರ ನಿರಾಶಾದಾಯಕವಾಗಿದ್ದಿತು.[12]

ಕೆರೆ ಕಾಮಗಾರಿಗಳನ್ನು ಇಲಾಖೆ ದುರಸ್ತಿ ಮಾಡಬೇಕೆ? ಅಥವಾ ಕಂದಾಯ ಇಲಾಖೆ ದುರಸ್ತಿ ಮಾಡಬೇಕೆ? ಇಲಾಖಾ ಸಂಘಟನೆ, ಅಧಿಕಾರಿಗಳು ದೇಶೀಯರೆ? ವಿದೇಶಿಯರೇ? ಮತ್ತು ದುರಸ್ತಿಗೆ ವೆಚ್ಚ ಮಾಡಬೇಕಾದ ಹಣ – ಈ ರೀತಿ ವ್ಯರ್ಥಪತ್ರ ವ್ಯವಹಾರಗಳು ನಡೆಯುತ್ತಿರುವಾಗ ಕೆರೆ ನೀರಾವರಿ ವ್ಯವಸ್ಥೆ ಅವನತಿಯತ್ತ ಸಾಗಿ ಬರಗಾಲದ ಭೀಕರತೆಗೆ ಎಡೆ ಮಾಡಿಕೊಟ್ಟಿತು.

ಬ್ರಿಟಿಷ್ ಸರ್ಕಾರ ಕೆರೆ ನೀರಾವರಿ ವ್ಯವಸ್ಥೆಯ ಬಗ್ಗೆ ಸ್ಪಷ್ಟ ನೀತಿ ತಳೆಯದೆ ಅನಗತ್ಯ ಚರ್ಚೆಯಲ್ಲಿ ತೊಡಗಿ, ಹಣಕಾಸನ್ನು ಈ ವಲಯದಲ್ಲಿ ತೊಡಗಿಸದಿರುವುದಕ್ಕೆ ಸಂಪನ್ಮೂಲಗಳ ಕೊರತೆ ಕಾರಣವಾಗಿರಲಿಲ್ಲ. ಏಕೆಂದರೆ, ಇದೇ ಅವಧಿಯಲ್ಲಿ ಬ್ರಿಟಿಷರು ಮೈಸೂರು ಸಂಸ್ಥಾನದಲ್ಲಿ ರೈಲ್ವೆ ಅಭಿವೃದ್ಧಿ ಪಡಿಸಲು ಅತೀವ ಆಸಕ್ತಿ ತೋರಿದ್ದು ಹಾಗೂ ಹಣವೆಚ್ಚ ಮಾಡಿರುವುದು ಕಂಡು ಬರುತ್ತದೆ.

ಕೆರೆ ನೀರಾವರಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಕುರಿತಂತೆ ಬರೀ ಚರ್ಚೆಯಲ್ಲಿ ತೊಡಗಿದ ಸರ್ಕಾರ, ಈ ನಿಟ್ಟಿನಲ್ಲಿ ವಿಫಲವಾದುದನ್ನು ಮರೆಮಾಡುವ ಪ್ರಯತ್ನದಲ್ಲಿ ಈ ಪರಿಸ್ಥಿತಿಗೆ ಕೆರೆ ಕಾಲುವೆಗಳ ದುರಸ್ತಿಯ ಜವಾಬ್ದಾರಿಯನ್ನು ಪರಂಪರಾನುಗತವಾಗಿ ನಡೆಸಿಕೊಂಡು ಬರುತ್ತಿದ್ದ ಕೊಡುಗೈದಾರರ ಮೇಲೆ ಹೊರಿಸಿತು. ಈ ಇನಾಂದಾರರು ಹಿಂದಿನಿಂದಲೂ ತಾವು ಅಥವಾ ವಂಶಸ್ಥರು ನಿರ್ಮಿಸಿದ ಕೆರೆಗಳ ಅಚ್ಚುಕಟ್ಟಿನ ಒಂದು ಭಾಗವನ್ನು ಅನುಭವಿಸಿಕೊಂಡು ಬರುತ್ತಿದ್ದು, ಹಾಗೆಯೇ ಕೆಲ ಸಂದರ್ಭದಲ್ಲಿ ಕೆರೆಯನ್ನು ಸುಸ್ಥಿತಿಯಲ್ಲಿಡಲು ಕಾಮಗಾರಿ ಕೈಗೊಳ್ಳುವ ಜವಾಬ್ದಾರಿ ಹೊತ್ತಿದ್ದರು. ವಸಾಹತು ಆಳ್ವಿಕೆಯ ಸಂದರ್ಭದಲ್ಲಿ ಇಂತಹ ಪರಂಪರಾನುತಗತವಾದ ರೂಢಿ ರಿವಾಜುಗಳು ಅನೇಕ ವೇಳೆ ಮೂಲೆ ಗುಂಪಾಗಿ ಕೆರೆಗಳು ನಿರ್ಲಕ್ಷ್ಯಕ್ಕೆ ಒಳಗಾದವು. ಹಾಗಾಗಿ ಇವನ್ನು ವಾಪಸು ಪಡೆಯುವ ಅಥವಾ Quit-rent ಪಡೆದು ಅವುಗಳನ್ನು ಅವರಲ್ಲಿಯೇ ಖಾಯಂಗೊಳಿಸುವ ಪ್ರಸ್ತಾವಣೆ ಇನಾಂ ಕಮೀಷನರ್ ಪರಿಶೀಲಿಸಿ 1874 ರಿಂದ ಪೂರ್ವಾನ್ವಯವಾಗಿ ಜಾರಿಗೊಳಿಸಿತು.[13]

–3–

ಮೈಸೂರಿನ ಆರ್ಥಿಕ ವ್ಯವಸ್ಥೆ ವಸಾಹತುಶಾಹಿ ಆರ್ಥಿಕ ಸ್ಥಿತಿಗೆ ಸಹಾಯಕವಾಗಿರಬೇಕಾಗಿತ್ತು. ವಸಾಹತುಶಾಹಿ ವ್ಯವಸ್ಥೆ ಬೇರೆ ರೀತಿಯಲ್ಲಿರುವ ಸಾಧ್ಯವಿರಲಿಲ್ಲ! ಈ ಆರ್ಥಿಕ ಅಧೀನತೆಯ ಇತಿಹಾಸದಲ್ಲಿ ರಾಜ್ಯದ ನೀರಾವರಿ ಕಾಮಗಾರಿಗಳ ಬಗ್ಗೆ ಕಂಪನಿ ಸರ್ಕಾರ ಹಾಗೂ ಸಾರ್ವಭೌಮ ಸರ್ಕಾರದ ನಿಲುವುಗಳು ಪ್ರಮುಖವಾಗಿದ್ದವು. ರಾಜ್ಯದ ಆಡಳಿತದ ಮೇಲೆ ಪೂರ್ಣ ಹತೋಟಿ ಮತ್ತು ವಿಶೇಷವಾಗಿ ರಾಜ್ಯದ ಸಂಪತ್ತು ಹಾಗೂ ಆದಾಯದ ಮೇಲಿನ ಆಸಕ್ತಿಯಿಂದಾಗಿ ನೀರಾವರಿ ಕ್ಷೇತ್ರವು ಗಮನ ಸೆಳೆಯುವಂತಾಯಿತು.

ಮೇಜರ್ ಸ್ಯಾಂಕಿ ಹೇಳಿರುವಂತೆ "ರಾಜ್ಯದ ಜನತೆಯ ಅಸ್ತಿತ್ವ ಮತ್ತು ಏಳಿಗೆ ಈ ಕೆರೆ ಪದ್ಧತಿಯ ನೀರಾವರಿಯನ್ನೆ ಅವಲಂಬಿಸಿತ್ತು" ಎಂಬುದನ್ನು ಮನಗೊಂಡು, ಸಂಸ್ಥಾನದಾದ್ಯಂತ ವ್ಯವಸ್ಥಿತವಾಗಿ ಬೆಳೆದು ಬಂದಿದ್ದ ಕೆರೆ ನೀರಾವರಿ ಚೌಕಟ್ಟನ್ನು ಗ್ರಹಿಸಿ, ವಸ್ತುನಿಷ್ಠ ವರದಿ ನೀಡಿ, ಭವಿಷ್ಯದ ಯೋಜನೆಗಳಿಗೆ ಅಗತ್ಯವಾದ ಸೈದ್ಧಾಂತಿಕ ಮತ್ತು ವೈಜ್ಞಾನಿಕ ನೆಲೆಯೊಂದನ್ನು ರೂಪಿಸಿದ ಕೀರ್ತಿ ಸ್ಯಾಂಕಿಯವರದ್ದಾಗಿದೆ. ಸಾಮ್ರಾಜ್ಯಶಾಹಿ ಹಾಗೂ ವಸಾಹತು ಚೌಕಟ್ಟಿನಲ್ಲಿ ಕೇಂದ್ರಿಕೃತ ಅಧಿಕಾರಶಾಹಿ ವ್ಯವಸ್ಥೆಯ ಮಿತಿಗಳ ನಡುವೆಯೂ ಸ್ಯಾಂಕಿ ಆಶಾಕಿರಣವಾಗಿ ಕಂಡುಬರುತ್ತಾರೆ.[14]

ಒಂದೆಡೆ ಪರಂಪರಾನುಗತ ಚೌಕಟ್ಟಿನ ವೈಶಿಷ್ಟಗಳನ್ನು ಮೆಚ್ಚಿಕೊಳ್ಳುತ್ತಾ, ಸ್ಥಳೀಯ ಜನರ ಕೌಶಲ್ಯ, ಪಾಲ್ಗೊಳ್ಳುವಿಕೆಗಳನ್ನು ಸ್ಮರಿಸಿಕೊಳ್ಳುತ್ತಾ, ಮತ್ತೊಂದೆಡೆ, ಕೆರೆ ವ್ಯವಸ್ಥೆಯ ಮಿತಿಗಳನ್ನು ವೈಭವೀಕರಿಸುತ್ತಾ, ತಾಂತ್ರಿಕ ನಿರ್ದೇಶನದ ಅಗತ್ಯಗಳನ್ನು ಮನಗೊಂಡು, ಇಲಾಖಾ ಚೌಕಟ್ಟನ್ನು ನಿರ್ಮಿಸಿತಾದರೂ, ಬಹುತೇಕ ಕಾಮಗಾರಿಗಳನ್ನು ಇಲಾಖೆಗೆ ವಹಿಸದೆ ಕಾಲದೂಡಿತು. ಹಾಗಾಗಿ ಅವರ ಪ್ರಯತ್ನಗಳಿಗೆ ಅಗತ್ಯವಾದ ಬದ್ಧತೆ ಇರಲಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಅರೆ ಮನಸ್ಸಿನ ಪ್ರಯತ್ನಗಳಾಗಿ ಗೋಚರಿಸಿದವು.

ಕೆರೆಗಳ ದುರಸ್ತಿಗಾಗಿ ಅಗತ್ಯವಿರುವ ಹಣದ ವಿಚಾರದಲ್ಲಿ ಭಾರತ ಸರ್ಕಾರ ಅಂತಹ ವೆಚ್ಚ ನಿಜವಾಗಿಯೂ ಹೆಚ್ಚಿನ ಆದಾಯವನ್ನು ತರುವುದೇ ಎಂದು ಯೋಚಿಸುತ್ತಾದರೂ, ರೈಲ್ವೆ ನಿರ್ಮಾಣದ ವಿಷಯದಲ್ಲಿ ಈ ಪ್ರಶ್ನೆಯನ್ನೆ ಎತ್ತಲಿಲ್ಲ. ಪರಂಪರಾನುಗತವಾಗಿ ಬೆಳೆದು ಬಂದಿದ್ದ ಕೆರೆ ನೀರಾವರಿ ಚೌಕಟ್ಟು, ಕೆಳಸ್ತರದಿಂದಲೂ ಒಂದು ಕೆರೆ ನೀರಾವರಿ ಚೌಕಟ್ಟು, ಕೆಳಸ್ತರದಿಂದಲೂ ಒಂದು ರೀತಿಯ ಅಧಿಕಾರದ ನೆಲೆಗಳಾಗಿ ಕಾರ್ಯನಿರ್ವಹಿಸುತ್ತ ಬಂದಿದ್ದವು. ಹಾಗಾಗಿ ವಸಾಹತು ಚೌಕಟ್ಟಿಗೆ ಒಳಪಟ್ಟಾಗಿನಿಂದ, ವ್ಯವಸ್ಥೆಗೆ ಪೂರಕವಾಗಿದ್ದ ಇನಾಂ, ಕೊಡುಗೈ, ಮತ್ತಿತರ ಸವಲತ್ತುಗಳನ್ನು ನಾಶ ಪಡಿಸುತ್ತ ಬಂದದು ಕೆರೆ ನೀರಾವರಿ ಚೌಕಟ್ಟಿನ ಪತನಕ್ಕೆ ಕಾರಣವಾಯಿತು. ಕೆರೆ ಹಾಗೂ ರೈಲ್ವೆ ಇವೆರಡು ಅಧಿಕಾರ ಚಲಾಯಿಸುವ ಬಲವನ್ನು ನೀಡುತ್ತವೆ. ಆದರೆ ಕೆರೆಗಳ ಸಂಬಂಧವಾಗಿ ಈ ಬಲ ಜನರ ಕೈಯಲ್ಲಿದ್ದರೆ ಅದು ವಸಾಹತು ವ್ಯವಸ್ಥೆಗೆ ಅಪಾಯಕಾರಿಯಾದುದು. ರೈಲ್ವೆಗೆ ಸಂಬಂಧಿಸಿದಂತೆ, ಅವುಗಳ ಬಲ ಪ್ರಭುತ್ವದ ಹತೋಟಿಯಲ್ಲಿರುತ್ತದೆ. ಸ್ವಾಭಾವಿಕವಾಗಿ ಅವುಗಳು ಹೆಚ್ಚಿನ ಪ್ರಾಶಸ್ತ್ಯ ಪಡೆದವು.[15]

ಒಟ್ಟಾರೆ, 50 ವರ್ಷಗಳ ಅವಧಿಯಲ್ಲಿ ಬ್ರಿಟಿಷ್ ಸರ್ಕಾರ ಸಂಸ್ಥಾನದಲ್ಲಿ ಅನುಸರಿಸಿದ ನೀರಾವರಿ ನೀತಿಯಲ್ಲಿ ಮೂರು ಮುಖ್ಯ ಮಜಲುಗಳನ್ನು ಗುರುತಿಸಬಹುದಾಗಿದೆ. ಮೊದಲ ಹಂತದಲ್ಲಿ 1831–1856 ರವರೆಗೆ ಆದಾಯದ ನಿರೀಕ್ಷೆ ಚೌಕಟ್ಟಿನಲ್ಲಿ ಗಮನಾರ್ಹ ಬದಲಾವಣೆ ಇಲ್ಲದ ಯಥಾಸ್ಥಿತಿ, 1856–1878ರವರೆಗೆ ಇಲಾಖಾ ಚೌಕಟ್ಟಿನ ನಿರ್ಮಾಣದೊಂದಿಗೆ ಸರಣಿ ಪದ್ಧತಿ ಮತ್ತಿತರ ನೀತಿಯ ರೂಪರೇಖೆಗಳು, ಹಾಗೂ 1878–1881ರವರೆಗೆ ನೀರಾವರಿಯಿಂದ ರೈಲ್ವೆಗೆ ಆದ್ಯತೆಯ ವರ್ಗಾವಣೆ.

ಕೊನೆ ಟಿಪ್ಪಣಿಗಳು

1. Hetne B., 1978, *The Political Economy of Indirect rule (1881-1947)*, ನೋಡಿ.
2. Hayavadana Rao C., 1930, *Mysore, Gazetteer - Compiled for Government Vol-5.* Pp 20-21.
3. Letter No.14, 2nd March 1855 By *Mark Cubbon Papers Related to Tank Irrigation.* Bangalore: Karnataka state Archieves.
4. Chief Commissioner of Mysore Proclamation Dated: 23rd March 1863. *Papers Related to Tank Irrigation.* Bangalore: Karnataka State archieves.
5. Letter from secretary to Govt. of India No. 25 PWD (Govt. of India) to the Commissioner of Mysore, (KSA Bangalore).
6. Letter from Major San Key Chief Engineer to Secretary to the Commissioner for the Govt. of the territories of His Highness to Maharaja of Mysore Dated 4 February 1868, Para 13.
7. ನಾಗರಾಜ ಟಿ.ವಿ., 2000, *ಮೈಸೂರು ಸಂಸ್ಥಾನದಲ್ಲಿ ನೀರಾವರಿ: ಕೋಲಾರ ಜಿಲ್ಲೆ ಒಂದು ಅಧ್ಯಯನ (1800–1956)* ಪಿಎಚ್.ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರೌಢಪ್ರಬಂಧ.
8. Hayavadana Rao C., *Mysore Gazetteer Vol-3*, Pp 366.
9. Ibid, Page 367.
10. *Letter from under secretary to Chief Commissioner of Mysore. Irrigation Branch to the Secretary Govt. Of India PWD No.134-1610 Simla* Dated 22nd June 1872.
11. *Draft Mysore Tank Code* prepared by Elliot and C.S.Moucriett Dated 15 April 1878, Pp.217.
12. ನಾಗರಾಜ ಟಿ.ವಿ., 2000, ಪೂರ್ವೋಕ್ತ.
13. Letter from Chief Commissioner of Mysore to the Secretary to Govt. of India Calcutta No.4275- Revenue 202 Dated 18 November 1878.
14. ನಾಗರಾಜ ಟಿ.ವಿ., 2000, ಪೂರ್ವೋಕ್ತ.
15. ರಾಮಕೃಷ್ಣನ್ ಆರ್., "ಮೈಸೂರ್ ಟ್ಯಾಂಕ್ ಕೋಡ್: ಮೈಸೂರು ರಾಜ್ಯದ ಕೆರೆಗಳ ಬಗ್ಗೆ ವಸಾಹತುಶಾಹಿ ನಿಲುವು: ಒಂದು ಸಮೀಕ್ಷೆ 1799 ರಿಂದ 1878)", ಪು.184.

ಪರಾಮರ್ಶನ ಗ್ರಂಥಗಳು

1. ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿರುವ ಕೆರೆ ನೀರಾವರಿಗೆ ಸಂಬಂಧಿಸಿದ ಕಡತಗಳು.
2. ನಾಗರಾಜ ಟಿ.ವಿ., 2000, *ಮೈಸೂರು ಸಂಸ್ಥಾನದಲ್ಲಿ ನೀರಾವರಿ: ಕೋಲಾರ ಜಿಲ್ಲೆ ಒಂದು ಅಧ್ಯಯನ* (1800–1956) ಪಿಎಚ್.ಡಿ, ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರೌಢಪ್ರಬಂಧ.
3. ರಾಮಕೃಷ್ಣನ್ ಆರ್., 1991, 'ಮೈಸೂರು ಟ್ಯಾಂಕ್ ಕೋಡ್: ಮೈಸೂರು ರಾಜ್ಯದ ಕೆರೆಗಳ ಬಗ್ಗೆ ವಸಾಹತುಶಾಹಿ ನಿಲುವು: ಒಂದು ಸಮೀಕ್ಷೆ 1799 ರಿಂದ 1878', ಸೂರ್ಯನಾಥ ಕಾಮತ್ ಮತ್ತಿತರರು, (ಸಂ.), *ಇತಿಹಾಸ ದರ್ಶನ ಸಂಪುಟ–7.* ಬೆಂಗಳೂರು: ಕರ್ನಾಟಕ ಇತಿಹಾಸ ಅಕಾದೆಮಿ.
4. Hetne B., 1978, *The Political Economy of Indirect rule (1881-1947).* New Delhi: Ambika Publications.
5. Hayavadana Rao C., (Ed.), 1930, *Mysore, Gazetteer - Compiled for Government, Vol-3 & 5.* Bangalore : Government Press.

■

ಬೆಂಗಳೂರು ಕಾಸ್ಮೊಪಾಲಿಟನ್ ನಗರ: ವಿದೇಶಿ ವರ್ತಕ ಸಮುದಾಯಗಳ ಪಾತ್ರ

▫ ಯಶೋಧ .ಪಿ
ಚರಿತ್ರೆ ವಿಭಾಗ
ಸಂಶೋಧನ ವಿಧ್ಯಾರ್ಥಿನಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
yashumagadi83@gmail.com

ಬೆಂಗಳೂರು ನಗರ ಇಂದು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಕಾಸ್ಮೊಪಾಲಿಟನ್ ನಗರವಾಗಿ ಗುರುತಿಸಿ ಕೊಂಡಿದೆ. ಬ್ರಿಟಿಶ್‌ರ ಆಡಳಿತಕ್ಕೆ ಒಳಪಟ್ಟ ಕಾಲದಿಂದ ಬೆಂಗಳೂರನ್ನು ಒಂದು ಕಾಸ್ಮೊಪಾಲಿಟನ್ ನಗರವಾಗಿ ಸಾಮಾನ್ಯವಾಗಿ ಗುರುತಿಸುತ್ತಾರೆ.[1] ಅದರಲ್ಲೂ 1805 ರಿಂದೀಚೆಗೆ ಬೆಂಗಳೂರು ದಂಡು ಪ್ರದೇಶವು ಬ್ರಿಟಿಶ್‌ರ ಸೈನಿಕ ನೆಲೆಯಾಗಿ ನಂತರ ನಾಗರಿಕ ನೆಲೆಯಾಯಿತು. ಆನಂತರವೇ ಕಾಸ್ಮೋಪಾಲಿಟನ್ ಸಂಸ್ಕೃತಿಯ ನಗರವಾಗಿ ಹೊರ ಹೊಮ್ಮಿತು ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[2] ಆದರೆ ವಸಾಹತು ಪೂರ್ವದ ಬೆಂಗಳೂರಿನಲ್ಲಿ ಕಾಸ್ಮೊಪಾಲಿಟನ್ ನಗರದ ಲಕ್ಷಣಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ವಸಾಹತು ಪೂರ್ವದಲ್ಲಿಯೇ ಒಂದು ಕಾಸ್ಮೊಪಾಲಿಟನ್ ನಗರವಾಗಿತ್ತೇ ಎಂಬುದನ್ನು ಪರಿಶೀಲಿಸುವ ಪ್ರಯತ್ನವನ್ನು ಈ ಬರವಣಿಗೆಯಲ್ಲಿ ನಡೆಸಲಾಗಿದೆ. ಈ ವಿಷಯ ಪ್ರವೇಶಕ್ಕೆ ಮುನ್ನ ಕಾಸ್ಮೊಪಾಲಿಟನ್ ಎಂದರೇನು? ಅದರ ಲಕ್ಷಣ ಗಳೇನು ಎಂಬುದನ್ನು ಅರಿಯುವುದು ಸೂಕ್ತವಾಗಿದೆ.

ಕಾಸ್ಮೊಪಾಲಿಟನ್ ಸಿಟಿ ಎಂಬ ಪದವು ಬಹುಸಂಸ್ಕೃತಿಯ ನಗರ ಅಥವಾ ವಿಶ್ವಸಂಸ್ಕೃತಿಯ ನೆಲೆ ಎಂಬ ಅರ್ಥವನ್ನು ನೀಡುತ್ತದೆ. ಒಂದು ಪ್ರದೇಶದಲ್ಲಿ ನೆಲೆಸಿರುವ ಜನರಲ್ಲಿ ವಿವಿಧ ಸಂಸ್ಕೃತಿಯನ್ನು ಕಾಣುವುದು ಸಾಮಾನ್ಯವಾಗಿ ತಿಳಿಯಬಹುದಾಗಿದೆ.

ಆಕ್ಸ್‌ಫರ್ಡ್ ನಿಘಂಟಿನ ಪ್ರಕಾರ, ಜಗತ್ತಿನ ಎಲ್ಲಾ ಭಾಗದ ಜನರ ಸಂಪರ್ಕವನ್ನು ಹೊಂದಿರುವ ಪ್ರದೇಶ ಎಂಬ ಅರ್ಥವನ್ನು ಈ ಪದವು ನೀಡುತ್ತದೆ.

ಮ್ಯಾಕ್‌ಮಿಲ್ಲನ್ ನಿಘಂಟಿನ ಪ್ರಕಾರ, ಬೇರೆ ದೇಶದ ಅಥವಾ ಬೇರೆ ಬೇರೆ ಸಂಸ್ಕೃತಿಯ ಜನರ ಪ್ರಭಾವವನ್ನು ಹೊಂದಿರುವ ಪ್ರದೇಶ ಎಂಬರ್ಥವನ್ನು ನೀಡುತ್ತದೆ.

ಒಟ್ಟಾರೆಯಾಗಿ ಮೇಲಿನ ವಾಕ್ಯಗಳಿಂದ ತಿಳಿದು ಬರುವ ಅರ್ಥಗಳಲ್ಲಿ ಒಂದೇ ತೆರನಾದ ಅರ್ಥಗಳನ್ನು ಕಾಣಬಹುದಾಗಿದೆ. ಇನ್ನು ಕಾಸ್ಮೊಪಾಲಿಟನ್ ನಗರದ ಲಕ್ಷಣಗಳನ್ನು ಗಮನಿಸುವುದಾದರೆ, ಉತ್ತಮ ವಾತಾವರಣ, ವಿಸ್ತಾರವಾದ ನಗರ ಪ್ರದೇಶ, ವಿವಿಧ ಧರ್ಮಗಳ ನೆಲೆ, ವಿವಿಧ ಸಾಂಸ್ಕೃತಿಕ ವೈವಿಧ್ಯತೆ, ಸಮ್ಮಿಲನ, ಧಾರ್ಮಿಕ ಸಹಿಷ್ಣುತೆ, ಕೈಗಾರಿಕಾ ಕೇಂದ್ರ, ಆರ್ಥಿಕ ಚಟುವಟಿಕೆಗಳ ಕೇಂದ್ರ, ರಾಜಧಾನಿ ಪ್ರದೇಶ, ಇತ್ಯಾದಿ ಲಕ್ಷಣಗಳನ್ನು ಹೊಂದಿದೆ. ಇದರ ಹಿನ್ನೆಲೆಯಲ್ಲಿ ವಿವಿಧ ಪ್ರದೇಶ ಮತ್ತು ದೇಶಗಳಿಂದ ಜನರು ಪ್ರಾಚೀನ ಕಾಲದಿಂದಲೂ ಬೆಂಗಳೂರಿಗೆ ವಲಸೆ ಬರುವ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಹೀಗೆ ವಿವಿಧ ಪ್ರದೇಶದಿಂದ ಬಂದ ಜನರು ವೈವಿಧ್ಯ ಶೈಲಿಗಳಲ್ಲಿ ನಿರ್ಮಿಸಿರುವ ವಾಸ್ತುಶಿಲ್ಪವನ್ನು ಬೆಂಗಳೂರು ಪ್ರದೇಶದಲ್ಲಿ ಕಾಣಬಹುದಾಗಿದೆ ಎಂಬ ವಿಚಾರವನ್ನು ಟಿ.ಪಿ. ಇಸ್ಸಾರ್‌ರವರು ತಮ್ಮ ಪುಸ್ತಕವಾದ *ದಿ ಸಿಟಿ ಬ್ಯುಟಿಫುಲ್‌*ನಲ್ಲಿ ವಿವರಿಸಿದ್ದಾರೆ.[3] ಈ ರೀತಿಯ ಒಂದು ಕಾಸ್ಮೊಪಾಲಿಟನ್ ಸ್ಥಿತಿಯನ್ನು ತಲುಪುವುದು ಸರಳವಾದ ಪ್ರಕ್ರಿಯೆಯಲ್ಲ. ಮೇಲ್ನೋಟಕ್ಕೆ ಕಂಡುಬರುವುದಕ್ಕಿಂತ ಮೊದಲೇ ಆಂತರಿಕವಾಗಿ ಆ ಲಕ್ಷಣಗಳು ಬೆಳವಣಿಗೆಯಾಗಿರುತ್ತವೆ. ಬೆಂಗಳೂರು ನಗರವನ್ನು ಗಮನಿಸುವುದಾದರೆ ಈ ಲಕ್ಷಣಗಳನ್ನು ಈ ಹಿಂದೆಯೇ ಹೊಂದಿತ್ತು.

ಬೆಂಗಳೂರು ಒಂದು ಕಾಸ್ಮೊಪಾಲಿಟನ್ ನಗರವಾಗಿ ಬೆಳೆದ ಹಂತಗಳನ್ನು ಅಧ್ಯಯನದ ದೃಷ್ಟಿಯಿಂದ ಎರಡು ಹಂತಗಳಾಗಿ ಮಾಡಿಕೊಳ್ಳಲಾಗಿದೆ. 1. ವಸಾಹತು ಪೂರ್ವಕಾಲ 2. ವಸಾಹತು ಕಾಲ.

* * *

ಕೆಂಪೇಗೌಡನಿಂದ ಸ್ಥಾಪಿತಗೊಂಡ ಬೆಂಗಳೂರು ಪ್ರದೇಶದಲ್ಲಿ ಕಾಸ್ಮೊಪಾಲಿಟನ್ ಲಕ್ಷಣಗಳು ಆರಂಭವಾಗಿದ್ದವು. ಅಷ್ಟೇ ಅಲ್ಲದೆ, ಮಾರುಕಟ್ಟೆಯ ವಿಸ್ತರಣೆಯೊಂದಿಗೆ ಅನೇಕ ದೇಶಗಳ ವರ್ತಕ ಸಮುದಾಯಗಳು ವ್ಯಾಪಾರ ವಾಣಿಜ್ಯೋದ್ಯಮಿಗಳನ್ನು ಇಲ್ಲಿಗೆ ಬಂದು ನೆಲೆಸುವಂತೆ ಆಹ್ವಾನಿಸಿದ್ದನ್ನು ಕಾಣಬಹುದು. ಇದರಿಂದ ಹೈದರಾಲಿ ಮತ್ತು ಟಿಪ್ಪು ಆಳ್ವಿಕೆಯ ವೇಳೆಗೆ ಸಂಪೂರ್ಣವಾಗಿ ಕಾಸ್ಮೊಪಾಲಿಟನ್ ನಗರವಾಗಿ ಬೆಳವಣಿಗೆಯಾಗಿತ್ತು. ಬ್ರಿಟಿಶರ ಆಳ್ವಿಕೆಯಲ್ಲಿ ಮುಂದುವರೆಯಿತು ಎಂದಷ್ಟೇ ಹೇಳಬಹುದು. ಬ್ರಿಟಿಶ್‌ರು ಬೆಂಗಳೂರನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿಯೇ ಪರ್ಷಿಯನ್ನರು, ಅರಬರು, ಐರೋಪ್ಯರು ಮೊದಲಾದ ಹಲವು ರಾಷ್ಟ್ರಗಳ ವ್ಯಾಪಾರಿಗಳು ಅಥವಾ ವರ್ತಕ ಸಮುದಾಯಗಳೊಂದಿಗೆ ಸಂಬಂಧವನ್ನು ಹೊಂದಿತ್ತು.

ಪ್ರಾಚೀನ ಕಾಲದಿಂದಲೂ ವಿದೇಶಿ ವರ್ತಕ ಸಂಬಂಧದ ಬಗೆಗಿನ ಕುರುಹುಗಳನ್ನು ಬೆಂಗಳೂರು ಪ್ರದೇಶದಲ್ಲಿ ಕಾಣಬಹುದಾಗಿದೆ. ರೋಮನ್ ನಾಣ್ಯಗಳು ಪತ್ತೆಯಾಗಿರುವುದು ಇದಕ್ಕೆ ಪೂರಕವಾಗಿದೆ.[4] ಹಾಗೆ ಕೆಂಪೇಗೌಡನ ಗಡಿಗೋಪುರದ ಗಂಟೆಯಲ್ಲಿ ಚೀನಿ ಬರಹಗಳು ಗಮನಾರ್ಹವಾಗಿದೆ.[5] ಇದರ ಬೆನ್ನಲ್ಲೇ, 1805ರಲ್ಲಿ ಸಮೀಕ್ಷೆಯನ್ನು ನಡೆಸಿದ

ಬುಕಾನನ್ ತಿಳಿಸಿರುವಂತೆ ಬೆಂಗಳೂರು ಪ್ರದೇಶದಲ್ಲಿ ಎಲ್ಲಾ ದೇಶದ ನಾಣ್ಯಗಳು ಚಲಾವಣೆಯಲ್ಲಿತ್ತು ಎಂಬುದು ಇನ್ನೂ ಹೆಚ್ಚಿನ ಪರಾಮರ್ಶೆಗೆ ಒಳಪಡಿಸಬೇಕಾದ ವಿಷಯವಾಗಿದೆ.[6] ಎಲ್ಲಾ ದೇಶದ ನಾಣ್ಯಗಳು ಒಂದೇ ಪ್ರದೇಶದಲ್ಲಿ ಚಲಾವಣೆಯಾಗುವ ವಾಣಿಜ್ಯ ಪ್ರದೇಶವಾಗಿ ರೂಪ ಪಡೆಯಲು ಯಾವುದೇ ಪ್ರದೇಶಕ್ಕೆ ಹಲವು ದಶಕಗಳೇ ಬೇಕಾಗುತ್ತದೆ ಎಂಬ ಸತ್ಯಾಂಶ ಗಮನಿಸಬೇಕಾಗಿದೆ. ಇಲ್ಲಿ ಎಲ್ಲಾ ದೇಶದ ನಾಣ್ಯಗಳು ಎಂದರೆ ವಿದೇಶಿಯ ನಾಣ್ಯಗಳೋ ಅಥವಾ ಭಾರತ ದೇಶದಲ್ಲಿನ ಬೇರೆ ಬೇರೆ ರಾಜ್ಯಗಳ ನಾಣ್ಯಗಳೋ ಎಂಬ ಗೊಂದಲವನ್ನು ಸೃಷ್ಟಿಸುತ್ತದೆ. ಆದರೆ ಬುಕಾನನ್ ಬರೆದಿರುವ ಪುಸ್ತಕದ ಶೀರ್ಷಿಕೆಯಿಂದಲೇ ಇಂದಿನ ನೆರೆಹೊರೆಯ ರಾಜ್ಯಗಳು, ಕರ್ನಾಟಕದ ಒಳಗಿರುವ ಅನೇಕ ಭಾಗಗಳು ಬೇರೆ ದೇಶಗಳೇ ಆಗಿದ್ದವು. ಅಂದಿನ ಸಂದರ್ಭದಲ್ಲಿ ಇಂದು ಕಂಡುಬರುವ ರಾಷ್ಟ್ರ ಮತ್ತು ರಾಜ್ಯದ ಪರಿಕಲ್ಪನೆ ಬೇರೆಯಾಗಿತ್ತು. 1799ರಲ್ಲಿ ಟಿಪ್ಪುವಿನ ಮರಣದ ನಂತರ ಆರೇ ವರ್ಷಗಳಲ್ಲಿ ಬೆಂಗಳೂರು ಪ್ರದೇಶ ಒಮ್ಮೆಲೆ ಕಾಸ್ಮೊಪಾಲಿಟನ್ ನಗರದ ಲಕ್ಷಣಗಳು ಬೆಳೆಯಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕಾಸ್ಮೊಪಾಲಿಟನ್ ನಗರದ ಅರ್ಥ, ಕಾಸ್ಮೊಪಾಲಿಟನ್ ನಗರ ಬೆಳವಣಿಗೆಯ ವಿವಿಧ ಹಂತಗಳನ್ನು ಬೆಂಗಳೂರು ಪ್ರದೇಶದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ವಿದೇಶಿ ವರ್ತಕ ಸಮುದಾಯಗಳ ಪಾತ್ರವನ್ನು ಕುರಿತು ಚರ್ಚಿಸುವ ಉದ್ದೇಶವನ್ನು ಈ ಲೇಖನ ಹೊಂದಿದೆ.

ಬೆಂಗಳೂರು ಕಾಸ್ಮೊಪಾಲಿಟನ್ ನಗರವಾಗಿ: ವಸಾಹತು ಪೂರ್ವ ಕಾಲ

ಕಾಸ್ಮೊಪಾಲಿಟನ್ ನಗರವನ್ನು ಸರಳವಾಗಿ ವಿಶ್ವ ಸಂಸ್ಕೃತಿಯ ನಗರ ಅಥವಾ ಬಹು ಸಂಸ್ಕೃತಿಯ ನಗರ ಎಂದು ಅರ್ಥೈಸಬಹುದಾಗಿದೆ. ಬೆಂಗಳೂರು ಈ ಸ್ವರೂಪದ ನಗರವಾಗಿ ಯಾವ ಹಂತದಲ್ಲಿ ರೂಪುಗೊಂಡಿತು ಎಂಬ ಪ್ರಶ್ನೆಯು ಸಹಜವಾಗಿ ಕಾಡುತ್ತದೆ. ಇದರ ಆರಂಭವನ್ನು ಬೆಂಗಳೂರಿನ ಅಸ್ತಿತ್ವಕ್ಕೆ ಕಾರಣ ಪುರುಷನಾದ ಕೆಂಪೇಗೌಡನ ಕಾಲದಿಂದಲೇ ಗುರುತಿಸಬಹುದು. ಬೇರೆ ಬೇರೆ ಪ್ರದೇಶದ ವಿವಿಧ ಸಂಸ್ಕೃತಿಗೆ ಸೇರಿದ ನಗರ್ತ, ಗಾಣಿಗ, ಬಣಜಿಗ, ಕುಂಬಾರ, ಅಕ್ಕಸಾಲಿ ಅನೇಕ ಸಮುದಾಯದ ವರ್ತಕರನ್ನು ಬೆಂಗಳೂರಿಗೆ ಬಂದು ನೆಲೆಸುವಂತೆ ಪ್ರೋತ್ಸಾಹಿಸಿದನು. ಈ ಹಿನ್ನೆಲೆಯಲ್ಲೇ ಹಲವು ಪೇಟೆ ಬೀದಿಗಳು ಸ್ಥಾಪಿತಗೊಂಡಿರುವುದು ಎಲ್ಲರಿಗೂ ತಿಳಿದ ವಿಚಾರವೇ ಸರಿ. ಎರಡನೇ ಹಂತವನ್ನು ಬಿಜಾಪುರದ ಸೇನಾಪತಿ ರಣದುಲ್ಲಾ ಖಾನ್‌ನೊಂದಿಗೆ ಗುರುತಿಸಬಹುದು. ಫಜಲ್ ಹಸನ್ ಅವರು *ಬ್ಯಾಂಗಲೂರ್ ಥ್ರೂ ದಿ ಏಜಸ್* ಎಂಬ ಕೃತಿಯಲ್ಲಿ ರಣದುಲ್ಲಾ ಖಾನ್‌ನ ಆಕ್ರಮಣದ ನಂತರ ಬೆಂಗಳೂರು ಪ್ರದೇಶದಲ್ಲಿ ಬಹು ಸಂಸ್ಕೃತಿಯ ನೆಲೆಯನ್ನು ಗುರುತಿಸುವರು. ಮೊಗಲರ ಸೈನ್ಯದ ಜೊತೆಗೆ ಅರಬರು, ಪರ್ಷಿಯನ್ನರು, ಆಫ್‌ಘನ್ನರು ಬಂದರೆಂದು ಉಲ್ಲೇಖಿಸಿರುತ್ತಾರೆ.[7] ಇದು ವಿವಿಧ ದೇಶಗಳ ವರ್ತಕ ಸಮುದಾಯಗಳು ಬೆಂಗಳೂರು ಪ್ರದೇಶದಲ್ಲಿ ಸಂಬಂಧವನ್ನು ಹೊಂದಿದ್ದರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಈ ವರ್ತಕ ಸಮುದಾಯಗಳನ್ನು ವಿದೇಶಿಯರು ಎಂದು ಕರೆಯಲು ದ್ವಂದ್ವ ಉಂಟಾಗುವುದು. ಏಕೆಂದರೆ, ಅರಬರು, ಪರ್ಷಿಯನ್ನರು, ಆಫಘಾನಿಸ್ತಾನಿಯನ್ನರು

ಬಹುತೇಕ ಸಂದರ್ಭದಲ್ಲಿ ವಿದೇಶಿ ಮೂಲದ ಸ್ಥಳೀಯ ನಿವಾಸಿಗಳಾಗಿದ್ದರು. ಜೊತೆಗೆ ಮೂಲ ದೇಶದೊಡನೆ ವ್ಯಾಪಾರ ಸಂಪರ್ಕಕ್ಕೆ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಉದಾಹರಣೆಗೆ, ಬೆಂಗಳೂರು ಪೇಟೆಯ ಸಮೀಪವಿರುವ ಲಬ್ಬೆ ವರ್ತಕ ಸಮುದಾಯದವರ ಮಸೀದಿಯನ್ನು ಕಾಣಬಹುದಾಗಿದೆ. ಲಬ್ಬೆ ಸಮುದಾಯವು ವಿದೇಶಿ ಮತ್ತು ದೇಶಿಯರ ಸಂಬಂಧದಿಂದ ಬಂದ ಒಂದು ಪ್ರಬಲ ವರ್ತಕ ಸಮುದಾಯವೆಂಬುದನ್ನು ಮರೆಯುವಂತಿಲ್ಲ. ಈ ಸಮುದಾಯದಲ್ಲಿ ಕೆಲವರು ವ್ಯಾಪಾರಿ ಚಟುವಟಿಕೆ ಮುಗಿಸಿ ತಮ್ಮ ತಾಯ್ನಾಡಿಗೆ ಹಿಂದಿರುಗುತ್ತಿದ್ದರೆ, ಮತ್ತೆ ಕೆಲವರು ಇಲ್ಲಿಯೇ ನೆಲೆ ನಿಂತರು. ಈ ತೆರನಾದ ಎರಡು ಲಕ್ಷಣಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ಮೊಘಲರನ್ನು ನಾವು ಭಾರತೀಯರು ಎಂದು ಕರೆಯುವುದು ಎಷ್ಟು ಸಮಂಜಸವೋ ಅಷ್ಟೇ ಇವರನ್ನೂ ಸಹ ಕರೆಯುವುದು ಸಮಂಜಸವಾಗಿದೆ. ಇದಕ್ಕೆ ಪೂರ್ವದಲ್ಲಿಯೇ ಮರಾಠರ ಅಧೀನಕ್ಕೆ ಒಳಪಟ್ಟಾಗ ಅಲ್ಲಿಯ ವರ್ತಕರ ಸಮುದಾಯಗಳು ಸಹ ಬಂದು ನೆಲೆಸಿದ್ದರು. ಈ ಅವಧಿಯನ್ನು ಕಾಸ್ಮೊಪಾಲಿಟನ್ ಸಿಟಿಯ ಪ್ರಾರಂಭಿಕ ಹಂತವೆಂದು ಗುರುತಿಸ ಬಹುದಾಗಿದೆ.

18ನೇ ಶತಮಾನದ ಉತ್ತರಾರ್ಧದಲ್ಲಿಯೇ ಬೆಂಗಳೂರು ಪ್ರದೇಶ ಸಂಪೂರ್ಣವಾಗಿ ಕಾಸ್ಮೊಪಾಲಿಟನ್ ನಗರದ ಸ್ಪಷ್ಟವಾದ ರೂಪು ರೇಷೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಹೈದರ್ ಮತ್ತು ಟಿಪ್ಪುವಿನ ಆಳ್ವಿಕೆಯಲ್ಲಿ ಬೆಂಗಳೂರು ಪ್ರದೇಶವು ಕಾಸ್ಮೊಪಾಲಿಟನ್ ಸಿಟಿಯ ದ್ವಿತೀಯ ಹಂತವನ್ನು ತಲುಪಿತ್ತೆನ್ನಬಹುದಾಗಿದೆ. ಈ ಹೊತ್ತಿಗಾಗಲೇ ಬೆಂಗಳೂರು ಪ್ರದೇಶವು ಒಂದು ಪ್ರಮುಖ ವಾಣಿಜ್ಯಕೇಂದ್ರ ಮತ್ತು ಉದ್ಯಮಕೇಂದ್ರವಾಗಿ ಬೆಳೆದಿತ್ತು. ಹೈದರ್ ಮತ್ತು ಟಿಪ್ಪುವಿನಲ್ಲಿದ್ದ ಪ್ರಯೋಗಾತ್ಮಕ ಮನೋಭಾವದಿಂದ ಬೇರೆ ಬೇರೆ ದೇಶ-ವಿದೇಶಗಳ ನುರಿತ ಕರಕುಶಲ ಕರ್ಮಿಗಳು, ಉದ್ಯಮಿಗಳು ಬೆಂಗಳೂರಿಗೆ ಬಂದು ನೆಲೆಸಿದರು. ಜೊತೆಗೆ ಹೊಸ ಬಗೆಯ ವಾಣಿಜ್ಯೋದ್ಯಮ ಮತ್ತು ಕೃಷಿ ವಾಣಿಜ್ಯೀಕರಣವು ಬೆಂಗಳೂರನ್ನು ಬೆಳೆಸಲು ಕಾರಣವಾಯಿತು.[8] ವ್ಯಾಪಾರ ವಾಣಿಜ್ಯೋದ್ಯಮದ ನೆಲೆಯಲ್ಲಿ ಹುಬ್ಬಳ್ಳಿ, ನರಗುಂದ, ನವಲುಗುಂದ, ಗುತ್ತಿ, ಕೃಷ್ಣಗಿರಿ, ಧಾರವಾಡ, ಅಥಣಿ, ಬಳ್ಳಾರಿಯಿಂದ ಮಾತ್ರವಲ್ಲದೇ, ಮಸ್ಕಟ್, ಪರ್ಷಿಯನ್, ಗಲ್ಫ್ ದೇಶಗಳಿಂದಲೂ ವರ್ತಕರು ಮಧ್ಯವರ್ತಿಗಳಾಗಿ ಬೆಂಗಳೂರಿನೊಂದಿಗೆ ಸಂಪರ್ಕವನ್ನು ಹೊಂದಿದ್ದರು.[9] ಬೆಂಗಳೂರಿನಲ್ಲಿ ಈ ಹೊತ್ತಿಗಾಗಲೇ ಫ್ರೆಂಚ್‌ರು ತಮ್ಮ ನೆಲೆಯನ್ನು ಸ್ಥಾಪಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗಿದೆ. ಬೆಂಗಳೂರಿನಲ್ಲಿ ನೆಲೆಸಿದ್ದ ಫ್ರೆಂಚ್ ವ್ಯಾಪಾರಿಯಾದ ಮ್ಯನ್ನೆರಾನ್‌ನನ್ನು 1787ರಲ್ಲಿ ಟಿಪ್ಪು ತನ್ನ ರಾಯಭಾರಿಯನ್ನು ಫ್ರಾನ್ಸಿಗೆ ಕಳುಹಿಸುವ ಸಂದರ್ಭದಲ್ಲಿ ಜೊತೆಗೆ ಕಳುಹಿಸಿಕೊಟ್ಟಿದ್ದನು. ಬೆಂಗಳೂರಿನ ತಾರಾಮಂಡಲದಲ್ಲಿ ಫ್ರೆಂಚ್ ತಂತ್ರಜ್ಞರನ್ನು ನೇಮಿಸಿದ್ದು ಅವರು ಟಿಪ್ಪುವಿನ ಸೈನಿಕರಿಗೆ ತರಬೇತಿ ನೀಡುತ್ತಿದ್ದರು ಎಂಬ ವಿಚಾರ ಗಮನಾರ್ಹ.[10] ಈ ಎಲ್ಲಾ ಅಂಶಗಳು ಬೆಂಗಳೂರು ಫ್ರೆಂಚ್ ವರ್ತಕ ಸಮುದಾಯಗಳ ನೆಲೆಯು ಸಹ ಆಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಂದಿಗೂ ಸಹ ಅವರ ನೆಲೆಗಳ ಕುರುಹುಗಳನ್ನು ಬೆಂಗಳೂರು ಪೇಟೆ ಮತ್ತು ದಂಡುಪ್ರದೇಶದಲ್ಲಿ ಕಾಣಬಹುದಾಗಿದೆ[11].

ಬೆಂಗಳೂರು ಕಾಸ್ಮೊಪಾಲಿಟನ್ ನಗರವಾಗಿ: ವಸಾಹತು ಕಾಲ

ನಾಲ್ಕನೇ ಆಂಗ್ಲೋ-ಮೈಸೂರು ಕದನದ ತರುವಾಯ ಬೆಂಗಳೂರು ಬ್ರಿಟಿಶ್‌ರ ವಶವಾಯಿತು. ವಸಾಹತುಶಾಹಿ ಆಳ್ವಿಕೆಗೊಳಪಟ್ಟ ನಂತರದಲ್ಲಿ ಕ್ರಮೇಣವಾಗಿ ಐರೋಪ್ಯ ವರ್ತಕ ಸಮುದಾಯಗಳು ಪೂರ್ವದಲ್ಲಿದ್ದ ಇತರ ವರ್ತಕ ಸಮುದಾಯಗಳಿಗಿಂತ ಪ್ರಬಲವಾದವು. ಐರೋಪ್ಯರಲ್ಲಿಯೂ ಬ್ರಿಟಿಶ್ ವ್ಯಾಪಾರಿಗಳು ಮೇಲುಗೈ ಸಾಧಿಸಿದರು. ಇದರೊಂದಿಗೆ 1813ರ ಚಾರ್ಟರ್ ಕಾಯ್ದೆ ಮುಕ್ತ ವ್ಯಾಪಾರ ಮತ್ತು ಮಿಷನರಿಗಳಿಗೆ ಭಾರತವನ್ನು ಪ್ರವೇಶಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಪರೋಕ್ಷವಾಗಿ ಬೆಂಗಳೂರಿನಲ್ಲಿ ಐರೋಪ್ಯ ಹೂಡಿಕೆಯನ್ನು ಹೆಚ್ಚಿಸಿತು. ಬೆಂಗಳೂರಿನ ವಾತಾವರಣವು ಉತ್ತಮವಾಗಿರುವುದರಿಂದಾಗಿ ಬೆಂಗಳೂರಿಗೆ ಬಂದು ನೆಲೆಕಂಡ ಯುರೋಪಿಯನ್ನರು ತಮ್ಮ ಹಣವನ್ನು ಭಾರತದಲ್ಲಿ ಹೂಡಲು ಅವಕಾಶ ಮಾಡಿಕೊಟ್ಟಿತ್ತಲ್ಲದೇ, ಮತ ಪ್ರಚಾರದ ಕಾರ್ಯದಲ್ಲಿ ತೊಡಗಿಸಿಕೊಂಡರು. ಈ ಸಮುದಾಯಗಳು ವಾಣಿಜ್ಯ ಬೆಳೆಗಳ ಕೃಷಿ ಚಟುವಟಿಕೆ ಮತ್ತು ಕೈಗಾರಿಕೆಯಲ್ಲಿ ಹಣ ತೊಡಗಿಸಲು ಆಸಕ್ತರಾಗಿದ್ದರು. ಹೀಗೆ ವ್ಯಾಪಾರಿ ನೆಲೆಯಲ್ಲಿ ಬಂದ ವಿದೇಶಿ ವರ್ತಕರು ಬೆಂಗಳೂರು ಪ್ರದೇಶದಲ್ಲಿ ಎಸ್ಟೇಟ್‌ಗಳನ್ನು ಸ್ಥಾಪಿಸಿದರು. ಫಲವಾಗಿ ಯುರೋಪಿನ ತರಕಾರಿಗಳ ತೋಟ, ಹಣ್ಣುಗಳ ತೋಟಗಳನ್ನು ಸ್ಥಾಪಿಸಿ ಬೆಂಗಳೂರು ದಂಡಿನಲ್ಲಿ ನೆಲೆನಿಂತಿದ್ದ ಬ್ರಿಟಿಶ್ ಸೈನ್ಯ ಮತ್ತು ಅಧಿಕಾರಿ ವರ್ಗಗಳಿಗೆ ಬೇಕಾದ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಆ ಸಂದರ್ಭದಲ್ಲಿಯೇ ಕಮರ್ಷಿಯಲ್ ಸ್ಟ್ರೀಟ್, ಸೌಥ್ ಪೇರೆಡ್‌ನಲ್ಲಿ ಹಲವು ಅಂಗಡಿಗಳನ್ನು ಮತ್ತು ಹೋಟೆಲ್‌ಗಳನ್ನು ತೆರೆಯಲಾಯಿತು. ಈ ಬೆಳವಣಿಗೆಯು ಬೆಂಗಳೂರು ಪ್ರದೇಶದಲ್ಲಿ ಕಾಸ್ಮೊಪಾಲಿಟನ್ ನಗರದ ವೇಗವನ್ನು ಹೆಚ್ಚಿಸಿತು. ಉದಾಹರಣೆಗೆ, ವೆಸ್ಟ್ ಎಂಡ್ ಹೋಟೆಲ್ ಗಲ್ಫ್ ಲಿಂಕ್ ಬಳಿ ವಿದೇಶಿ ಉದ್ಯಮಿಯಿಂದ ಸ್ಥಾಪಿತಗೊಂಡಿತ್ತು. ಮಿಸ್ಟರ್ ಸ್ಪೆಂಷರ್ ಅಂಡ್ ಕಂಪನಿ ಮತ್ತು ದಿ ಕಬ್ಬನ್ ಹೋಟೆಲ್ ಆ ಸಂದರ್ಭದ ಪ್ರಮುಖ ಹೋಟೆಲ್‌ಗಳಾಗಿದ್ದವು.[12] ಬೆಂಗಳೂರಿಗೆ ಬರುತ್ತಿದ್ದ ಪ್ರವಾಸಿಗರ ಕೈಪಿಡಿಗಳಲ್ಲಿ ಇದರ ಜಾಹೀರಾತಿದ್ದು, ಹೋಟೆಲ್ ಉದ್ಯಮವು ದೊಡ್ಡ ಮಟ್ಟದ ಉದ್ಯಮವಾಗಿತ್ತು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಇದರಿಂದ ಬೆಂಗಳೂರಿಗೆ ಭೇಟಿ ನೀಡುತ್ತಿದ್ದ ವಿದೇಶಿಯರ ಸಂಖ್ಯೆ ದೊಡ್ಡ ಮಟ್ಟದಲ್ಲಿರಬಹುದೆಂದು ಊಹಿಸಬಹುದಾಗಿದೆ. ಈ ಎಲ್ಲಾ ಅಂಶಗಳು ಬೆಂಗಳೂರು ಕಾಸ್ಮೊಪಾಲಿಟನ್ ಸಂಸ್ಕೃತಿಯ ನಗರವಾಗಿ ಹೊರಹೊಮ್ಮಿದ ಬಗೆಗೆ ಮಾತ್ರ ವಿವರಣೆಯನ್ನು ನೀಡದೇ ವಿದೇಶಿ ವರ್ತಕ ಸಮುದಾಯಗಳು ಬೆಂಗಳೂರು ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಪರೋಕ್ಷವಾಗಿ ತೆರೆದಿಡುತ್ತದೆ.

ಭಾರತದಲ್ಲಿ 1833ರ ಚಾರ್ಟರ್ ಆಕ್ಟ್ ಮೂಲಕ ಕಂಪನಿಯ ಏಕಸ್ವಾಮ್ಯ ಕೊನೆಗೊಂಡಾಗ ಯೂರೋಪಿನ ವಿವಿಧ ರಾಷ್ಟ್ರಗಳಿಂದ ವಿದೇಶಿ ವರ್ತಕರು ಭಾರತಕ್ಕೆ ಬರತೊಡಗಿದರು. ಈ ಹಿನ್ನೆಲೆಯಲ್ಲಿ ಇಟಲಿ, ಡಚ್ಚ್, ಪೋರ್ಚುಗೀಸ್, ಫ್ರೆಂಚ್, ಸ್ಕಾಟ್‌ಲೆಂಡ್, ಅಮೇರಿಕಾ ಮೊದಲಾದ ದೇಶದ ವರ್ತಕರು ಬೆಂಗಳೂರು ಪ್ರದೇಶದ ಜೊತೆಗೆ ಸಂಬಂಧವನ್ನು ಹೊಂದುವಲ್ಲಿ ಈ ಕಾಯ್ದೆಯು ಅವಕಾಶವನ್ನು ಕಲ್ಪಿಸಿತು. ಈ ನಿಟ್ಟಿನಲ್ಲಿ

ಅವರ ಆರ್ಥಿಕ ಚಟುವಟಿಕೆಯ ನೆರಳನ್ನು ಗುರುತಿಸಬಹುದಾದರೂ ಮತ್ತು ಜನಗಣತಿಯಲ್ಲಿ ಇವರ ಸಂಖ್ಯೆಯನ್ನು ನೀಡಿದ್ದರೂ ಸಹ ಎಷ್ಟು ಸಂಖ್ಯೆಯ ವರ್ತಕರು ಬೆಂಗಳೂರು ಪ್ರದೇಶದಲ್ಲಿ ನೆಲೆಸಿದ್ದರು ಎಂಬುದರ ಬಗೆಗೆ ಅಂಕಿ-ಸಂಖ್ಯೆಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಕಾರಣ, ಸೈನ್ಯ ಮತ್ತು ಆಡಳಿತದಲ್ಲಿ ತೊಡಗಿದವರ ಒಟ್ಟು ಮೊತ್ತವನ್ನು ನೀಡಿರುವುದರಿಂದಾಗಿ ವಿದೇಶಿ ವರ್ತಕ ಸಂಖ್ಯೆಯನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ. ಆದರೂ ಸಹ ವಿದೇಶಿ ವರ್ತಕರ ಕಾರ್ಯಚಟುವಟಿಕೆಯಲ್ಲಿ ಅವರ ನೆಲೆ ಮತ್ತು ಬೆಂಗಳೂರು ಕಾಸ್ಮೊಪಾಲಿಟನ್ ನಗರವಾಗಿ ಗುರುತಿಸಿಕೊಂಡಿರುವುದನ್ನು ತಿಳಿಯಬಹುದಾಗಿದೆ. ಬ್ರಿಟಿಶ್ ಕಂಪನಿಯು ಓರ್ವ ವ್ಯಕ್ತಿಯನ್ನು ಬೆಂಗಳೂರಿನ ಸೈನ್ಯ ಅಧಿಕಾರಿಯಾಗಿಯೋ ಅಥವಾ ಆಡಳಿತ ಅಧಿಕಾರಿಯಾಗಿಯೋ ಕಳುಹಿಸುವಾಗ ಆ ವ್ಯಕ್ತಿ ತನ್ನ ಕುಟುಂಬದೊಂದಿಗೆ ಮಾತ್ರ ಭಾರತಕ್ಕೆ ಬರುತ್ತಿರಲ್ಲಿಲ್ಲ. ಆತನೊಂದಿಗೆ ಆತನಿಗೆ ಬೇಕಾದ ಸಹ ಪರಿಚಾರಕರೊಂದಿಗೆ ಬರುತ್ತಿದ್ದರು. ಅವರೊಂದಿಗೆ ಕನಿಷ್ಠವೆಂದರೂ ಹತ್ತರಿಂದ ಇಪ್ಪತ್ತು ಜನ ಬರುತ್ತಿದ್ದರು. ಅದೇ ರೀತಿಯಲ್ಲಿ ಓರ್ವ ವಿದೇಶಿ ವರ್ತಕನು ಸಹ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬರುವಾಗ ತನ್ನ ಪರಿವಾರದೊಂದಿಗೆ ಬಂದು ನೆಲೆಸುತ್ತಿದ್ದರು.

ಇದಕ್ಕೆ ಸಾಕ್ಷಿಯಾಗಿ ಅಲಿ ಅಸ್ಗರ್ (ಮಿರ್ಜಾ ಇಸ್ಮಾಯಿಲ್ ಅವರ ತಾತ) ಪರ್ಷಿಯಾದಿಂದ ಕುದುರೆ ವ್ಯಾಪಾರದ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಬರುವಾಗ ಕನಿಷ್ಠ 50 ಮಂದಿಯೊಂದಿಗೆ ಬಂದು ನೆಲೆಸಿದರು ಎಂಬ ಅಂಶವು ತಿಳಿಯುತ್ತದೆ.[13] ಹೀಗೆ ಒಬ್ಬಿಬ್ಬರು ತಾನೇ ಭಾರತಕ್ಕೆ ಬಂದಿದ್ದು ಅಥವಾ ಬೆಂಗಳೂರಿಗೆ ಬಂದಿದ್ದು ಎಂದು ಸಾಮಾನ್ಯವಾಗಿ ತಳ್ಳಿಹಾಕುವಂತಿಲ್ಲ. ಕೆಲವರು ತಮ್ಮನ್ನು ಆಡಳಿತ ಮತ್ತು ಸಾಮಾಜಿಕ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡರೆ ಇನ್ನೂ ಕೆಲವರು ತಮ್ಮ ವ್ಯಾಪಾರಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿರುತ್ತಾರೆ. ಅಂತಹ ಸಮುದಾಯಗಳ ಕಾರ್ಯ ನಿರ್ವಹಣೆ ಮತ್ತು ಇನ್ನಿತರ ಅಂಶಗಳು ದಾಖಲೆಗಳಲ್ಲಿ ಸಿಗುವುದಿಲ್ಲ. ಸಂಶೋಧನೆಯ ಸಂದರ್ಭದಲ್ಲಿ ಇದು ತೊಡಕಾಗಿಯು ಪರಿಣಾಮಿಸುತ್ತದೆ. ಮೂರು ದಶಕಗಳು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟು ನಂತರ ಕಮಿಷನರ್‌ಗಳ ಅಧೀನಕ್ಕೆ ಒಳಪಟ್ಟಾದ ಬೆಂಗಳೂರು ದಂಡು ಮತ್ತು ಪೇಟೆಯ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳು ಕಂಡುಬಂದವು. ಈ ಸಂದರ್ಭದಲ್ಲಾದ ಸಾರಿಗೆ-ಸಂಪರ್ಕದ ಅಭಿವೃದ್ಧಿಯು ಬೆಂಗಳೂರು ಪ್ರದೇಶವನ್ನು ಕಾಸ್ಮೊಪಾಲಿಟನ್ ಸಿಟಿಯಾಗಿಸುವ ವೇಗವನ್ನು ಇನ್ನಷ್ಟು ಚುರುಕುಗೊಳಿಸಿತು.[14]

ಫ್ರಾನ್ಸ್ ಮತ್ತು ಇಟಲಿಯಲ್ಲಿ ಪೆಬ್ರೈನ್ (pebrine) ಎಂಬ ರೋಗ ಹರಡಿದಾಗ ಕಚ್ಚಾ ರೇಷ್ಮೆಯ ಉತ್ಪಾದನೆಯು ನಿಂತುಹೋಯಿತು. ಯುರೋಪಿನ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ರೇಷ್ಮೆಯ ಬೇಡಿಕೆ ಹೆಚ್ಚಾಗಿದಲ್ಲದೆ, ಉತ್ತಮ ತಳಿಯ ರೇಷ್ಮೆ ಗೂಡಿಗೆ ಬೇಡಿಕೆಯು ಹೆಚ್ಚಾಯಿತು. ಬ್ರಿಟಿಶ್ ವಸಾಹತು ಪ್ರಭುತ್ವವು ಈ ಸಂದರ್ಭದಲ್ಲಿ ರೇಷ್ಮೆ ಬೇಸಾಯಕ್ಕೆ ತನ್ನ ವಸಾಹತುಗಳಲ್ಲಿ ಪ್ರೋತ್ಸಾಹಿಸುವ ಕ್ರಮ ಕೈಗೊಂಡಿತು. ಫಲವಾಗಿ ತಮ್ಮ ಅಧೀನ ಪ್ರದೇಶಗಳಾದ ಬಂಗಾಳ, ಮದ್ರಾಸ್, ಮೈಸೂರು ಪ್ರಾಂತ್ಯಗಳಲ್ಲಿ ರೇಷ್ಮೆ ಬೇಸಾಯಕ್ಕೆ ಉತ್ತೇಜನವನ್ನು ನೀಡಿದಲ್ಲದೇ ರೇಷ್ಮೆ ಬೆಳೆಯಲ್ಲಿ ಕೌಶಲ್ಯತೆ ಹೊಂದಿದ

ಇಟಲಿ ರೇಷ್ಮೆ ಬೆಳೆಗಾರರಿಗೆ ತಮ್ಮ ವಸಾಹತುಗಳಲ್ಲಿ ಅಪಾರ ಸಂಖ್ಯೆಯಲ್ಲಿ ಉದ್ಯೋಗವನ್ನು ನೀಡಿ ಅವರ ಮಾರ್ಗದರ್ಶನದಲ್ಲಿ ಬೆಳೆಗಳನ್ನು ಬೆಳೆಯುವ, ನೂಲನ್ನು ತೆಗೆಯುವ ಮತ್ತು ಉತ್ಪಾದನೆಯ ವಿವಿಧ ಹಂತದ ತರಭೇತಿ ನೀಡುವ ನಿಟ್ಟಿನಲ್ಲಿ ಬ್ರಿಟಿಶ್ ಪ್ರಭುತ್ವ ಯೋಚಿಸಿ ಅವಕಾಶವನ್ನು ನೀಡಿತು. ಅದರಂತೆ ಬೆಂಗಳೂರು ಹವಾಗುಣಕ್ಕೆ ಹಿಪ್ಪುನೇರಳೆ ಬೆಳೆ ಸೂಕ್ತವಾದ ನೆಲೆಯಾಗಿದ್ದರಿಂದಾಗಿ ಫ್ರೆಂಚ್ ಮತ್ತು ಇಟಲಿಯನ್ನರು ಸಹ ಹಿಪ್ಪು ನೇರಳೆಯ ಎಸ್ಟೇಟ್‌ಗಳನ್ನು ಬೆಂಗಳೂರಿನ ಸುತ್ತ ಮುತ್ತಲಿನಲ್ಲಿ ಸ್ಥಾಪಿಸಿದರು.

ಅದರಂತೆ ಇಟಲಿಯ ರೇಷ್ಮೆ ವ್ಯವಸಾಯದ ತಜ್ಞನಾದ ಡೆ ವಿಚ್ಚಿ ಎಂಬಾತನು ಬ್ರಿಟಿಶ್ ಸರ್ಕಾರದ ಅನುಮತಿಯನ್ನು ಪಡೆದು ಭಾರತದೊಂದಿಗೆ ರೇಷ್ಮೆ ವ್ಯವಹಾರದಲ್ಲಿ ತೊಡಗಿಸಿಕೊಂಡನು. ಈ ನಿಟ್ಟಿನಲ್ಲಿ De Vecchi Metteief And Company ಸ್ಥಾಪಿಸಿ ಯೂರೋಪ್ ಮತ್ತು ಏಷಿಯಾ ರಾಷ್ಟ್ರಗಳ ನಡುವೆ ಕಚ್ಚಾ ರೇಷ್ಮೆ ಮತ್ತು ಜವಳಿ ಉದ್ಯಮ ವ್ಯವಹಾರಕ್ಕಾಗಿ ಸ್ಥಳೀಯ ವರ್ತಕ ಸಮುದಾಯಗಳೊಂದಿಗೆ ಕೈಜೋಡಿಸಿ ಮೈಸೂರು ಮತ್ತು ಮದ್ರಾಸ್ ಪ್ರದೇಶಗಳಲ್ಲಿ 1860ಕ್ಕೂ ಮುಂಚಿನ ದಶಕದಲ್ಲಿ ಡೆ ವಿಚ್ಚಿ ಎಂಟರ್ ಪ್ರೈಸಸ್‌ನ್ನು ಸ್ಥಾಪಿಸಿದನು. ಡೆ ವಿಚ್ಚಿ ಮತ್ತು ಅವನ ಸಹೋದರ ಸೇರಿ ಬೆಂಗಳೂರಿನ ಕೆಂಗೇರಿ ಪ್ರದೇಶವನ್ನು ಪಡೆದು ಹಿಪ್ಪುನೇರಳೆ ಬೆಳೆಯನ್ನು ಬೆಳೆಯಲು ಪ್ರಾರಂಭಿಸಿದರು. ಇಟಲಿಯ ಇನ್ನಿತರ ರೇಷ್ಮೆ ವರ್ತಕರು ಬೆಂಗಳೂರು, ರಾಮನಗರ, ಚನ್ನಪಟ್ಟಣ, ಹೊಸೂರು, ಮದ್ದೂರು ಮೊದಲಾದ ಸ್ಥಳಗಳಲ್ಲಿ ರೇಷ್ಮೆ ಬೇಸಾಯ ಮತ್ತು ವ್ಯವಹಾರಗಳಲ್ಲಿ ಮುಸ್ಲಿಂ ಸ್ಥಳೀಯ ವರ್ತಕರೊಂದಿಗಿನ ಸಹಭಾಗಿತ್ವದಲ್ಲಿ ಕಾರ್ಯ ಚಟುವಟಿಕೆ ಪ್ರಾರಂಭಿಸಿದರು. ಈ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸಿದ ಚನ್ನಪಟ್ಟಣದ ಮಸ್ತನ್ ಎಂಬ ಮುಸ್ಲಿಂ ವರ್ತಕ ಸಮುದಾಯದ ವ್ಯಕ್ತಿ ಮತ್ತು ಅವರ ಕುಟುಂಬ ವರ್ಗವು ಇಟಲಿಯ ರೇಷ್ಮೆ ವರ್ತಕ ಸಮುದಾಯಗಳೊಂದಿಗೆ ನಿಕಟ ಸಂಬಂಧವನ್ನು 1830ರಿಂದಲೇ ಹೊಂದಿದ್ದರು. ಇವರ ಜಂಟಿ ಸಹಕಾರದೊಂದಿಗೆ ಬೆಂಗಳೂರಿನ ಸುತ್ತ-ಮುತ್ತಲಿನಲ್ಲಿ ರೇಷ್ಮೆ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು ಎಂಬುದು ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ[15].

ಬೆಂಗಳೂರು ಪ್ರದೇಶದಲ್ಲಿ ನಾವು ಬ್ರಿಟಿಶ್, ಫ್ರೆಂಚ್, ಇಟಲಿಯನ್ ವರ್ತಕ ಸಮುದಾಯವನ್ನು ಮಾತ್ರ ಕಾಣದೇ ಇನ್ನಿತರ ಯುರೋಪಿನ ಸಮುದಾಯಗಳನ್ನು ಕಾಣಬಹುದಾಗಿದೆ. 1899ರಲ್ಲಿ ಸ್ಥಾಪನೆಗೊಂಡಿದ್ದ ಬೆಂಗಳೂರು ಟ್ರೇಡರ್ಸ್ ಅಸೋಸಿಯೇಷನ್ ಸಂಘಟನೆಯಲ್ಲಿ ಡಚ್ಚ್, ಅಮೇರಿಕ, ಫ್ರೆಂಚ್ ದೇಶಗಳ ವರ್ತಕ ಸಮುದಾಯಗಳು ತಮ್ಮ ಸದಸ್ಯತ್ವವನ್ನು ಹೊಂದಿದ್ದರು[16] ಎಂಬ ವಿಚಾರವು ಈ ದೇಶಗಳ ವರ್ತಕ ಸಮುದಾಯಗಳು ಬೆಂಗಳೂರಿನ ದಂಡು ಪ್ರದೇಶದಲ್ಲಿ ನೆಲೆಸಿದ್ದರು ಎಂಬ ವಿಷಯವನ್ನು ತಿಳಿಸುತ್ತದೆ. ಅದೇ ತೆರನಲ್ಲಿ ಇಲ್ಲಿಯ ದಂಡು ಪ್ರದೇಶದ ಆಡಳಿತದಲ್ಲಿ ಈ ಸಂಘಟನೆಯ ಇಬ್ಬರು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು ಎಂದು ದಾಖಲೆಗಳ ಮೂಲಕ ತಿಳಿದುಬರುತ್ತದೆ. ಇದರ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿಯಲ್ಲಿ ಈ ವರ್ತಕ ಸಮುದಾಯಗಳ ಪಾತ್ರವನ್ನು ಸಹ ತಿಳಿಯಬಹುದಾಗಿದೆ. ಅಂದ ಹಾಗೆ ಈ ಸಮುದಾಯಗಳು ಕೇವಲ ದಂಡು ಪ್ರದೇಶಗಳಲ್ಲಿ ಮಾತ್ರ ತಮ್ಮ ಕಾರ್ಯ ಚಟುವಟಿಕೆಯನ್ನು ಸಿಮೀತಗೊಳಿಸಿ

ಕೊಂಡಿದ್ದರು ಎಂದು ಸಂಕುಚಿತ ಅರ್ಥೈಕೆ ಮಾಡಿಕೊಳ್ಳುವಂತಿಲ್ಲ. ಬೆಂಗಳೂರು ಪೇಟೆಯ ಸುತ್ತ-ಮುತ್ತಲಿನಲ್ಲಿ ಹಲವು ದೇಶಗಳ ಚರ್ಚ್‌ಗಳು ನಮಗೆ ಕಾಣಸಿಗುತ್ತದೆ. ಇದು ಸಹ ಬೆಂಗಳೂರು ಪೇಟೆ ಮತ್ತು ದಂಡು ಪ್ರದೇಶದಲ್ಲಿ ವಿವಿಧ ಸಂಸ್ಕೃತಿಯ ವರ್ತಕ ಸಮುದಾಯಗಳ ಬಗೆಗೆ ಬೆಳಕನ್ನು ಚೆಲ್ಲುತ್ತದೆ.

ಬೆಂಗಳೂರು ಬ್ರಿಟಿಶ್, ಫ್ರೆಂಚ್, ಡಚ್ಚ್, ಇಟಲಿ ವರ್ತಕ ಸಮುದಾಯಗಳ ನೆಲೆ ಮಾತ್ರವಾಗಿರದೇ ಪೋರ್ಚುಗೀಸ್ ವರ್ತಕ ಸಮುದಾಯದ ನೆಲೆಯು ಸಹ ಆಗಿತ್ತು ಎಂಬುದನ್ನು ಮರೆಯುವಂತಿಲ್ಲ. ಫ್ರೆಂಚ್ ಟೌನ್‌ನಿನ ಪಕ್ಕದಲ್ಲಿಯೇ ಪೋರ್ಚುಗೀಸ್‌ರ ಕ್ವಾಟರಸ್[17] ಇತ್ತು ಎಂಬ ಉಲ್ಲೇಖ ದೊರೆಯುತ್ತದೆ. ಆದರೆ ಅವರ ನೆಲೆಯಿತ್ತು ಎಂಬುದರ ಬಗೆಗೆ ಮಾಹಿತಿ ಇದೆಯೇ ಹೊರತು ಅವರ ಕಾರ್ಯ ಚಟುವಟಿಕೆಗಳ ಕುರುಹುಗಳು ಅತೀ ವಿರಳವಾಗಿದೆ. ಈ ನಿಟ್ಟಿನಲ್ಲಿ ಇನ್ನೂ ಅಧ್ಯಯನಗಳು ಮುಂದುವರಿಯಬೇಕಾಗಿದೆ.

ಪ್ರಥಮ ಮತ್ತು ದ್ವಿತೀಯ ಮಹಾಯುದ್ಧದ ನಡುವಿನ ಅವಧಿಯಲ್ಲಿ ನಾಜಿ ಪಕ್ಷದ ಉಪಟಳವನ್ನು ತಡೆಯಲು ಸಾಧ್ಯವಾಗದೇ ಕೆಲವು ಯಹೂದಿಗಳು ಬೆಂಗಳೂರಿಗೆ ಬಂದರು. ಬೆಂಗಳೂರು ದೊಡ್ಡ ಮಟ್ಟದ ವಾಣಿಜ್ಯೋದ್ಯಮಿಗಳ ಯಹೂದಿಗಳ ನೆಲೆವಿಡಾಗಿತ್ತು ಎಂಬುದು ಇಂದಿಗೂ ಅಸ್ತಿತ್ವದಲ್ಲಿರುವ ಅವರ ಸ್ಮಶಾನಗಳಿಂದ ತಿಳಿಯಬಹುದಾಗಿದೆ. ಬೆಂಗಳೂರು ದಂಡು ಪ್ರದೇಶದ ಶ್ರೀಮಂತ ಯುರೋಪಿಯನ್ನರಿಗೆ ಮತ್ತು ಸೈನಿಕರಿಗೆ ಬೇಕಾದ ಶೂಗಳನ್ನು ರೊಬನ್ ಕಂಪನಿ ಪೂರೈಸಿತ್ತಿತ್ತು. ಇದು ಯಂತ್ರದ ಸಹಾಯದಿಂದ ಶೂಗಳನ್ನು ತಯಾರಿಸುತ್ತಿದ್ದ ಮೊದಲ ಕೈಗಾರಿಕೆಯಾಗಿದೆ. ಈ ತೆರೆನಾದ ಕೈಗಾರಿಕೆಯನ್ನು ಏಷ್ಯದಲ್ಲಿಯೇ ಮೊಟ್ಟ ಮೊದಲು ಸ್ಥಾಪಿಸಿದ ಕೀರ್ತಿ ಯಹೂದಿಯ ವರ್ತಕ ಸಮುದಾಯದ ಕೈಗಾರಿಕೋದ್ಯಮಿಯಾದ ರೊಬನರಿಗೆ ಸಲ್ಲುತ್ತದೆ.[18]

ಕಾಸ್ಮೊಪಾಲಿಟನ್ ನಗರಗಳಾದ ಕಲ್ಕತ್ತ, ಮದ್ರಾಸ್, ಮುಂಬೈ ಪ್ರೆಸ್ಸಿಡೆನ್ಸಿಗಳಂತೆ ಬ್ರಿಟಿಶ್ ವಸಾಹತು ನೆಲೆಗಳಾಗುವ ಪೂರ್ವದಲ್ಲಿ ಈ ಪ್ರದೇಶಗಳು ಫ್ರೆಂಚ್, ಪೋರ್ಚುಗೀಸ್ ವರ್ತಕ ಸಮುದಾಯಗಳ ಆಳ್ವಿಕೆಗೆ ಒಳಪಟ್ಟು ನಂತರವೇ ಬ್ರಿಟಿಶ್‌ರ ವಶಕ್ಕೆ ಬಂದಿದ್ದು ಗಮನಾರ್ಹ. ಬೆಂಗಳೂರು ಬ್ರಿಟಿಶ್ ಪ್ರೆಸಿಡೆನ್ಸಿಯಾಗಿರದಿದ್ದರೂ ಸಹ ಅದೇ ತೆರೆನಾದ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಇದು ಬೆಂಗಳೂರು ಪ್ರದೇಶದ ವಿಶೇಷತೆಯ ಅಂಶವಾಗಿದೆ. ಹೀಗೆ ಬೆಂಗಳೂರು ವಿವಿಧ ಕಾಲಘಟ್ಟದಲ್ಲಿ ಬಂದ ವಿದೇಶಿ ವರ್ತಕ ಸಮುದಾಯಗಳ ನೆಲೆಯಾಗಿದೆ. ಫಲವಾಗಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಮೆಟ್ರೋಪಾಲಿಟನ್ ನಗರವಾಗಿ, ಕಾಸ್ಮೊಪಾಲಿಟನ್ ನಗರವಾಗಿ, ಇಂದು ಬೆಂಗಳೂರು ಮೆಗೊಲೊಪಾಲಿಟನ್ ನಗರವಾಗಿ ಹೊರ ಹೊಮ್ಮುತ್ತಿದೆ. ಜೊತೆಗೆ ವಿವಿಧ ಸಂಸ್ಕೃತಿಯ ನಗರವಾಗಿಯೂ ಉಳಿದುಕೊಂಡಿದೆ. ಉದಾಹರಣೆಗೆ ಬೆಂಗಳೂರು ಕರಗ, ಮೇರಿ ಮಾತಾ ಜಾತ್ರೆ, ಅಣ್ಣಮ್ಮನ ಹಬ್ಬ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿಯ ಜನತೆಯ ಸಹಬಾಳ್ವೆ, ಸಹಜೀವನ, ಸೌಹಾರ್ದತೆಯ ನೆಲೆವೀಡಾಗಿ ಮುಂದುವರಿಯಲು ಕಾರಣವಾಗಿದೆ. ಈ ನಿಟ್ಟಿನಲ್ಲಿ ಇಲ್ಲಿಯ ವಾಯುಗುಣ, ರಾಜಧಾನಿ ಪಟ್ಟ, ಆಡಳಿತ ವ್ಯವಸ್ಥೆಯ ಜೊತೆಗೆ ವಿದೇಶಿಯ ವರ್ತಕ ಸಮುದಾಯಗಳು ಸಹ ನಗರದ ಅಭಿವೃದ್ಧಿಗೆ ಕಾರಣವಾಗಿರುವುದನ್ನು ಮರೆಯುವಂತಿಲ್ಲ.

ಕೊನೆಯ ಟಿಪ್ಪಣಿಗಳು

1. Srinivash S., *The Brith of the Cosmopolitan City,* The Hindu, 22 march 2005.
2. ಅದೇ,
3. Issar T.P., 1988, *The City Beautiful* (ಪುಸ್ತಕದಲ್ಲಿ ವಿವಿಧ ವಾಸ್ತುಶಿಲ್ಪಗಳನ್ನು ವಿವರಿಸಿದ್ದಾರೆ. ಆ ವಿಚಾರಗಳನ್ನು ನನ್ನ ಲೇಖಕ್ಕೆ ಬಳಸಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಪುಸ್ತಕವನ್ನು ಅಭ್ಯಾಸಿಸಬಹುದು)
4. Sundara A., 1989, *Annual reports of the archaeological department for the years 1885-1905,* p-20.
5. ಅದೇ, ಪು–80
6. Francis Buchanan, 1805, *A Journey from madras through the countries of Mysore, Canara and Malabar, vol-1,* p-216,217
7. Fazlul Hasan, M., 1970., *Bangalore through the Centuries.* p-56.
8. Nanjundappa K.S., *Craft Production and Industrial Development under Tipu Sultan,* Seminar on national integration with special reference to Tipu sultan, 1989, The University of Mysore, Mysore, p-99
9. Pani Narendra, Tara srinivas and Vinod Vysulu, 1985, *Impact of Colonialism on the Economic Structure of Indian Cities: Bangalore 1800-1900,* Essay on Bangalore, Karnataka State council for scrience and Technology, Bangalore, vol-1, p-2
10. <http://urbangeofiction.stadtkreation.com/wp-content/uploads/2014/06/French-book-Spreads.pdf>
11. ಅದೇ, ಪು–17
12. John Murray, 1911, *A hand book for Travel in India, Barma and Cylone, vol-18,* London, p-507
13. Maya Jayapa, 1997, Bangalore: *The Story of a City,* p-230.
14. Antonella viola, *Italian silk traders and their networks in India : The de vecchi enterprise, 1860-1872,* (unpublished thesis)
15. ಅದೇ, ಪು–4
16. ಅನಿತಾ ಎಂ.ಎಸ್., 2012, *ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣದೇವರಾಜ ಒಡೆಯರ್.* ಪು–135.
17. http://urbangeofiction.stadtkreation.com/wp-content/uploads/2014/06/French-book-Spreads.pdf
18. ಸೂರ್ಯನಾಥ ಕಾಮತ್ ಮತ್ತು ಕೃಷ್ಣಯ್ಯ(ಸಂ.), 2005, *ಬೆಂಗಳೂರು ದರ್ಶನ,* ಉದಯಭಾನು

ಕಲಾಸಂಘ, ಸಂ-1, ಪು-441

ಪರಾಮರ್ಶನ ಗ್ರಂಥಗಳು

1. Srinivash S., 'The Brith of the Cosmopolitan City', *The Hindu*, 22 march 2005.
2. Issar, T.P., 1988, *The City Beautiful.* Bangalore: Bangalore urban Art Commission.
3. Sundara, A., 1989, *Annual reports of the archaeological department for the years 1885-1905.* Mysore : directorate of archaeological & museums.
4. Francis Buchanan, 1870(1805), A Journey from madras through the countries of Mysore, Canara and Malabar vol-1. Madras: Higgin botham & co.
5. Fazlul Hasan, M., 1970, *Bangalore through the Centuries.* Bangalore: Historical publications,
6. Nanjundappa, K.S., 1989, 'Craft Production and Industrial Development under Tipu Sultan', Seminar on national integration with special reference to Tipu sultan. Mysore :The University of Mysore.
7. Pani Narendra, Tara srinivas and Vinod Vysulu, 1985, *Essay on Bangalore Vol-1.* Bangalore: Karnataka State council for scrience and Technology.
8. John Murray,1911, *A hand book for Travel in India, Barma and Cylone, vol-18,* London.
9. Maya Jayapa, 1997, *Bangalore: The Story of a City,* Chennai: EastWest Books Pvt, Ltd.

14. Antonella viola, *Italian silk traders and their networks in India : The de vecchi enterprise,* 1860-1872, (unpublished thesis)
15. ಅನಿತಾ, ಎಂ. ಎಸ್., 2012, *ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣದೇವರಾಜ ಒಡೆಯರ್,* ಮೈಸೂರು: ಪ್ರಿಯದರ್ಶಿನಿ ಪ್ರಕಾಶನ.
16. ಸೂರ್ಯನಾಥ ಕಾಮತ್ ಮತ್ತು ಕೃಷ್ಣಯ್ಯ ಎಂ.ಎಚ್., 2005, *ಬೆಂಗಳೂರು ದರ್ಶನ ಸಂ-1,* ಬೆಂಗಳೂರು: ಉದಯಭಾನು ಕಲಾಸಂಘ.

■

ಪುರಿ ಜಗನ್ನಾಥ ದೇವಾಲಯದ ಇತಿಹಾಸ

❑ ಮನು ವಿ. ದೇವದೇವನ್
ಸಹಾಯಕ ಪ್ರಾಧ್ಯಾಪಕರು,
ಮಾನವಿಕ ಮತ್ತು
ಸಮಾಜ ವಿಜ್ಞಾನ ವಿಭಾಗ,
ಐ.ಐ.ಟಿ. ಮಂಡಿ–175001
ಹಿಮಾಚಲ ಪ್ರದೇಶ.
discoverie@gmail.com

(ಭಾಗ–8)

[ಕಳೆದ ಸಂಚಿಕೆಗಳಲ್ಲಿ ನಾವು ಧಾರಾವಾಹಿಯಾಗಿ ಕಥಿಸುತ್ತ ಬಂದಿರುವ ಪುರಿ ಜಗನ್ನಾಥ ದೇವಾಲಯದ ಇತಿಹಾಸವು ಈಗ ಅದರ ಕೊನೆಯ ಹಂತ ತಲಿಪಿದೆ. ಇಪ್ಪತ್ತನೆಯ ಶತಮಾನವು ದೇವಾಲಯದ ಇತಿಹಾಸದಲ್ಲಿ ಉಂಟುಮಾಡಿದ ದೂರಗಾಮಿ ಪಲ್ಲಟಗಳನ್ನು ಸಮೀಕ್ಷಿಸುತ್ತ ಈ ಕಥನವನ್ನು ಮುಗಿಸೋಣ.]

ಮರಾಠರ ಹಾಗೂ ಬ್ರಿಟಿಶರ ಅಧೀನದಲ್ಲಿ ದೇವಾಲಯದ ಮೇಲೆ ಗಜಪತಿಗಳಿಗಿದ್ದ ನಿಯಂತ್ರಣವು ಸಡಿಲಗೊಳ್ಳುತ್ತ ಹೋದದ್ದನ್ನು ಈಗಾಗಲೇ ವಿವರಿಸಿದ್ದೇವೆ. ಏತನ್ಮಧ್ಯೆ ಗಜಪತಿ ಮನೆತನದ ಸ್ಥಾನವನ್ನು ಎತ್ತಿಹಿಡಿಯಲು ಸೂರ್ಯಮಣಿ ಪಟ್ಟಮಹಾದೇಯಿಯೂ ಮಧುಬಾಬೂ ನೇತೃತ್ವದ ನಾಡಿನ ಹೊಸ ಸುಶಿಕ್ಷಿತ ವರ್ಗವೂ, *ಉತ್ಕಲ್ ದೀಪಿಕಾ, ದಿ ಸ್ಟೇಟ್ಸ್‌ಮನ್* ಮೊದಲಾದ ಪತ್ರಿಕೆಗಳೂ ನಡೆಸಿದ ಪ್ರಯತ್ನಗಳು ಸ್ವಲ್ಪ ಮಟ್ಟಿಗಾದರೂ ಯಶಸ್ವಿಯಾಗಿದ್ದವು. ಆದರೆ ಈ ಯತ್ನಗಳು ಗಜಪತಿಗಳ ಸ್ಥಾನವನ್ನು ಸುಭದ್ರಗೊಳಿಸುವುದಕ್ಕಿಂತ ಹೆಚ್ಚಾಗಿ ಒಡಿಶಾದಲ್ಲಿ ರಾಷ್ಟ್ರೀಯ ಭಾವನೆಗಳನ್ನು ಮೂಡಿಸುವಲ್ಲಿ ಹೆಚ್ಚಿನ ವಿಜಯ ಕಂಡಿತು. ದೇವಾಲಯದಲ್ಲಿ ಅಧಿಕಾರಕ್ಕೆಂದು ನಡೆದ ಪೈಪೋಟಿಯು ರೇವೆನ್‌ಶಾ ಕಾಲೇಜ್, ಕಲ್ಕತ್ತಾ ವಿಶ್ವವಿದ್ಯಾಲಯ, ನ್ಯಾಯಾಲಯಗಳು, ಪತ್ರಮಾಧ್ಯಮಗಳು ಮುಂತಾದೆಡೆಗಳಲ್ಲಿ ರೂಪು ಪಡೆಯುತ್ತಿದ್ದ ರಾಷ್ಟ್ರೀಯತೆಗೆ ಸಮರ್ಪಕವಾದ ಅಭಿವ್ಯಕ್ತಿ ನೀಡಿ ಈ ಹೊಸ ವಿದ್ಯಮಾನಕ್ಕೆ ಹೆಚ್ಚಿನ ಜನಮನ್ನಣೆ ಗಳಿಸಿಕೊಡುವಲ್ಲಿ ಪರೋಕ್ಷವಾಗಿ ವೇದಿಕೆಯೊಂದನ್ನು ಒದಗಿಸಿಕೊಟ್ಟಿತು.

ಹೀಗಿರುವಾಗ, 1897ರಲ್ಲಿ ಮುಮ್ಮಡಿ ಮುಕುಂದ ದೇವನು ಪ್ರಾಯಕ್ಕೆ ಬಂದು ಸೂರ್ಯಮಣಿ ಪಟ್ಟಮಹಾದೇಯಿಯಿಂದ ದೇವಾಲಯದ ಉಸ್ತುವಾರಿ

ಯನ್ನು ವಹಿಸಿಕೊಂಡನು. ಕೂಡಲೆಯೇ ಅವನ ದುರ್ವ್ಯವಹಾರಗಳೂ ಅದರ ಪರಾಕಾಷ್ಠೆಗೆ ಏರತೊಡಗಿದವು. ದೇವಾಲಯದ ಪ್ರಬಂಧಕನನ್ನು ಬರಖಾಸ್ತುಗೊಳಿಸಿ ಎಲ್ಲ ಅಧಿಕಾರವನ್ನು ಸ್ವೇಚ್ಛೆಯಂತೆ ವಿನಿಯೋಗಿಸತೊಡಗಿದನು. ರಾಜಾ ಸೂಪರಿಂಡೆಂಟ್‌ನ ಉಸ್ತುವಾರಿಯನ್ನು ಅಸಮರ್ಥರಾದ ಮೂರು ಮಂದಿ ಸ್ಥಳೀಯರಿಗೆ ಹಸ್ತಾಂತರಿಸಿದನು. ದೇವಾಲಯದ ನೆಲಗಳನ್ನು ತೋಚಿದಂತೆ ಅನ್ಯಾಧೀನಗೊಳಿಸಿ ಅಪಾರ ಸಾಲದಲ್ಲಿ ಮುಳುಗಿದನು. ತನ್ನ ಎಲ್ಲ ಕರ್ತವ್ಯಗಳನ್ನೂ ನಿರ್ಲಕ್ಷಿಸಿ ಪರನಾರಿಯೋರ್ವಳೊಂದಿಗೆ ಅನೈತಿಕ ಸಂಬಂಧದಲ್ಲಿ ದಿನಗಳೆದನು. ದೇವಾಲಯದ ಸ್ಥಿತಿಗತಿಗಳು ಅನಾಚಾರಗಳಿಂದ ಕ್ಷೀಣಿಸತೊಡಗಿದವು.[1] ಹೀಗಾಗಿ ಸರ್ಕಾರವು ಮತ್ತೆ ಹಸ್ತಕ್ಷೇಪ ನಡೆಸುವಂತಾಯಿತು. 1903ರಲ್ಲಿ ಮುಮ್ಮಡಿ ಮುಕುಂದದೇವನು ಪ್ರಬಂಧಕನೊಬ್ಬನನ್ನು ನೇಮಿಸಲು ನಿರ್ಬಂಧಿತನಾದನು. ಅದರಂತೆ ಡೆಪ್ಯುಟಿ ಕಲೆಕ್ಟರ್ ರಾಜ್ ಕಿಶೋರ್ ದಾಸ್ ಅವರನ್ನು ಆ ಸ್ಥಾನಕ್ಕೆ ನೇಮಿಸಲಾಯಿತು.[2]

ತಮ್ಮ ಐದು ವರ್ಷದ ಕಾರ್ಯಾವಧಿಯಲ್ಲಿ ರಾಜ್ ಕಿಶೋರ್ ದಾಸ್ ದೇವಾಲಯದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಆಯವ್ಯಯಗಳನ್ನು ಸುಗಮಗೊಳಿಸಿದರು. ಸೇವಕಬಳಗದ ಹಾಗೂ ಅರ್ಚಕವರ್ಗದ ಸ್ಥಾನಮಾನಗಳನ್ನು ಪುನರ್ರಚಿಸಿದರು. ವೇತನಗಳನ್ನು ಹೆಚ್ಚಿಸಿದರು. ಇದಲ್ಲದೆ ದೇವಾಲಯದ ಭೂಹಿಡುವಳಿಗಳಿಂದ ತಪ್ಪದಂತೆ ನಿರಂತರ ಕಂದಾಯ ವಸೂಲಾತಿಗೆ ಏರ್ಪಾಟು ಮಾಡಿದರು. ಇದರೊಂದಿಗೇ ಶಿಥಿಲಗೊಳ್ಳತೊಡಗಿದ್ದ ದೇವಾಲಯದ ದುರಸ್ತಿಕಾರ್ಯವನ್ನೂ ಕೈಗೊಂಡ ದಾಸ್ ಅರ್ಚಕರ ದುರಾಡಳಿತವನ್ನು ತೀವ್ರವಾಗಿ ನಿಯಂತ್ರಿಸಿ ನಿತ್ಯಪೂಜೆ, ಭೋಗ, ಉತ್ಸವಗಳು ಹಾಗೂ ಇತರ ಸೇವೆಗಳು ತಪ್ಪದೆ ನಡೆಯುವಂತೆ ಕ್ರಮ ಕೈಗೊಂಡರು. ಯಾತ್ರಿಗಳ ಸುರಕ್ಷೆಗೆಂದು ವಿಶೇಷ ಸಿದ್ಧತೆಗಳನ್ನು ನಡೆಸಿದರು. ಹಣಕಾಸಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಸಮರ್ಪಕಗೊಳಿಸಿ ಲೇಖಾಧಿಕಾರದ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿದರು.[3] ದಾಸ್‌ರ ಸೇವೆಗೆ ಮೆಚ್ಚಿದ ಸರ್ಕಾರವು 1908ರಲ್ಲಿ ಅವರ ಕಾರ್ಯಾವಧಿಯನ್ನು ಇನ್ನೂ ಐದು ವರ್ಷಗಳಿಗೆ ಹೆಚ್ಚಿಸಿತು.[4]

ಪ್ರಬಂಧಕನ ಪ್ರಭಾವವು ಏರುತ್ತಿದ್ದುದನ್ನು ಸಹಿಸಲಾಗದ ಮುಮ್ಮಡಿ ಮುಕುಂದನು 1911ರಲ್ಲಿ ಅವನ ಮೇಲೆ ಹಣಕಾಸಿನ ಅವ್ಯವಹಾರದ ಆರೋಪ ಹೊರಿಸಿ ಕಟಕ್‌ನ ಸಬ್-ಜಡ್ಜ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದನು. ದ್ವೇಷ ಸಾಧಿಸಿಕೊಳ್ಳಲೆಂದೇ ಹೂಡಿದ ಮೊಕದ್ದಮೆಯಿದು ಎಂದು ಅರಿತ ಪುರಿಯ ಕಲೆಕ್ಟರ್ ಮುಕುಂದನಿಗೆ ಮೊಕದ್ದಮೆ ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿದನು. ಮುಕುಂದನು ಇದಕ್ಕೆ ಒಪ್ಪಲಿಲ್ಲ. ಕೊನೆಗೆ ನ್ಯಾಯಾಲಯದ ಆದೇಶದಂತೆ ಬಂಗಾಳದ ಅಕೌಂಟೆಂಟ್ ಜನರಲ್ ಕಾರ್ಯಾಲಯದ ಆಡಿಟರ್‌ಗಳು ಲೆಕ್ಕಪತ್ರಗಳನ್ನು ಪರಿಶೀಲಿಸಿ ಆರೋಪಿಸಲಾದಂತ ಯಾವುದೇ ಅವ್ಯವಹಾರ ನಡೆದಿಲ್ಲವೆಂದು ವರದಿ ಸಲ್ಲಿಸಿದರು. ಮುಕುಂದನು ಮೊಕದ್ದಮೆ ಸೋತನು.[5]

ಆದಾಗ್ಯೂ ಮುಕುಂದನ ತರುವಾಯ ಅಧಿಕಾರ ವಹಿಸಿಕೊಂಡ ರಾಮಚಂದ್ರದೇಬನು ಕೆಲವು ವರ್ಷಗಳ ಬಳಿಕ ಪುನಃ ಪ್ರಬಂಧಕನನ್ನು ತೆಗೆದುಹಾಕಿ ದೇವಾಲಯದ ನಿರ್ವಹಣೆಯನ್ನು ತನ್ನ ವಶಕ್ಕೆ ತಂದುಕೊಂಡನು.[6] ಗಜಪತಿಯ ಅಧಿಕಾರದ ವಿಷಯವಾಗಿ ಚಾಲ್ತಿಯಲ್ಲಿರುವ ಕಾನೂನುಗಳ ಕೊರತೆಯನ್ನು ಈ ಪ್ರಸಂಗವು ಎತ್ತಿತೋರಿಸಿತು. ಆ

ವೇಳೆಗಾಗಲೇ ಮೊದಲ ವಿಶ್ವ ಮಹಾಯುದ್ಧ ನಡೆದಿತ್ತು. ಭಾರತದಲ್ಲಿ ಮಹಾತ್ಮಾ ಗಾಂಧಿ ನೇತೃತ್ವದ ಅಸಹಕಾರ ಚಳುವಳಿ ರಾಷ್ಟ್ರೀಯತೆಯ ಹೆಬ್ಬಲೆಗಳನ್ನು ಎಬ್ಬಿಸಿ ಹೋಗಿತ್ತು. ಜಾಗತಿಕ ಮಟ್ಟದಲ್ಲಿ ಅಮೇರಿಕನ್ ಐಕ್ಯರಾಜ್ಯಗಳ ಏಳಿಗೆಯಿಂದ ಬ್ರಿಟಿಶರ ಪ್ರಭಾವ ಹಾಗೂ ಮೇಲುಗೈ ಕಡಿಮೆಯಾಗತೊಡಗಿತ್ತು. ಈ ಸಂದರ್ಭದಲ್ಲಿ ಬ್ರಿಟಿಶರು ಗಜಪತಿ ವಿರುದ್ಧ ಯಾವುದೇ ಹೊಸ ಕ್ರಮ ಕೈಗೊಳ್ಳದೆ ಸುಮ್ಮನಾದರು.

1935 ಏಪ್ರಿಲ್ 1ರಂದು ಭಾಷಾ ಆಧಾರದ ಮೇರೆಗೆ ಬಂಗಾಳ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಗಳ ಮತ್ತು ಅನೇಕ ಗಡಜಾತ ದೊರೆತನಗಳ ವಿವಿಧ ಪ್ರದೇಶಗಳನ್ನು ಒಗ್ಗೂಡಿಸಿ ಒಡಿಶಾ ರಾಜ್ಯವನ್ನು ಸೃಷ್ಟಿಸಲಾಯಿತು. ಭಾಷಾಧಿಷ್ಠಿತವಾಗಿ ರೂಪುಗೊಂಡ ಆಧುನಿಕ ಭಾರತದ ಪ್ರಪ್ರಥಮ ರಾಜ್ಯ ಇದಾಯಿತು. ಭಾರತೀಯ ನೇತೃತ್ವ ಹಾಗೂ ಬ್ರಿಟಿಶ್ ಸರ್ಕಾರದ ನಡುವೆ 1930–1932ರ ಅವಧಿಯಲ್ಲಿ ನಡೆದ ಮೂರು ದುಂಡುಮೇಜಿನ ಸಮಾವೇಶಗಳ ನಿರ್ಣಯದಂತೆ 1935ರಲ್ಲಿ ಜಾರಿಗೊಳಿಸಲಾದ ಗವರ್ನ್ಮೆಂಟ್ ಆಫ್ ಇಂಡಿಯಾ ಏಕ್ಟ್ ಅನ್ವಯ 1937ರಲ್ಲಿ ಚುನಾವಣೆಗಳು ನಡೆದವು. ಒಡಿಶಾದಲ್ಲಿ ಹೊಸ ವಿಧಾನಸಭೆಯೊಂದು ಅಧಿಕಾರ ವಹಿಸಿಕೊಂಡಿತು. ಅದೇ ವರ್ಷ ಹೊಸ ಸರ್ಕಾರವು ಜಗನ್ನಾಥ ಟೆಂಪಲ್ ಬಿಲ್ ಎಂಬ ಹೊಸ ಮಸೂದೆಯೊಂದನ್ನು ಸಿದ್ಧಪಡಿಸಿ ವಿಧಾನಸಭೆಯ ಮುಂದಿಟ್ಟಿತು. ಆದರೆ, ಕಾರಣಾಂತರಗಳಿಂದ ಅದನ್ನು ಹಿಂತೆಗೆದುಕೊಳ್ಳಬೇಕಾಯಿತು. 1939ರಲ್ಲಿ ವಿಧಾನಸಭೆಯು ದಿ ಒರಿಸ್ಸಾ ಹಿಂದೂ ರಿಲಿಜಿಯಸ್ ಎಂಡೋಮೆಂಟ್ಸ್ ಏಕ್ಟ್ (ಒರಿಸ್ಸಾ ಏಕ್ಟ್ IV ಆಫ್ 1939) ಎಂಬ ಹೊಸ ಕಾನೂನನ್ನು ಜಾರಿಗೆ ತಂದಿತು. ಇದರನ್ವಯ ಜಗನ್ನಾಥ ದೇವಾಲಯವನ್ನೊಳಗೊಂಡು ನಾಡಿನ ಎಲ್ಲ ಧಾರ್ಮಿಕ ಕೇಂದ್ರಗಳನ್ನೂ ಓರ್ವ ಕಮಿಶನರ್ ಆಫ್ ಎಂಡೋಮೆಂಟ್ಸ್‌ನ ನಿಯಂತ್ರಣಕ್ಕೆ ತರಲಾಯಿತು. ಗಜಪತಿಗಳಿಗೆ ದೇವಾಲಯದ ಮೇಲಿದ್ದ ನಿಯಂತ್ರಣವು ಇದರಿಂದ ಗಮನಾರ್ಹ ಹೊಡೆತ ಪಡೆಯಿತು. ಇದನ್ನು ಪ್ರತಿಭಟಿಸಿ ರಾಮಚಂದ್ರದೇವನು ಅನೇಕ ದೂರುಗಳನ್ನು ಸಲ್ಲಿಸಿದರೂ ಸರ್ಕಾರವು ಅವುಗಳನ್ನು ಅಲಕ್ಷಿಸಿತು.[7] ಈ ವೇಳೆಗಾಗಲೇ ರಾಷ್ಟ್ರೀಯ ಆಂದೋಳನದಲ್ಲಿ ಸಕ್ರಿಯ ಭಾಗವಹಿಸಿ ಪ್ರಜಾಪ್ರಭುತ್ವದ ಆದರ್ಶಗಳನ್ನು ಎತ್ತಿಹಿಡಿಯುವ ಮೂಲಕ ಅಧಿಕಾರ ಪಡೆದುಕೊಳ್ಳಲು ತತ್ಪರವಾದ ಹೊಸ ವರ್ಗವೊಂದು ಒಡಿಶಾದ ಶಿಕ್ಷಿತ ಜನಾಂಗಗಳ ನಡುವಲ್ಲಿ ಪ್ರಬಲವಾಗಿ ಬೇರೂರಿಕೊಂಡಿತ್ತು. ಮಧುಬಾಬೂರಂತೆ ಗಜಪತಿಗಳ ಪರ ನಿಲ್ಲಲು ಇವರು ಯಾವುದೇ ಆಸಕ್ತಿ ತೋರಲಿಲ್ಲ. ರಾಜಾಧಿಕಾರಕ್ಕೆ ದೊರಕುತ್ತ ಬಂದಿದ್ದ ಬೆಂಬಲವು ಅಳಿದುಹೋಗತೊಡಗಿತ್ತು. ಇದು ರಾಮಚಂದ್ರದೇಬನನ್ನು ಇನ್ನಷ್ಟು ಪೇಚಿಗೆ ಸಿಲುಕಿಸಿತು.

15 ಆಗಸ್ಟ್ 1947ರಂದು ಭಾರತವು ಬ್ರಿಟಿಶ್ ಆಳ್ವಿಕೆಯಿಂದ ವಿಮೋಚನೆ ಹೊಂದಿತು. ಒಡಿಶಾ ವಿಧಾನಸಭೆಯಲ್ಲಿ ಈಗ ಜಗನ್ನಾಥ ದೇವಾಲಯವು ಪುನಃ ಚರ್ಚೆಗೆ ವಿಷಯವಾಯಿತು. 1951 ಹಾಗೂ 1952ರಲ್ಲಿ ಜಾರಿಗೊಳಿಸಲಾದ ದಿ ಒರಿಸ್ಸಾ ಹಿಂದೂ ರಿಲಿಜಿಯಸ್ ಎಂಡೋಮೆಂಟ್ಸ್ ಎಕ್ಟ್ ಆಫ್ 1951 ಮತ್ತು II ಆಫ್ 1952ರ ಅಡಿಯಲ್ಲಿ ಕಮಿಶನರ್ ಆಫ್ ಎಂಡೋಮೆಂಟ್ಸ್‌ಗೆ ಸೂಪರಿಂಟೆಂಡೆಂಟ್ ಆದ ಗಜಪತಿಯ ಮೇಲೆ

ಬಿಗಿ ನಿಯಂತ್ರಣವನ್ನು ಏರ್ಪಡಿಸುವ ಅಧಿಕಾರ ನೀಡಲಾಯಿತು.[8] ಮಸೂದೆಯನ್ನು ಸಭೆಯ ಮುಂಚೆ ಚರ್ಚೆಗಿಟ್ಟ ಗೃಹ ಹಾಗೂ ಕಾನೂನು ಸಚಿವ ದೀನಬಂಧು ಸಾಹು ತಮ್ಮ ಅಭಿಪ್ರಾಯವನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದರು.[9]

> In the absence of any guidance from the Raja and sufficient contribution from him for regular expenses of the Temple, the scheduled and disciplined performance of the Nitis has suffered beyond imagination and the Raja has practically lost all control over the different sebaks and other temple servants. Economic rivalry and moral degeneration of the servants and sebaks has divested them of all sense of duty and cooperation. Specific endowments are regularly misapplied and misappropriated.... The non-availability at the appointed hours of the Mahaprasad coveted by millions of pilgrims is always there these days. The lapses into unorthodoxy has resulted in extremely unhygenic (sic) conditions inside the temple and commission of heinous crimes even within the temple precincts is not rare; even the image of the deity has at times been defiled and its precious jewellery removed.

ಚರ್ಚೆಯ ಕೊನೆಯಲ್ಲಿ ದಿ ಶ್ರೀ ಜಗನ್ನಾಥ ಟೆಂಪಲ್ (ಎಡ್ಮಿನಿಸ್ಟ್ರೇಶನ್) ಏಕ್ಟ್ (ನಂಬರ್ XIV ಆಫ್ 1952) ಕಾನೂನಿಗೆ ಸ್ವೀಕೃತಿ ನೀಡಲಾಯಿತು. ಅದರಂತೆ ಸರ್ಕಾರವು ವಿಶೇಷ ಅಧಿಕಾರಿಯೋರ್ವನನ್ನು ನೇಮಿಸಿತು. ವಿಶೇಷ ಅಧಿಕಾರಿಯು ದೇವಾಲಯದ ನಿರ್ವಹಣೆಯನ್ನು ಕಾನೂನುಬದ್ಧಗೊಳಿಸಲೆಂದು ಸೇವಕರ ಹಾಗೂ ಅರ್ಚಕವರ್ಗದವರ ಹಕ್ಕು ಹಾಗೂ -ಕರ್ತವ್ಯಗಳ ಪಟ್ಟಿಯನ್ನು ತಯಾರಿಸಿ 15 ಮಾರ್ಚ್ 1954ರಂದು ಸರ್ಕಾರಕ್ಕೆ ಸಲ್ಲಿಸಿದರು. ಜೊತೆಗೆ ದೇವಾಲಯದಲ್ಲಿ ಅವ್ಯವಹಾರ ಮುಂದುವರಿಯುತ್ತಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರು. ವಿಶೇಷ ಅಧಿಕಾರಿಯ ಸಲಹೆಗಳನ್ನು ಅನುಮೊದಿಸಿದ ಸರ್ಕಾರವು ಅದೇ ವರ್ಷ ದಿ ಜಗನ್ನಾಥ ಟೆಂಪಲ್ (ಎಡ್ಮಿನಿಸ್ಟ್ರೇಶನ್ ಅಮೆಂಡ್‌ಮೆಂಟ್) ಏಕ್ಟ್ 1954 ಎಂಬ ತಿದ್ದುಪಡಿ ಮಸೂದೆಯನ್ನು ಶಾಸಕಾಂಗ ಸಭೆಯ ಮುಂದಿಟ್ಟು ಮನ್ನಣೆ ಪಡೆದು ಜಾರಿಗೊಳಿಸಿತು. ಕೊನೆಗೆ, 1955ರಲ್ಲಿ ಇತಿಹಾಸ ಮಹತ್ವದ ದಿ ಜಗನ್ನಾಥ್ ಟೆಂಪಲ್ ಏಕ್ಟ್ ಕಾಯಿದೆಯ ಮೂಲಕ ಗಜಪತಿಯನ್ನು ಸೂಪರಿಂಟೆಂಡೆಂಟ್ ಹುದ್ದೆಯಿಂದ ತೆಗೆದುಹಾಕಿ ದೇವಾಲಯವನ್ನು ಶ್ರೀ ಜಗನ್ನಾಥ್ ಟೆಂಪಲ್ ಮ್ಯಾನೇಜಿಂಗ್ ಕಮಿಟಿ ಎಂಬ ಸಮಿತಿಯ ನಿಯಂತ್ರಣಕ್ಕೆ ತಂದುಕೊಳ್ಳಲಾಯಿತು. ಸಮಿತಿಯಲ್ಲಿ ಗಜಪತಿಗೆ ನಾಮಮಾತ್ರಕ್ಕೆ ಚೇರ್‌ಮನ್ ಸ್ಥಾನವನ್ನು ನೀಡಲಾಯಿತು. ಆದರೆ ಎಲ್ಲ ಅಧಿಕಾರವನ್ನೂ ಸರ್ಕಾರ ನೇಮಿಸಿದ ಎಡ್ಮಿನಿಸ್ಟ್ರೇಟರ್ ಎಂಬ ಸಮಿತಿಯ ಕಾರ್ಯದರ್ಶಿಗೆ ನೀಡಲಾಯಿತು.[10] ಇದರೊಂದಿಗೆ ಗಜಪತಿಗೆ ದೇವಾಲಯದ ಮೇಲಿದ್ದ ನಿಯಂತ್ರಣದ ಮೇಲೆ ಚಿರವಾಗಿ ಪರದೆ ಬಿದ್ದಿತು.

ರಾಮಚಂದ್ರದೇಬನು ಹೊಸ ಕಾನೂನನ್ನು ಪ್ರಶ್ನಿಸಿ ಒಡಿಶಾದ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದನು. ದೇವಾಲಯದ ಹಾಗೂ ಅದರ ಭೂಸ್ವತ್ತುಗಳ ಮೇಲೆ ತನಗಿದ್ದ ಅಧಿಕಾರವು ಪರಂಪರಾಗತವಾಗಿ ಬಂದದ್ದು. ಇದನ್ನು ತೆಗೆದುಹಾಕುವ ಅಧಿಕಾರ ಸರ್ಕಾರಕ್ಕಿಲ್ಲ ಎಂಬುದು ಇವನ ವಾದವಾಗಿತ್ತು. ಈ ವಾದವನ್ನು ನಿರಾಕರಿಸುತ್ತ ಕಾನೂನು ಇಲಾಖೆಯ ಉಪ ಕಾರ್ಯದರ್ಶಿಗಳು 11 ಜನವರಿ 1956ರಂದು ನ್ಯಾಯಾಲಯದಲ್ಲಿ ಶಪಥಪತ್ರ ಸಲ್ಲಿಸಿದರು. ಶಪಥಪತ್ರದಲ್ಲಿ ದೇವಾಲಯವು ಸಾರ್ವಜನಿಕ ಸ್ವತ್ತೇ ಹೊರತು ಯಾವುದೇ ಮನೆತನದ್ದಲ್ಲ ಎಂದು ವಾದಿಸಿದರು.

1957ರಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ, ರಾಮಚಂದ್ರನು ಮಡಿದನು. ಅವನ ಮಗ ಬೀರಕಿಶೋರದೇಬನು ಮೊಕದ್ದಮೆಯನ್ನು ಮುಂದುವರೆಸಿದನು. ಬೀರಕಿಶೋರನ ವಕೀಲ ಎ.ಸಿ. ಗುಪ್ತ ನ್ಯಾಯಾಲಯದಲ್ಲಿ ದೇವಾಲಯ ಸಾರ್ವಜನಿಕ ಸ್ವತ್ತೆಂಬುದನ್ನು ಒಪ್ಪಿಕೊಂಡನು. ಆದರೆ, ದೇವಾಲಯದಲ್ಲಿನ ಗಜಪತಿಯ ಆರಾಧನೆಗೆ ವಿಘ್ನ ತರುವುದರಿಂದ ಹೊಸ ನೀತಿಯು ಭಾರತದ ಸಂವಿಧಾನವು ಮೂಲಭೂತ ಹಕ್ಕುಗಳ ಅನ್ವಯ ಅನುಚ್ಛೇದ 26ರಲ್ಲಿ ಒದಗಿಸಿರುವ ಧಾರ್ಮಿಕ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ವಾದಿಸಿದರು. 30 ಏಪ್ರಿಲ್ 1958ರಂದು ಉಚ್ಚ ನ್ಯಾಯಾಧೀಶ ನರಸಿಂಹನ್ ಹಾಗೂ ನ್ಯಾಯಮೂರ್ತಿ ರಾವ್ ಅವರನ್ನೊಳಗೊಂಡ ಕಟಕ್ ಹೈಕೋರ್ಟಿನ ನ್ಯಾಯಪೀಠವು ತನ್ನ ಐತಿಹಾಸಿಕ ತೀರ್ಪನ್ನು ಹೊರಡಿಸಿತು. ಗಜಪತಿಯು ದೇವಾಲಯದ ಆದ್ಯಸೇವಕ, ಈ ಅಧಿಕಾರವು ಪರಂಪರಾಗತವಾಗಿ ಬಂದದ್ದು. ಅದನ್ನು *ಮಾದಳಾಪಾಂಜಿ, ನೀಲಾದ್ರಿ ಮಹೋದಯ* ಮೊದಲಾದ ಗ್ರಂಥಗಳಲ್ಲಿ ಹೇಳಲಾಗಿದೆ, ಆದರೆ ದೇವಾಲಯವು ಗಜಪತಿಯ ಖಾಸಗಿ ಸ್ವತ್ತೆಂದು ಎಲ್ಲಿಯೂ ಸೂಚಿಸಲಾಗಿಲ್ಲ, ಮೇಲಾಗಿ ಜಗನ್ನಾಥ ದೇವಾಲಯವನ್ನು ನಿರ್ಮಿಸಿದವರು ಈ ಗಜಪತಿಯ ವಂಶಜರಲ್ಲ, ದೇವಾಲಯದ ಮೇಲಿನ ಈ ಮನೆತನದ ಅಧಿಕಾರವನ್ನು 1590ರಲ್ಲಿ ಮಾನ್ ಸಿಂಗ್ ನೀಡಿದ್ದೇ ಹೊರತು ಅನಾದಿ ಕಾಲದಿಂದ ವಂಶಪರಂಪರೆಯಿಂದ ಒದಗಿಬಂದುದ್ದಲ್ಲ, ಗಜಪತಿಯ ದೇವಾಲಯದ ಮೇಲಿನ ಆಡಳಿತಾಧಿಕಾರವು ಸೂಪರಿಂಟೆಂಡೆಂಟ್ ಪದವಿಯಿಂದ ಬಂದದ್ದು, ಆ ಪದವಿಯನ್ನು ಬ್ರಿಟಿಶರು ಕಾನೂನೊಂದರ ಮೂಲಕ ಜಾರಿಗೊಳಿಸಿದ್ದರು, ಹೀಗಾಗಿ ಬದಲಾದ ಪರಿಸ್ಥಿತಿಯಲ್ಲಿ ಮತ್ತೊಂದು ಕಾನೂನಿನ ಮೂಲಕ ಆ ಪದವಿಯನ್ನು ತೆಗೆದುಹಾಕುವ ಎಲ್ಲ ಅಧಿಕಾರವೂ ಸರ್ಕಾರಕ್ಕಿದೆ ಎಂದು ನ್ಯಾಯಪೀಠವು ತನ್ನ ಸುದೀರ್ಘ ತೀರ್ಪಿನಲ್ಲಿ ಸ್ಪಷ್ಟಪಡಿಸಿತು.[11]

ಬೀರಕಿಶೋರನು ಈಗ ದೆಹಲಿಗೆ ತೆರಳಿ ಸರ್ವೋಚ್ಚ ನ್ಯಾಯಾಲಯದಲ್ಲಿ ಕಟಕ್ ಹೈಕೋರ್ಟ್ ನಿರ್ಣಯದ ವಿರುದ್ಧ ಮೇಲ್ಮನವಿ ಸಲ್ಲಿಸಿದನು. ಅಲ್ಲಿಯೂ ನಿರಾಶಿತನಾದನು. ಆದ್ಯಸೇವಕ ಹಾಗೂ ಸೂಪರಿಂಟೆಂಡೆಂಟ್ ಎರಡೂ ವಿಭಿನ್ನ ಪದವಿಗಳು, ಅವೆರಡೂ ಒಂದೇ ಎಂಬ ಗಜಪತಿಯ ವಾದವನ್ನು ಒಪ್ಪಿಕೊಳ್ಳಲಾಗದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಎತ್ತಿಹಿಡಿಯಿತು.[12]

ಹೀಗೆ ಸ್ವತಂತ್ರ ಭಾರತದಲ್ಲಿ ಪುರಿಯ ಶ್ರೀ ಜಗನ್ನಾಥ ದೇವಾಲಯವು ನೂರಾರು ವರ್ಷಗಳ ಗಜಪತಿ ಅರಸುಗಳ ನಿಯಂತ್ರಣದಿಂದ ಮುಕ್ತಿ ಹೊಂದಿತು. ತಮ್ಮನ್ನು ತಾವೇ ಜನಸಾಮಾನ್ಯರು ಯಾ ಜನಸಾಮಾನ್ಯರ ಪ್ರತಿನಿಧಿಗಳು ಎಂದು ಕರೆದುಕೊಳ್ಳುವ ಹೊಸ

ಶಿಷ್ಟ ಹಾಗೂ ಉನ್ನತವರ್ಗವೊಂದರ ಕೈಸೇರಿತು. ಇಂದಿಗೂ ಈ ವರ್ಗವೇ ದೇವಾಲಯವನ್ನು ನಿಯಂತ್ರಿಸುತ್ತಿದೆ. ಬಂಡವಾಳಶಾಹಿ ಮೂಲದ ವ್ಯವಸ್ಥೆಯನ್ನೂ ಧೋರಣೆಗಳನ್ನೂ ರಾಜಕಾರಣವನ್ನೂ ಪೋಷಿಸುವ ವರ್ಗ ಇದಾಗಿದೆ. ಇದರಲ್ಲಿ ರಾಜಕಾರಣಿಗಳು, ಉದ್ದಿಮೆದಾರರು, ಸರ್ಕಾರಿ ಅಧಿಕಾರಿಗಳು, ಗುತ್ತಿಗೆದಾರರು, ಶಾಲಾ ಕಾಲೇಜುಗಳನ್ನೂ ಆಸ್ಪತ್ರೆಗಳನ್ನೂ ವ್ಯಾವಸಾಯಿಕ ನೆಲೆಯಲ್ಲಿ ಸ್ಥಾಪಿಸಿ ಬೆಳೆಸುತ್ತಿರುವ ನಿವೇಶಕರು, ಬರಹಗಾರರು, ಗೀತವಾದ್ಯನೃತ್ಯ ಕ್ಷೇತ್ರಗಳು ಕಲಾವಿದರು, ಸಿನೇಮಾ ರಂಗದ ಮುಂಚೂಣಿಯಲ್ಲಿರುವವರು ಸೇರಿದ್ದಾರೆ. ಇಂದಿನ ಪುರಿ ಜಗನ್ನಾಥ ದೇವಾಲಯವು ಈ ವರ್ಗಕ್ಕೆ ಸೇರಿದ್ದು. ಆದರೆ, ಬಡವ–ಸಿರಿವಂತ, ಬ್ರಾಹ್ಮಣ–ಶೂದ್ರ, ಸ್ತ್ರೀ–ಪುರುಷ ಭೇದವಿಲ್ಲದೆ ಎಲ್ಲ ಹಿಂದೂಗಳಿಗೂ ಅಲ್ಲಿ ಪ್ರವೇಶವಿದೆ. ಹಣ ತೆತ್ತಲು ತಯಾರಿರುವವರಿಗೆ ವಿಶೇಷ ಉಪಚಾರ. ಇಲ್ಲದವರೂ ಆತಂಕವಿಲ್ಲದೆ ದರ್ಶನ ಪಡೆದು ಬರಬಹುದು. ಕೇಳಿದ ಕಡೆಯಲ್ಲೆಲ್ಲ ಹಣ ತೆರದಿದ್ದರೆ ಅರ್ಚಕರ ಬೈಗುಳ ಕೇಳಿಬರುವ ಸಾಧ್ಯತೆಯಿದೆ. ದಿನವೆಲ್ಲ ದೇವಾಲಯದ ಒಂದಿಲ್ಲೊಂದು ಭಾಗದಲ್ಲಿ ಅರ್ಚಕಬಳಗಕ್ಕೆ ಸೇರಿದವನೊಬ್ಬ ದರ್ಶನಾರ್ಥಿಗಳನ್ನು ಹಣ ನೀಡಲಿಲ್ಲವೆಂದು ಹಳಿಯುವ, ಬೈಯ್ಯುವ ಪ್ರಸಂಗಗಳು ಜರುಗಿಯೇ ಇರುತ್ತವೆ. ಆದರೆ ದೇವರಿಗೆ ತೋರುವಷ್ಟೇ ಭಕ್ತಿಯನ್ನು ಅರ್ಚಕಬಳಗದವರಿಗೂ ತೋರುವ ಅಮಾಯಕ ಬಡಪಾಯಿಗಳಿಗೆ ಮಾತ್ರ ಈ ವಿಧಿ. ಅರ್ಚಕರನ್ನು ಗದರಿಸಿ ನಿಲ್ಲಿಸುವ ಸಾಮರ್ಥ್ಯ ಹೊಂದಿರುವ ಅಗಲಬಾಯಿಯ ಭಕ್ತರೊಂದಿಗೆ ಅವರು ಎಷ್ಟೇ ಬಡವರಾಗಿರಲಿ, ಅರ್ಚಕರು ದುರ್ನಡತೆಯಿಂದ ವ್ಯವಹರಿಸುವ ಧೈರ್ಯ ತೋರುವುದಿಲ್ಲ. ದೀನವರ್ಗಗಳ ನಡುವಲ್ಲಿ ಅಂಥ ಜಗಳಗಂಟಿ ಭಕ್ತರ ಸಂಖ್ಯೆ ವಿರಳ. ಹೀಗಾಗಿ ಅವರು ಅರ್ಚಕರ ಅಸಹ್ಯ ಮಾತುಗಳನ್ನು ಕೇಳಬೇಕಾದ್ದು ಅನಿವಾರ್ಯವಾಗಿ ಬಿಡುತ್ತದೆ. ಕೆಲವೊಮ್ಮೆ ಹಣ ನೀಡದಿದ್ದರೆ ಅರ್ಚಕರು ಹೊಡೆಯಬಹುದು, ನೂಕಿ ಹೊರಗಟ್ಟಲೂ ಬಹುದು. ಅಂಥ ಪ್ರಸಂಗದಲ್ಲಿ ಭಕ್ತನೊಬ್ಬ ಯಾ ಭಕ್ತೆಯೊಬ್ಬಳು ಗಾಯಗೊಂಡಳೆಂಬ ಸುದ್ದಿ ತಿಂಗಳಿಗೊಮ್ಮೆಯಾದರೂ ವಾರ್ತಾಮಾಧ್ಯಮಗಳಲ್ಲಿ ಕೇಳಿಬರುತ್ತದೆ. ಆ ಸಂದರ್ಭಗಳಲ್ಲಿ ತಪ್ಪಿತಸ್ತ ಪರಾರಿಯಾಗಿ ಹೋದನೆಂದು ಹೇಳಲಾಗುತ್ತದೆ. ಮುಂದೇನಾಗುತ್ತದೆಯೋ ಯಾರಿಗೂ ತಿಳಿಯದು. ಜನ ಆ ಪ್ರಸಂಗವನ್ನು ಒಂದೇ ದಿನದಲ್ಲಿ ಮರೆತುಬಿಡುತ್ತಾರೆ.

ದೇವಾಲಯವು ಪ್ರಜಾಪ್ರಭುತ್ವದಡಿಯಲ್ಲಿನ ಚುನಾಯಿತ ಸರ್ಕಾರದ ನಿಯಂತ್ರಣಕ್ಕೆ ಬಂದರೂ ಸದಾ ವಿವಾದಗಳಿಂದಾಗಿ ಸುದ್ದಿಯಲ್ಲಿರುತ್ತದೆ. ನಾನು ಪ್ರಥಮಬಾರಿಗೆ ಅಲ್ಲಿಗೆ ಹೋದದ್ದು 2011ರ ಫೆಬ್ರವರಿಯಲ್ಲಿ. ಅಲ್ಲಿಂದಾಚೆಗೆ ನಿರಂತರ ಪುರಿಗೆ ಭೇಟಿ ನೀಡುತ್ತಾ ತಾಸುಗಟ್ಟಲೆ ದೇವಾಲಯದಲ್ಲಿ ಕಳೆದು, ಭಕ್ತರೊಂದಿಗೆ, ಅರ್ಚಕರೊಂದಿಗೆ, ಊರ ನಿವಾಸಿಗಳೊಂದಿಗೆ, ಟೆಂಪಲ್ ಕಮಿಟಿಯ ಸದಸ್ಯರೊಂದಿಗೆ, ಗಜಪತಿಯೊಂದಿಗೆ, ಮಾತನಾಡಿದ್ದೇನೆ. ದೇವಾಲಯಕ್ಕೆ ಸಂಬಂಧಪಟ್ಟ ಅನೇಕ ಆಕರಗ್ರಂಥಗಳನ್ನೂ ಅಧ್ಯಯನರೂಪದ ಗ್ರಂಥ, ಲೇಖನಗಳನ್ನೂ ಓದಿದ್ದೇನೆ, ರಥಯಾತ್ರೆ, ಕಾರ್ತಿಕ ಪೂರ್ಣಿಮೆ, ಜನ್ಮಾಷ್ಟಮಿ ಮೊದಲಾದ ಅನೇಕ ಆಚರಣೆಗಳಲ್ಲಿ ಪಾಲ್ಗೊಂಡು ಅವುಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಈ ಐದು ವರ್ಷಗಳಲ್ಲಿಯೇ ಅಲ್ಲಿ ನಡೆದ ವಿವಾದಗಳಿಗೆ ಎಣಿಕೆಯಿಲ್ಲ.

2012ರ ರಥಯಾತ್ರೆಯ ಸಂದರ್ಭ. ಒಡಿಶಾ ಸರ್ಕಾರದ ವಾರ್ತಾ ಹಾಗೂ ಪ್ರಸಾರ ಇಲಾಖೆಯು ಪ್ರತಿ ತಿಂಗಳು ಇಂಗ್ಲಿಶ್‌ನಲ್ಲಿ *ಒಡಿಶಾ ರಿವ್ಯು* ಮತ್ತು ಒಡಿಯಾದಲ್ಲಿ *ಉತ್ಕಳ ಪ್ರಸಂಗ* ಪತ್ರಿಕೆಯನ್ನು ಪ್ರಕಟಿಸುತ್ತದೆ. ರಥಯಾತ್ರೆಯ ಸಮಯಕ್ಕೆ ಎರಡೂ ಪತ್ರಿಕೆಗಳು *ರಥಯಾತ್ರಾ ಸ್ಪೆಶಲ್* ಎಂಬ ವಿಶೇಷ ಸಂಚಿಕೆಗಳನ್ನು ಹೊರತರುತ್ತವೆ. ಜೂನ್ 2012ರ *ಉತ್ಕಳ ಪ್ರಸಂಗ* ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಲೇಖನವೊಂದು ಪ್ರಕಟಗೊಂಡಿತು. ಪತ್ರಿಕೆಯ ಸಂಪಾದಕ ಹುಸೇನ್ ರಬೀ ಗಾಂಧಿ ಜಗನ್ನಾಥನು ಜಗತ್ತಿನ ಎಲ್ಲರಿಗೂ ನಾಥನಾಗಿರುವುದರಿಂದ ದೇವಾಲಯಲ್ಲಿ ಕ್ರೈಸ್ತ, ಮೊಹಮ್ಮದೀಯ ಹಾಗೂ ಇತರ ಮತದವರಿಗೆ ಪ್ರವೇಶ ನಿಷೆಧಿಸುವುದು ಸರಿಯಲ್ಲ, ಸರ್ವರಿಗೂ ಪ್ರವೇಶ ಒದಗಿಸಿಕೊಡಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಲೇಖನ ವಿವಾದವಾಯಿತು. ಅರ್ಚಕವರ್ಗದವರೂ ನಾಡಿನ ಗಣನೀಯ ವ್ಯಕ್ತಿಗಳಲ್ಲಿ ಹಲವರೂ ತುಚ್ಛ ಸಾಂಪ್ರದಾಯಿಕತೆ ಮೆರೆದರು. ವಿಶೇಷ ಸಂಚಿಕೆಯನ್ನು ಕೂಡಲೆ ಹಿಂತೆಗೆದುಕೊಳ್ಳಲಾಯಿತು. ಪ್ರಗತಿಶೀಲರ ಖಂಡನೆ ಎಲ್ಲಿಯೂ ಸುದ್ದಿಯಾಗಲಿಲ್ಲ.

2013ರ ರಥಯಾತ್ರೆಯ ಸಂದರ್ಭದಲ್ಲಿ ಇನ್ನೊಂದು ವಿವಾದಾಸ್ಪದ ಪ್ರಸಂಗ ನಡೆಯಿತು. ಇಟೆಲಿ ಮೂಲದ, ಆದರೆ 1978ರಿಂದ ಭುಬನೇಶ್ವರದಲ್ಲೇ ನೆಲಸಿರುವ, ಪದ್ಮಶ್ರೀ ಪ್ರಶಸ್ತಿ ವಿಜೇತ ಖ್ಯಾತ ಒಡಿಶೀ ನೃತ್ಯಾಂಗನೆ ಇಲಿಯಾನಾ ಸಿಟಾರಿಸ್ಟಿಯವರ ಮೇಲೆ ಹಲ್ಲೆ ನಡೆಯಿತು. ರಥಯಾತ್ರೆ ಸಂದರ್ಭದಲ್ಲಿ ಸಾವಿರಾರು ಭಕ್ತರು ರಥವೇರಿ ಜಗನ್ನಾಥನ ಮೂರ್ತಿಯನ್ನು ಮುಟ್ಟಿ ನಮಿಸುವುದು ಸಾಮಾನ್ಯವಾಗಿತ್ತು. ರಥದ ಮೇಲೆ ಕುಳಿತ ದೈತಾಪತಿ ಪೂಜಾರಿಗಳು ಭಕ್ತರಿಂದ ತೋಚಿದಂತೆ ಹಣ ಪಡೆದು ಮೂರ್ತಿಯನ್ನು ಸ್ಪರ್ಶಿಸಲು ಅನುಮತಿ ನೀಡುತ್ತಿದ್ದರು. ಹೀಗಾಗಿ ವರ್ಷಕ್ಕೊಮ್ಮೆ ಜರುಗುವ ರಥಯಾತ್ರೆಯು ದೈತಾಪತಿಗಳಿಗೆ ಹಣದ ಸುಗ್ಗಿಯಾಗಿತ್ತು. ಜಗನ್ನಾಥನ ಪರಮ ಭಕ್ತೆಯಾದ ಇಲಿಯಾನಾ ಸಿಟಾರಿಸ್ಟಿ ಭಾರತೀಯಳಲ್ಲ, ಹಿಂದೂ ಧರ್ಮಕ್ಕೆ ಸೇರಿದವಳೂ ಅಲ್ಲ. ಆದ್ದರಿಂದ ದೇವಾಲಯದೊಳಗೆ ಆಕೆಗೆ ಪ್ರವೇಶವಿಲ್ಲ. ರಥಯಾತ್ರೆಯ ಸಂದರ್ಭದಲ್ಲಿ ದೇವತಾಮೂರ್ತಿಗಳನ್ನು ಹೊರತಂದಾಗ ಮಾತ್ರ ದರ್ಶನ ಪಡೆಯುವ ಅವಕಾಶ ಆಕೆಗೆ ದೊರಕುತ್ತಿತ್ತು. 2013ರಲ್ಲಿ ರಥವೇರಲು ಆಕೆಯ ಕೈಯಿಂದ ನೂರು ರೂಪಾಯಿಗಳನ್ನು ಪಡೆದ ದೈತಾಪತಿಗಳು ಮೂರ್ತಿಯನ್ನು ಸ್ಪರ್ಶಿಸಬೇಕಾದರೆ ಇನ್ನೂ ಒಂದು ಸಾವಿರ ರೂಪಾಯಿ ನೀಡಬೇಕೆಂದರು. ಇಲಿಯಾನಾ ಇದಕ್ಕೆ ಒಪ್ಪಿಕೊಳ್ಳಲಿಲ್ಲ. ದೈತಾಪತಿಗಳು ನಿರ್ಬಂಧಿಸಿದರು. ಇಲಿಯಾನ ಪ್ರತಿಭಟಿಸತೊಡಗಿದಳು. ಕೂಡಲೆ ದೈತಾಪತಿಗಳಲ್ಲಿಬ್ಬರು "ವಿದೇಶಿ! ವಿದೇಶಿ!! ಮೈಲಿಗೆ!!!" ಎಂದು ಕೂಗುತ್ತ ಆಕೆಯ ತಲೆಮೇಲೆ ತೀವ್ರ ಪ್ರಹಾರ ನಡೆಸಿದರು. ಸುದ್ದಿಮಾಧ್ಯಮಗಳಲ್ಲಿ ಇದು ಚರ್ಚೆಗೀಡಾಯಿತು. ದೈತಾಪತಿಗಳು ವ್ಯಾಪಕ ಖಂಡನೆಗೆ ಗುರಿಯಾದರು. ಘಟನೆಯು ಪೋಲಿಸ್ ಕೇಸಾಯಿತು. ಆ ವೇಳೆಗಾಗಲೇ ಆರೋಪಿಗಳಾದ ದೈತಾಪತಿಗಳಿಬ್ಬರೂ ನಾಪತ್ತೆಯಾಗಿದ್ದರು.

ಈ ಸಂದರ್ಭದಲ್ಲಿ ಪುರಿಯ ಶಂಕರಾಚಾರ್ಯರು ದೇವತಾಮೂರ್ತಿಯನ್ನು ಸಂಬಂಧಿಸಿದ ಅರ್ಚಕರೂ ಸೇವಕರೂ ಅಲ್ಲದೆ ಮತ್ತಾರೂ ಸ್ಪರ್ಶಿಸುವಂತಿಲ್ಲ, ಜನಸಾಮಾನ್ಯರು ರಥವನ್ನೇರಕೂಡದು, ಹಾಗೆ ಮಾಡಿದಲ್ಲಿ ಮೂರ್ತಿಗಳು

ಮೈಲಿಗೆಯಾಗುವವು, ಹಣದ ವ್ಯಾಮೋಹಕ್ಕೆಂದು ದೈತಾಪತಿಗಳು ಆರಂಭಿಸಿದ ಈ ದುಷ್ಕೃತ್ಯವನ್ನು ಕೂಡಲೆ ನಿಲ್ಲಿಸಬೇಕೆಂದು ಕರೆನೀಡಿದರು. ಶಂಕರಾಚಾರ್ಯರ ವಾದವನ್ನು ಒಪ್ಪಿಕೊಂಡ ದೇವಾಲಯ ನಿರ್ವಹಣಾ ಸಮಿತಿಯು ಮುಂದಿನ ವರ್ಷದಿಂದ ರಥಯಾತ್ರೆಯಲ್ಲಿ ಜನಸಾಮಾನ್ಯರಾರೂ ರಥ ಏರುವಂತಿಲ್ಲ ಎಂದು ಆದೇಶ ಹೊರಡಿಸಿತು. ಇದು ದೈತಾಪತಿಗಳಿಗೆ ದೊಡ್ಡ ಹೊಡೆತವಾಯಿತು.

ಇದರ ಪರಿಣಾಮವಾಗಿ 2014ರ ರಥಯಾತ್ರೆಯಲ್ಲಿ ಪುನಃ ವಿವಾದವೊಂದು ತಲೆದೋರಿತು. ರಥಯಾತ್ರೆಯಲ್ಲಿ ಗಜಪತಿಯು ಛೇರಾ ಪಹಾರಾ ಎಂಬ ಕಸಗುಡಿಸುವ ಆಚರಣೆಯನ್ನು ನಡೆಸಿ ಶಂಕರಾಚಾರ್ಯರು ಪೂಜೆ ಸಲ್ಲಿಸಿದ ಬಳಿಕವಷ್ಟೆ ರಥಗಳನ್ನು ಎಳೆಯಲಾಗುತ್ತದೆ. ಆದರೆ ಈ ವರ್ಷ ದೈತಾಪತಿಗಳು ಆಚಾರ್ಯರ ಮೇಲೆ ಸೇಡು ಸಾಧಿಸುವ ಉದ್ದೇಶದಿಂದ ದೇವಾಲಯ ಆಡಳಿತದ ಮೇಲೆ ತಮಗಿದ್ದ ರಾಜಕೀಯ ಪ್ರಭಾವ ಪ್ರಯೋಗಿಸಿ ಆಚಾರ್ಯರಿಗೆ ವಿಧಿವತ್ತಾಗಿ ಕಳಿಸಲಾಗುವ ಆಹ್ವಾನ ಪತ್ರಿಕೆಯಲ್ಲಿ ಹೊಸ ಕಟ್ಟಳೆಯೊಂದನ್ನು ಸೇರಿಸುವಂತೆ ಮಾಡಿದರು. ಜನಸಾಮಾನ್ಯರು ರಥವೇರುವಂತಿಲ್ಲ, ಆದ್ದರಿಂದ ಪೂಜೆ ಸಲ್ಲಿಸಲು ಶಂಕರಾಚಾರ್ಯರು ಮಾತ್ರ ರಥವೇರತಕ್ಕದ್ದು, ಅವರ ಶಿಷ್ಯಬಳಗದ ಯಾರೂ ರಥವೇರಕೂಡದು, ಇದೇ ಆ ಕಟ್ಟಳೆಯಾಗಿತ್ತು. ಕುಪಿತರಾದ ಶಂಕರಾಚಾರ್ಯರು ರಥಯಾತ್ರೆಯಲ್ಲಿ ಭಾಗವಹಿಸಲು ನಿರಾಕರಿಸಿದರು. ಬಿಕ್ಕಟ್ಟಿನ ಪರಿಸ್ಥಿತಿ ಉಲ್ಬಣಿಸಿತು. ಕೇಂದ್ರ ಸಚಿವ ಜುಗಲ್ ಓರಂರು ಆಚಾರ್ಯರನ್ನು ಕಂಡು ಮನವಿ ಮಾಡಿಕೊಂಡರೂ ಆಚಾರ್ಯರು ಬರಲು ಒಪ್ಪಿಕೊಳ್ಳಲಿಲ್ಲ. ಸಂಜೆ ನಾಲ್ಕರವರೆಗೆ ಅವರಿಗೆಂದು ಕಾಯುತ್ತ ರಥಗಳು ದೇವಾಲಯದ ಮುಂದೆಯೇ ಉಳಿದವು. ಅರ್ಚಕರು, ದೈತಾಪತಿಗಳು, ಗಜಪತಿ, ಲಕ್ಷಾಂತರ ಮಂದಿ ಭಕ್ತರು, ಜಗದೊಡೆಯನಾದ ಸಾಕ್ಷಾತ್ ಶ್ರೀ ಜಗನ್ನಾಥ, ಎಲ್ಲರೂ ಶಂಕರಾಚಾರ್ಯರಿಗೆಂದು ಕಾದು ಬಳಲಿದರು. ಕೊನೆಗೆ ಇನ್ನೂ ವಿಳಂಬಪಡಿಸುವುದು ಯೋಗ್ಯವಲ್ಲ ಎಂದು ಆಚಾರ್ಯರ ಪೂಜೆ ಇಲ್ಲದಂತೆಯೇ ರಥಗಳನ್ನು ಎಳೆಯಲಾಯಿತು. ಅನೇಕ ಕಾಲಗಳಿಂದ ನಡೆಯುತ್ತ ಬಂದ ಆಚರಣೆಯೊಂದು ಮೇಲರಿಮೆ ಕೀಳರಿಮೆಯ ಈ ಸಂಘರ್ಷದಿಂದ ನಿಂತುಹೋಯಿತು.

2015ರಲ್ಲಿ ಹಳೆಯ ವಿಗ್ರಹಗಳನ್ನು ತೆಗೆದು ರತ್ನಸಿಂಹಾಸನದ ಮೇಲೆ ಹೊಸ ಪ್ರತಿಮೆಗಳನ್ನು ಸ್ಥಾಪಿಸುವ ನಬಕಳೇಬರ ಮಹೋತ್ಸವ ನಡೆಯಿತು. ಆ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ವಿವಾದಗಳು ತಲೆಯೆತ್ತಿದವು. ಹೊಸ ಮೂರ್ತಿಗಳನ್ನು ಕೆತ್ತಲು ತಜ್ಞರು ವಿಧಿವತ್ತಾಗಿ ಸೂಚಿಸಿದ ಬೇವಿನ ಮರಕ್ಕಿಂತ ಭಿನ್ನವಾದ ಮತ್ತೊಂದು ಬೇವಿನ ಮರವನ್ನು ಕಡಿಯಲಾಗಿ ಅವು ದುರ್ಬಲವಾಗಿವೆ ಎಂಬ ವಿಚಾರವು ಕೆತ್ತುವ ವೇಳೆಯಲ್ಲಿ ತಿಳಿದುಬಂದು ಸುದ್ದಿಮಾಧ್ಯಮಗಳಲ್ಲಿ ವಿವಾದ ಆರಂಭವಾಯಿತು. ಇನ್ನೂ ಹೆಚ್ಚಿನ ವಿವಾದವು ಬ್ರಹ್ಮ ಪದಾರ್ಥದ ವರ್ಗಾವಣೆಯ ಆಚರಣೆಯಲ್ಲಿ ನಡೆಯಿತು. ಹಳೆಯ ಮೂರ್ತಿಗಳಿಂದ ಬ್ರಹ್ಮ ಪದಾರ್ಥವನ್ನು ಹೊಸ ಮೂರ್ತಿಗಳಿಗೆ ವರ್ಗಾಯಿಸುವ ಕಾರ್ಯವು ಗೋಪ್ಯವಾಗಿ ನಡೆಯುವಂಥದ್ದು. ಅದಕ್ಕೆಂದೇ ನೇಮಕಗೊಂಡ ನಾಲ್ವರು ಸೇವಕರು ಕಣ್ಣುಕಟ್ಟಿ ಈ ಕಾರ್ಯವನ್ನು ನೆರವೇರಿಸುವರು. ಆದರೆ ಈ ಬಾರಿ ಆಚರಣೆಯ ಹೊತ್ತಲ್ಲಿ ಅರ್ಚಕವರ್ಗಕ್ಕೆ

ಸೇರಿದ ಕೆಲವರು ಅಲ್ಲಿ ಉಪಸ್ಥಿತರಿದ್ದರಷ್ಟೇ ಅಲ್ಲ, ಅವರಲ್ಲಿ ಇಬ್ಬರು ತಮ್ಮ ಮೊಬೈಲ್ ಫೋನ್‌ನಲ್ಲಿ ಬ್ರಹ್ಮಪದಾರ್ಥದ ಚಿತ್ರ ತೆಗೆದುಕೊಂಡರೆಂಬ ವದಂತಿ ಹರಡಿತು. ಈ ಇಬ್ಬರೂ ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜು ಜನತಾ ದಲ್ ಪಕ್ಷದೊಂದಿಗೆ ನಿಕಟ ಸಂಬಂಧ ಹೊಂದಿದವರು. ಯಾರೂ ಕಾಣಬಾರದ ಬ್ರಹ್ಮ ಪದಾರ್ಥದ ಚಿತ್ರ ತೆಗೆದುಕೊಂಡ ವಾರ್ತೆ ಉದ್ವಿಘ್ನ ಪರಿಸ್ಥಿತಿಯನ್ನು ಸೃಷ್ಟಿಸಿತು. ರಾಜ್ಯದ ವಿವಿಧೆಡೆಗಳಲ್ಲಿ ಅಪಾರ ಪ್ರತಿಭಟನೆ ನಡೆದವು. ವಕೀಲರ ಸಂಘವು ಬೀದಿಗಿಳಿಯಿತು. ವಿರೋಧ ಪಕ್ಷಗಳು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ರಾಜಿನಾಮೆ ನೀಡಬೇಕೆಂದು ಕರೆನೀಡಿ ಊರೂರಲ್ಲಿ ಪ್ರತಿಭಟನಾ ಸಭೆಗಳನ್ನು ಹಮ್ಮಿಕೊಂಡವು. ಆರೋಪಿಗಳಾದ ಅರ್ಚಕರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರ ನಿರ್ದೇಶ ನೀಡಿತು. ಅರ್ಚಕರಿಬ್ಬರನ್ನೂ ಸೇವೆಯಿಂದ ಅಮಾನತುಗೊಳಿಸಲಾಯಿತು.

ಸುಮಾರು ಸಾವಿರ ವರ್ಷಗಳ ಇತಿಹಾಸವಿರುವ ಹಳೆಯ ದೇವಾಲಯ ಈಗ ಶಿಥಿಲಾವಸ್ಥೆಯಲ್ಲಿದೆ. ಇತ್ತೀಚೆಗೆ ಅದರ ಶಿಖರದ ಮೇಲಿಂದ ದೊಡ್ಡ ಕಲ್ಲೊಂದು ಉರುಳಿಬಿತ್ತು. ದೇವಾಲಯದ ದುರಸ್ತಿಕಾರ್ಯ ಕೂಡಲೆ ನಡೆಯಬೇಕಿದೆ. ಆರ್ಕಿಯೊಲಾಜಿಕಲ್ ಸರ್ವೇ ಆಫ್ ಇಂಡಿಯಾದ ಮೇಲ್ನೋಟದಲ್ಲಿ ನಡೆಯಬೇಕಾದ ಈ ಕಾರ್ಯವನ್ನು ಡಿಸೆಂಬರ್ 2015ರಲ್ಲಿ ಆರಂಭಗೊಳಿಸಲು ನಿರ್ಧರಿಸಲಾಗಿತ್ತು. ಆದರೆ ನಡೆಯಲಿಲ್ಲ. ಮತ್ತೊಂದು ವಿವಾದಕ್ಕೆ ಇದು ದಾರಿ ಮಾಡಿಕೊಟ್ಟಿತು. ಪ್ರತಿನಿತ್ಯ ಸಾವಿರಾರು ಜನ ಭಕ್ತರು ಸೇರುವ ದೇವಾಲಯದಲ್ಲಿ ದುರಸ್ತಿಯನ್ನು ಮುಂದೂಡುತ್ತ ಹೋಗುವುದು ಅಪಾಯಕಾರಿ ಎಂದು ಪ್ರತ್ಯೇಕ ಹೇಳಬೇಕಿಲ್ಲ. ಆದರೆ ಭಕ್ತರಿಗೆ ಇದರ ಹಂಗಿಲ್ಲ. ಜಗನ್ನಾಥ ತಮ್ಮನ್ನು ಕಾಯುವನೆಂಬುದು ಅವರ ಅದಮ್ಯ ನಂಬಿಕೆ. ಅನೇಕ ತೊಡಕುಗಳ ಬಳಿಕ ಜನವರಿ 2016ರಲ್ಲಿ ಆರಂಭಗೊಂಡ ದುರಸ್ಥಿಕಾರ್ಯವು ಇದೀಗ ಮಂದಗತಿಯಲ್ಲಿ ಮುಂದುವರೆದಿದೆ.

ಹೀಗೆ ದುರ್ಬಲವಾಗಿ ಹೋಗಿರುವ ದೇವಾಲಯದೊಳಗೆ ಶಾಂತನಾಗಿ ಕುಳಿತ ಜಗನ್ನಾಥನು ಅಗಣಿತ ವಿಸ್ಮಯಗಳಿಗೆ ಸಾಕ್ಷಿಯಾಗಿದ್ದಾನೆ. ಸಾಮ್ರಾಜ್ಯಗಳು ಏಳಿಗೆ ಪಡೆಯುವುದನ್ನೂ, ಉರುಳಿಹೋಗುವುದನ್ನೂ ಕಂಡಿದ್ದಾನೆ. ಜನ ಸಮೃದ್ಧಿಯಲ್ಲಿ ಹಮ್ಮು ಮೆರೆಯುವುದನ್ನೂ ದುರ್ಭಿಕ್ಷದಲ್ಲಿ ಲಕ್ಷಲಕ್ಷ ಸಂಖ್ಯೆಯಲ್ಲಿ ಮಡಿದು ಮಣ್ಣಾಗುವುದನ್ನೂ ವೀಕ್ಷಿಸಿದ್ದಾನೆ. ಸಂತರ ಭಜನೆಯನ್ನೂ ಕವಿಗಳು ಗೀಚಿಹಾಕಿದ ಸಾಲುಗಳನ್ನೂ ನೋಡಿದ್ದಾನೆ. ಅವನು ಕೆರಳಿಸಿದ ಕುತೂಹಲಕ್ಕೆ ಭಿಕಾರಿ ಬಾಲ್ ನಂತ ಅಸಂಖ್ಯ ಗಾಯಕರು ಮೈಮರೆತು (ಕರ್ಣಕಠೋರವಾಗಿ) ಹಾಡಿದ್ದಾರೆ. ನೂರಾರು ಬರಹಗಾರರು ಕಥೆ, ಕವಿತೆ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಬಹುತೇಕ ಬರಹಗಳು ಭಕ್ತಿ, ಉದ್ವೇಗ, ಪ್ರಶಂಸೆ ಯಾ ರೊಮೇಂಟಿಕ್ ಭಾವನೆಗಳಿಂದ ಕೂಡಿದ್ದರೆ ಒಮ್ಮೊಮ್ಮೆ ಅಪ್ರತಿಮ ಕಲಾಕೃತಿಗಳೂ ಮೂಡಿಬಂದಿರುವುದುಂಟು. ತೆಲುಗು ಭಾಷೆಯಲ್ಲಿ ಖ್ಯಾತ ಕವಿ ಶ್ರೀಶ್ರೀ ರಚಿಸಿದ ರಥಯಾತ್ರೆ ಕುರಿತ ಕವಿತೆ ಅವುಗಳಲ್ಲೊಂದು. ಒಡಿಯಾದ ಪ್ರಗತಿಶೀಲ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗೋಪಿನಾಥ್ ಮಹಾಂತಿಯವರು ನವ್ಯ ಶೈಲಿಯಲ್ಲಿ ಬರೆದ ಸ್ಟ್ರೀಮ್ ಆಫ್ ಕಾನ್ಶಿಯಸ್‌ನೆಸ್ ಮಾದರಿಯ ಲಯ ಬಿಲಯ ಎಂಬ ಅಪ್ರತಿಮ ಕಾದಂಬರಿ ಮತ್ತೊಂದು.

ಕಳೆದ ಮೂರು ದಶಕಗಳಲ್ಲಿ ಜಗನ್ನಾಥನತ್ತ ಆಕರ್ಷಿತರಾದ ಸಂಶೋಧಕರಿಗೂ ಎಣಿಕೆಯಿಲ್ಲ. ಒಡಿಯಾ, ಬಂಗಾಲಿ, ಇಂಗ್ಲಿಶ್, ಜರ್ಮನ್ ಮೊದಲಾದ ಭಾಷೆಗಳಲ್ಲಿ ನೂರಾರು ಗ್ರಂಥಗಳೂ, ಸಾವಿರಾರು ಲೇಖನಗಳೂ ಪ್ರಕಟವಾಗಿವೆ. ಜಗದೊಡೆಯನನ್ನು ಕೊಂಡಾಡುವ ಕೃತಿಗಳೇ ಹೆಚ್ಚು. ಆದರೆ ಅನೇಕ ಉತ್ತಮ ಅಧ್ಯಯನಗಳೂ ನಡೆದಿವೆ. ದೇವಾಲಯ ಹಾಗೂ ರಾಜಕಾರಣದ ನಡುವಿನ ಸಂಬಂಧ ಕುರಿತು ಯಾಮಿನೀ ಮುಬಾಯಿ ಮತ್ತು ಇಶಿತಾ ಬೆನರ್ಜಿ ದೂಬೇ ಶ್ರೇಷ್ಠ ಶೋಧಗಳನ್ನು ನಡೆಸಿದ್ದಾರೆ. ಹತ್ತೊಂಬತ್ತನೆಯ ಶತಮಾನದ ದೇವಾಲಯದ ಆಗುಹೋಗುಗಳನ್ನು ಪ್ರಭಾತ್ ಮುಖರ್ಜಿ ಸಮೀಕ್ಷಿಸಿದ್ದಾರೆ. ದೇವಾಲಯದ ಸಂರಚನೆ ಹಾಗೂ ವ್ಯವಸ್ಥೆ ಕುರಿತಂತೆ ನಿತ್ಯಾನಂದ ಪಟ್ನಾಯಕ್ ಅವರ ಗ್ರಂಥ ಪ್ರಕಟವಾಗಿದೆ. ಅರ್ಚಕವರ್ಗದ ಪ್ರಭಾವದ ಏಳಿಗೆ ಕುರಿತ ಗಗನೇಂದ್ರನಾಥ್ ದಾಸ್‌ರ ಸಂಶೋಧನೆ ಗಮನಾರ್ಹವಾಗಿದ್ದರೆ, ದೇವಾಲಯದ ಆಚರಣೆಗಳ ಕುರಿತಂತೆ ಗಯಾ ಚರಣ್ ತ್ರಿಪಾಠಿಯವರು ರಚಿಸಿದ ಗ್ರಂಥ ಅಪಾರ ಮಹತ್ವ ಹೊಂದಿದ್ದಾಗಿದೆ. ಇಲ್ಲಿ ಉಲ್ಲೇಖಿಸಲೇ ಬೇಕಾದ ಸಂಗತಿಯೆಂದರೆ ಪುರಿ ದೇವಾಲಯದ ಬಗ್ಗೆ ತಲಸ್ಪರ್ಶಿಯಾದ ಅನೇಕ ಅಧ್ಯಯನಗಳನ್ನು ಕೈಗೊಂಡವರು ದೇವಾಲಯದೊಳಕ್ಕೆ ಪ್ರವೇಶವಿಲ್ಲದ ವಿದೇಶಿಗಳು ಎಂಬ ವಿಚಾರ. 1970ರ ದಶಕದಲ್ಲಿ ಹರ್ಮನ್ ಕುಲ್ಕ ಅವರ ಮುಂದಾಳತ್ವದಲ್ಲಿ ಜರ್ಮನಿಯಿಂದ ನಡೆದ ಒರಿಸ್ಸಾ ರೀಸರ್ಚ್ ಪ್ರಾಜೆಕ್ಟ್ ಈ ನಿಟ್ಟಿನಲ್ಲಿ ಅಮೂಲ್ಯ ಕೊಡುಗೆಯಾಗಿದೆ. ಕೆಲವು ಭಾರತೀಯ ಸಂಶೋದಕರನ್ನೂ ಒಳಗೊಂಡ ಪ್ರಾಜೆಕ್ಟ್ ಇದಾಗಿತ್ತು. ದೇವಾಲಯದ ರಾಜಕೀಯ ಸ್ವರೂಪ, ರಾಜಮನೆತನಗಳು ನೀಡಿದ ಪೋಷಣೆ ಹಾಗು ಇವುಗಳಲ್ಲಿ ಕಾಲಕಾಲಕ್ಕೆ ಉಂಟಾದ ಪರಿವರ್ತನೆಗಳ ಕುರಿತ ಕುಲ್ಕ ಅಧ್ಯಯನ ಕೈಗೊಂಡರು. ಜಗನ್ನಾಥನ ಮೇಲೆ ವೈಷ್ಣವ, ಶೈವ ಪರಂಪರೆಗಳ ಪ್ರಭಾವ ಕುರಿತು ಫಾನ್ ಸ್ಟಿಟೆನ್‌ಕ್ರಾನ್ ಶೋಧ ನಡೆಸಿದರು. ನಗರದ ವೈದಿಕ ಬ್ರಾಹ್ಮಣರ ಕುರಿತು ಜಾರ್ಜ್ ಫೆಫರ್, ಪುರಿಯ ಶಂಕರಾಚಾರ್ಯರ ವಿಷಯವಾಗಿ ಜೆ. ಲೂಟ್, ದೇವಾಲಯದ ಈಗಿನ ಅರ್ಥಿಕ ವ್ಯವಸ್ಥೆಯ ಬಗ್ಗೆ ಇ.ಹೈನ್ ಮತ್ತು ಮಹಿಮಾ ಧರ್ಮ ಕುರಿತು ದಿವಂಗತ ಏನ್‌ಶಾರ್ಲಾಟ್ ಎಶ್‌ಮನ್ ನಡೆಸಿದ ವಿಶ್ಲೇಷಣೆಗಳು ಈ ಜಂಟಿ ಸಂಶೋಧನೆಯಲ್ಲಿನ ಗಮನಾರ್ಹ ವಿದೇಶಿ ಕೊಡುಗೆಗಳಲ್ಲಿ ಕೆಲವು. ವಿದೇಶಿ ಸಂಶೋಧಕರ ಅಧ್ಯಯನಗಳು ಇದಾದ ನಂತರವೂ ಮುಂದುವರೆದವು. ಫೆಡರಿಕ್ ಎಪ್‌ಫೆಲ್ ಮಾರ್ಗ್ಲಿನ್ ಪುರಿಯ ದೇವದಾಸಿ ಪರಂಪರೆಯನ್ನು, ನಾನ್ಸಿ ಗಾರ್ಡ್‌ನರ್ ಕ್ಯಾಸೆಲ್ಸ್ ತೀರ್ಥಯಾತ್ರಿ ಶುಲ್ಕವನ್ನು, ಒ.ಎಮ್. ಸ್ಟಾರ್ಸಾ ದೇವಾಲಯದ ವಾಸ್ತುಶಿಲ್ಪ, ಕಲೆಗಳನ್ನು, ದೀನಾನಾಥ್ ಪತಿಯೊಂದಿಗೆ ಕೂಡಿ ಏಬರ್‌ಹಾರ್ಡ್ ಫಿಶರ್ ಅನಸರ ಪಟಚಿತ್ರಗಳನ್ನು, ಶೋಧಿಸಿದರು. ರಾಜತ್ವಕ್ಕೂ ದೇವಾಲಯಕ್ಕೂ ಇದ್ದ ಸಂಬಂಧ ಕುರಿತು ಯಾಕೋಬ್ ರೊಸೇಲ್ ಹಾಗೂ ಇಂದ್ರದ್ಯುಮ್ನನ ಪುರಾಣಕಥೆ ಕುರಿತು ರುಪ್ರೆಕ್ಟ್ ಗೀಬ್ ಜರ್ಮನ್ ಭಾಷೆಯಲ್ಲಿ ಗ್ರಂಥರಚನೆ ನಡೆಸಿದರು.

ಇವರಲ್ಲಿ ಇಲಿಯಾನಾ ಸಿಟಾರಿಸ್ಟಿಯಂತೆ ಕುಲ್ಕ ಹಾಗೂ ಫಿಶರ್ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಯಿಂದ ಭೂಷಿತರು. ಆದರೆ ಇಲಿಯಾನಾಳಂತೆಯೇ ದೇವಾಲಯ

ಹೊಕ್ಕು ರತ್ನಸಿಂಹಾಸನದ ಮೇಲೆ ಸುಭದ್ರೆ, ಬಳಭದ್ರರೊಂದಿಗೆ ಸುದರ್ಶನಸಮೇತನಾಗಿ ರಾರಾಜಿಸುತ್ತಿರುವ ಜಗನ್ನಾಥನನ್ನು ಕಾಣಲು ಅಸಮರ್ಥರು.

ಹೀಗೆ, ಪುರಿಯ ಶ್ರೀ ಜಗನ್ನಾಥ ದೇವಾಲಯದ ಕಥೆ ಮುಂದುವರೆದಿದೆ. ಪ್ರತಿವರ್ಷ ರಥಯಾತ್ರೆ ನಡೆಯುತ್ತದೆ. ಹಬ್ಬಹರಿದಿನಗಳು ಸಂಭ್ರಮದಿಂದ ಜರುಗುತ್ತವೆ. ಎಂಟರಿಂದ ಹತ್ತೊಂಭತ್ತು ವರ್ಷಗಳಿಗೊಮ್ಮೆ ನಬಕಳೇಬರ ನಡೆಯುತ್ತದೆ. ಅಂಥ ನಬಕಳೇಬರವೊಂದು 2015ರಲ್ಲಿ ವಿಜೃಂಭಣೆಯಿಂದ ಸಾಗಿತು.

ಪುರಿಯ ದೇವಾಲಯವು ಒಂದು ಮಹಾ ವಿಸ್ಮಯ. ಅತ್ತ ಶುಭ್ರತೆ ತುಂಬಿದ ಜಗನ್ನಾಥನ ಮೂರ್ತಿ, ಇತ್ತ ನೂರಾರು ಜಿರಲೆಗಳು ಓಡಾಡುತ್ತಿರುವ ಬಿಮಳಾಮಾತೆಯ ವಿಗ್ರಹ. ಅಲ್ಲಿ ಸನ್ಮತಿ ಹಾಗೂ ಪವಿತ್ರತೆಯ ಆಗರದಂತೆ ತೋರುವ ಅರ್ಚಕರ ಮುಖಂಡನಾದ ಪಟಜೋಷಿ ಮಹಾಪಾತ್ರ, ಇಲ್ಲಿ ಗರ್ಭಗೃಹದಲ್ಲೇ ಕವಳ ಮೆಲ್ಲುತ್ತ, ಉಗುಳುತ್ತ, ದರ್ಶನಾರ್ಥಿಗಳನ್ನು ಪೀಡಿಸುವ ಇತರ ಅರ್ಚಕರು. ಒಂದೆಡೆ ಶುಭ್ರವಾದ ರೋಹಿಣಿಕುಂಡ, ಇನ್ನೊಂದೆಡೆ ಕೊಳೆತು ನಾರುವ ಆನಂದ್ ಬಜಾರ್. ಆ ಕಡೆ ಬಾಬ್ ಕಟ್ ಬಿಡಿಸಿ ಜೀನ್ಸ್ ಪ್ಯಾಂಟ್ ಮೇಲೆ ಥಳಥಳಿಸುವ ಟೀಶರ್ಟ್ ತೊಟ್ಟ ಹೊಸಯುಗದ ಗರತಿಯರು. ಈ ಕಡೆ ತಲೆಬೋಳಿಸಿ ಬಿಳಿ ಸೀರೆಯುಟ್ಟು ಪಾತ್ರೆಯಿಲ್ಲದೆ ಸೆರಗುಚಾಚಿಯೇ ಭಿಕ್ಷೆಬೇಡುತ್ತಿರುವ ಮುದಿವಿಧವೆಯರು. ಆನಂದ್ ಬಜಾರ್‌ನಲ್ಲಿ ಜಾತಿ, ಭಾಷೆ, ಪ್ರಾಯ, ಲಿಂಗಭೇದವಿಲ್ಲದೆ ಎಲ್ಲರೂ ಕುಳಿತು ಒಮ್ಮನದಿಂದ ಉಣ್ಣುವ ವಾತಾವರಣ. ಮುಕ್ತಿ ಮಂಡಪ್ ಮೇಲೆ ನಗ್ನವಾದ ಬ್ರಾಹ್ಮಣ್ಯಪ್ರದರ್ಶನ. ಸದಾ ದೇವಾಲಯದಲ್ಲೇ ಕಳೆದರೂ ಅದರ ಚರಿತ್ರೆ ಕುರಿತು ಏನೂ ಬಾರದ ಅರ್ಚಕ, ದೇವಾಲಯದೊಳಕ್ಕೆ ಕಾಲಿಡಲು ಅನುಮತಿಯಿಲ್ಲದಿದ್ದರೂ ಅದರ ನಿನ್ನೆಗಳ ಬಗ್ಗೆ ಅಪ್ರತಿಮ ಕೃತಿಗಳನ್ನು ರಚಿಸಿರುವ ಜರ್ಮನಿಯ ಇತಿಹಾಸತಜ್ಞ. ಈ ಎಲ್ಲ ದ್ವಂದ್ವಗಳನ್ನೂ ಪ್ರತಿನಿಧಿಸುವಂತೆ ಗರ್ಭಗೃಹದಲ್ಲಿ ತಂಗಿ ಸುಭದ್ರೆಗೆ ನೆರಳಾಗಿ ನಿಂತ ಬಿಳಿ ಮುಖದ ಬಳಭದ್ರ, ಕಪ್ಪು ಮೋರೆಯ ಜಗನ್ನಾಥ. ಈ ದ್ವಂದ್ವಗಳು ಮಾನವಜೀವನದ ವಿನ್ಯಾಸದಲ್ಲಿಯೇ ಇದೆ ಎಂಬ ಸಂದೇಶ ಸಾರುತ್ತಿರುವಂತೆ ಜಗದೊಡೆಯ ನಿಂತಿದ್ದಾನೆ.

ಸಂಜೆಯ ಇಳಿಹೊತ್ತಲ್ಲಿ ದೇವಾಲಯದ ಪ್ರಾಂಗಣದೊಳಗೆ ನಿಂತು, ಯಾಕೆ ಹೀಗೆ, ಏನು ಈ ದ್ವಂದ್ವಗಳ ಅರ್ಥ ಎಂದು ಯೋಚಿಸುತ್ತಿರುವಾಗ ಶಿಖರದ ಮೇಲೆ ಸೂರ್ಯ ಚಂದ್ರರ ಮುದ್ರೆಯೊತ್ತಿದ ಪತಾಕೆ ಹಾರತೊಡಗುತ್ತದೆ. ಶಂಖಧ್ವನಿ ಮೊಳಗುತ್ತದೆ. ಎಲ್ಲಿಯೋ ಆದಿಶಂಕರರು ರಚಿಸಿದ್ದೆಂದು ಭಕ್ತರು ನಂಬಿರುವ ಶ್ಲೋಕವೊಂದರ ಸಾಲುಗಳು ಕೇಳಿಬರತೊಡಗುತ್ತದೆ.

ನ ವೈ ಪ್ರಾರ್ಥ್ಯಂ ರಾಜ್ಯಂ ನ ಚ ಕನಕ ಮಾಣಿಕ್ಯ ವಿಭವಂ
ನ ಯಾಚೇಹಂ ರಮ್ಯಾಂ ಸಕಲಜನಕಾಮ್ಯಾಂ ವರವಧೂಂ
ಸದಾಕಾಲೇ ಕಾಲೇ ಪ್ರಮಥಪತಿನಾ ಗೀತಚರಿತೋ
ಜಗನ್ನಾಥಸ್ವಾಮೀ ನಯನಪಥಗಾಮೀ ಭವತು ಮೇ

ಹರ ತ್ವಂ ಸಂಸಾರಂ ಧೃತತರಮಸಾರಂ ಸುರಪತೇ
ಹರ ತ್ವಂ ಪಾಪಾನಾಂ ವಿತತಿಮಪರಾಂ ಯಾದವಪತೇ
ಅಹೋ ದೀನೋ ನಾಥೋ ನಿಹಿತಮಚಲಂ ನಿಶ್ಚಿತಪದಂ
ಜಗನ್ನಾಥಸ್ವಾಮೀ ನಯನಪಥಗಾಮೀ ಭವತು ಮೇ

ರಾಜ್ಯ ಬೇಡ ನನಗೆ, ಕನಕಮಾಣಿಕ್ಯಗಳ ವೈಭವವೂ ಬೇಡ, ಎಲ್ಲರೂ ಕಾಮಿಸುವ ವರವಧು ಬೇಡ, ತೊಡೆದುಹಾಕು ಈ ಸಂಸಾರವನ್ನು, ಸದಾ ನನ್ನನ್ನು ನಿನ್ನ ಕಂಗಳ ಪಥದಲ್ಲೇ ಕಾಲಿಕ್ಕಿ ನಡೆವಂತೆ ಮಾಡು.

ಚಿರಕಾಲ ರಾಜ್ಯವೈಭೋಗ ಬಯಸಿ, ಕನಕ ಮಾಣಿಕ್ಯಗಳಿಗಾಗಿ ಹವಣಿಸುತ್ತ, ರೂಪಸಿಯಾದ ವಧುವಿನ ಕನಸುಕಂಡು ನೂರು ಚೈತ್ರಗಳ ಕಾಲ ಸಂಸಾರಸುಖ ಅನುಭವಿಸಲು ಹಾತೊರೆಯುವ ಭಕ್ತಮಾನಸವು ಹೀಗೆ ಗದ್ಗದಕಂಠದಿಂದ ಪ್ರಾರ್ಥಿಸುತ್ತದೆ.

(ಮುಕ್ತಾಯವಾಯಿತು)

ಕೊನೆ ಟಿಪ್ಪಣಿಗಳು


1. Banerjee Dube, ಪೂರ್ವೋಕ್ತ. ಪುಟ 75.
2. ಇಲ್ಲೇ.
3. ಇಲ್ಲೇ.
4. ಇಲ್ಲೇ. ಪುಟ 76.
5. ಇಲ್ಲೇ.
6. ಇಲ್ಲೇ.
7. ಇಲ್ಲೇ.
8. ಇಲ್ಲೇ. ಪುಟ 76–77.
9. ಇಲ್ಲೇ. ಪುಟ 77
10. ಇಲ್ಲೇ.
11. ಇಲ್ಲೇ. ಪುಟ 79–80.
12. ಇಲ್ಲೇ. ಪುಟ 81.

■

ಇತಿಹಾಸವನ್ನು ಜನಪ್ರಿಯಗೊಳಿಸಿದ ಇತಿಹಾಸಕಾರ

□ ಎಚ್.ಎಸ್.ಗೋಪಾಲ ರಾವ್
'ಅಕ್ಷರ', ಐ.ವೈ.ಡಿ.2ನೇ ಅಡ್ಡರಸ್ತೆ,
ಅರಸಿನಕುಂಟೆ, ನೆಲಮಂಗಲ
ತಾಲ್ಲೂಕು, ಬೆಂಗಳೂರು
ಗ್ರಾಮಾಂತರ ಜಿಲ್ಲೆ –562123
hsgorao@yahoo.com

ಯಾವುದೇ ಶಾಸ್ತ್ರ ವಿಷಯವು ವಿದ್ವತ್‌ವಲಯಕ್ಕೇ ಸೀಮಿತವಾದಾಗ ಅದು ಜನರಿಂದ ದೂರ ಉಳಿಯುತ್ತದೆ. ಕುತೂಹಲದಿಂದ ಅಕಸ್ಮಾತ್ ತಿಳಿದ ವಿಚಾರಗಳು ಐತಿಹ್ಯ ಮತ್ತು ಪುರಾಣಗಳಾಗಿ ಮಾರ್ಪಡುತ್ತವೆ. ಸಾಮಾನ್ಯರು ಗ್ರಹಿಸಿದ ವಿಚಾರಗಳು ಐತಿಹ್ಯಗಳಾದರೆ, ವಿದ್ವಾಂಸರು ಮರುಸೃಷ್ಟಿಸಿದ ವಿಚಾರಗಳು ಪುರಾಣಗಳಾಗುತ್ತವೆ. ಆಧುನಿಕ ಇತಿಹಾಸಕಾರ ಐತಿಹ್ಯಗಳನ್ನು ಒಪ್ಪುವುದಿಲ್ಲ ಮತ್ತು ಪುರಾಣಗಳಂತೂ ಮೈಲಿಗೆಯಾಗಿ ದೂರ ಉಳಿಯುತ್ತವೆ. ಇತಿಹಾಸದ ವ್ಯಾಖ್ಯೆಗೆ ಐತಿಹ್ಯ ಮತ್ತು ಪುರಾಣಗಳು ಹೊಂದಿಕೆಯಾಗುವುದಿಲ್ಲ. ಹೊಂದಿಕೆಯಾದರೆ ಇತಿಹಾಸ ದಾರಿ ತಪ್ಪುತ್ತದೆ. ಆದ್ದರಿಂದ ಇತಿಹಾಸವನ್ನು ವಿದ್ವತ್ ವಲಯದಿಂದ ಮುಕ್ತಗೊಳಿಸಿ, ಜನಸಾಮಾನ್ಯರ ಗ್ರಹಿಕೆಗೂ ಸಿಗುವಂತೆ ಮಾಡುವುದು ಜಾಣತನದ ವಿಚಾರ. ಯಾವುದೇ ವಿಷಯವನ್ನು ವಿದ್ವತ್ತಿಗೆ ಅಪಚಾರವಾಗದಂತೆ, ಪ್ರಭುಸಂಹಿತೆಯ ಬದಲು ಮಿತ್ರಸಂಹಿತೆಯ ಮೂಲಕ ತಿಳಿಯಾಗಿ ತಿಳಿಸಿದರೆ ವಿಷಯವು ಎಲ್ಲರಿಗೂ ಅರ್ಥವಾಗುತ್ತದೆ ಮತ್ತು ಜನರ ಪ್ರೀತಿಯನ್ನೂ ಗಳಿಸುತ್ತದೆ. ಆದ್ದರಿಂದ ಪರಂಪರೆಗೆ ಸಂಬಂಧಿಸಿದ ವಿಚಾರಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ಎಚ್ಚರಿಕೆಯಿಂದ ಮತ್ತು ನಿರ್ದಿಷ್ಟ ಗುರಿಯೊಂದಿಗೆ ಮಾಡಿದಾಗ ಯಾವ ಹೇಳಿಕೆಯೂ ವ್ಯರ್ಥ ಎನಿಸುವುದಿಲ್ಲ. ಇತಿಹಾಸಕಾರನ ಕೆಲಸವನ್ನು ಪುರಾಣಿಕ ಮಾಡಬಾರದು; ಐತಿಹ್ಯಗಳನ್ನು ಇತಿಹಾಸಕ್ಕೆ ಬೆರೆಸಬಾರದು. ಆಗ ಇತಿಹಾಸ ಇತಿಹಾಸವಾಗಿಯೇ ಉಳಿಯುತ್ತದೆ. ಗೊಂದಲಗಳಿಗೆ ಅವಕಾಶ ಇರುವುದಿಲ್ಲ. ಅಂತಹ ಕೆಲಸವನ್ನು ಸೂರ್ಯನಾಥ ಉಪೇಂದ್ರ ಕಾಮತ್ ಮಾಡಿದರು



ಚಿತ್ರ ಕೃಪೆ: ಜಯಸಿಂಹ

ಎಂಬುದು ಉತ್ಪ್ರೇಕ್ಷೆಯ ಮಾತಲ್ಲ; ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅವರು ಇತಿಹಾಸದ ಬೋಧನೆ ಮಾಡಿದ ಸಂದರ್ಭದಲ್ಲಿ ಅವರ ಶಿಷ್ಯರಾಗಿದ್ದ ಬಹುತೇಕ ಎಲ್ಲರೂ ಸೂರ್ಯನಾಥ ಕಾಮತರ ಬೋಧನಾ ವಿಧಾನವನ್ನು ಒಪ್ಪಿಕೊಂಡವರು ಮತ್ತು ಮೆಚ್ಚಿಕೊಂಡವರು.

ದಕ್ಷಿಣ ಕನ್ನಡ ಜಿಲ್ಲೆಗೆ ಬ್ಯಾಂಕಿಂಗ್ ಮತ್ತು ಹೋಟೆಲ್ ಉದ್ಯಮ ಅತ್ಯಂತ ಆಪ್ತ. ತಾಲ್ಲೂಕಿನ ಉಪಕೇಂದ್ರ ಆಗಿದ್ದ ಬೆಳ್ತಂಗಡಿಯಲ್ಲಿ ತಂದೆ ಒಂದು ಸಣ್ಣ ಹೋಟೆಲನ್ನು ನಡೆಸುತ್ತಿದ್ದುದನ್ನು ಅವರು ನೆನಪು ಮಾಡಿಕೊಳ್ಳುತ್ತಿದ್ದರು. ಹೋಟೆಲಿಗೆ ಬರುತ್ತಿದ್ದ ಜನ, ರಸ್ತೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯ ಮೆರವಣಿಗೆಗಳು ಮತ್ತು ಅಲ್ಲಿರುತಿದ್ದ ಪತ್ರಿಕೆಗಳ ಪ್ರಭಾವ ಬಾಲಕ ಸೂರ್ಯನಾಥರ ಮೇಲೆ ದಟ್ಟವಾಗಿಯೇ ಆಗಿದ್ದ ಕಾರಣ ಅವರು ಚಿಕ್ಕವರಾಗಿದ್ದಾಗಲೇ ತಮ್ಮ ಬದುಕಿನ ಗುರಿಯನ್ನು ಅಸ್ಪಷ್ಟವಾಗಿ ಗುರುತಿಸಿಕೊಂಡಿದ್ದಂತೆ ತೋರುತ್ತದೆ. 1942ರ 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ವಿದ್ಯಾರ್ಥಿಗಳೂ ಪಾಲ್ಗೊಳ್ಳುತ್ತಿದ್ದರು. ಅದನ್ನು ಕಂಡು ಆಗ ಐದು ವರ್ಷದ ಬಾಲಕ ಸೂರ್ಯನಾಥರಲ್ಲೂ ಸ್ವಾತಂತ್ರ್ಯದ ಬಗ್ಗೆ ತಿಳಿವಳಿಕೆ ಮೂಡಿತು. ಹೋಟೆಲ್‌ನ ಮುಂದೆ ಸಾಗುತ್ತಿದ್ದ ಮೆರವಣಿಗೆಯ ಜೊತೆಗೆ ಮನೆಯಲ್ಲಿ ಎಲ್ಲರೂ ಕಾಂಗ್ರೆಸ್ಸಿಗರಾಗಿದ್ದ ಕಾರಣ ಸ್ವಾತಂತ್ರ್ಯದ ಕಲ್ಪನೆ ಎಳೆಯ ಕಾಮತರಲ್ಲಿ ಸ್ಪಷ್ಟವಾಗಿಯೇ ಇತ್ತು. ಅವರ ಒಬ್ಬ ಅಣ್ಣ ಒಂದೆರಡು ದಿನ ಜೈಲಿನಲ್ಲೂ ಇದ್ದು ಬಂದಿದ್ದ ನೆನಪು ಕಾಮತರಿಗಿತ್ತು.

ಆಗಿನ್ನೂ ದಕ್ಷಿಣ ಭಾರತದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಅಸ್ತಿತ್ವಕ್ಕೆ ಬರುತ್ತಿತ್ತು. ಬಹುತೇಕ 40ರ ದಶಕದಲ್ಲಿ ಬಾಲಕರಾಗಿದ್ದವರಿಗೆ ಅದರ ಶಾಖೆಗಳಲ್ಲಿ ನಡೆಯುತ್ತಿದ್ದ

ಪ್ರಾರ್ಥನೆ, ಶಿಸ್ತುಬದ್ಧ ವ್ಯಾಯಾಮ, ಯೋಗಾಸನ, ಚುಟುಕು ಬೌದ್ಧಿಕ ಉಪನ್ಯಾಸ ಇತ್ಯಾದಿಗಳು ಸಹಜವಾಗಿಯೇ ಆಕರ್ಷಿಸುತ್ತಿದ್ದವು. ನಗರಗಳು ಮತ್ತು ಪಟ್ಟಣಗಳಲ್ಲಿ ಆರ್.ಎಸ್.ಎಸ್. ಶಾಖೆಗಳು ಕ್ರಿಯಾಶೀಲವಾಗಿದ್ದವು. ಅದು ಇನ್ನೂ ಎಲ್ಲಾ ವರ್ಗದ ಜನರನ್ನೂ ಆಕರ್ಷಿಸಿರಲಿಲ್ಲವಾದರೂ, ಕೆಲವು ವರ್ಗದ ಜನರಿಗೆ ಆಪ್ತವಾಗಿತ್ತು. ಅದನ್ನು ನೋಡಿದ ಬಾಲಕರಿಗೆ ಸ್ವಾತಂತ್ರ್ಯಕ್ಕಾಗಿ ಮೆರವಣಿಗೆಗಳನ್ನು ಮಾಡುತ್ತಿದ್ದ ಕಾಂಗ್ರೆಸ್ ಮತ್ತು ಪ್ರಾರ್ಥನೆ, ವ್ಯಾಯಾಮ, ಆಟಪಾಟಗಳಿಗೆ ಆದ್ಯತೆ ನೀಡುತ್ತಿದ್ದ ಆರ್.ಎಸ್.ಎಸ್.ಎರಡರಲ್ಲೂ ಹೆಚ್ಚಿನ ವ್ಯತ್ಯಾಸಗಳು ಕಾಣುತ್ತಿರಲಿಲ್ಲ. ಜೊತೆಗೆ ಯಾವುದೇ ಚಟುವಟಿಕೆಯು ಅಲ್ಲಿನ ಬೋಧಕರನ್ನು ಅವಲಂಬಿಸುವುದರಿಂದ, ವಿನಾಯಕ ಶೆಣೈ ಎಂಬ ಪ್ರಚಾರಕರ ಪ್ರಭಾವದಿಂದ ಸೂರ್ಯನಾಥ ಕಾಮತರು ಆರ್.ಎಸ್.ಎಸ್.ನ ಸಂಪರ್ಕಕ್ಕೆ ಬಂದರು.

ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸಕ್ಕೆ ಬಂಟವಾಳಕ್ಕೆ ಬಂದ ಸೂರ್ಯನಾಥ ಕಾಮತ್, ಸಮೀಪದ ಮಣಿಹಳ್ಳದ ಅಕ್ಕನ ಮನೆಯಲ್ಲಿ ವಾಸವಿದ್ದಾಗ, ಭಾವನ ಹೋಟೆಲಿಗೆ ಬರುತ್ತಿದ್ದ ನಾವೂರು ನಾರಾಯಣಾಚಾರ್ಯ, ಧರ್ಮಪಾಲ ಶೆಟ್ಟರು, ಉಪಾಧ್ಯಾಯ ಪಾಂಡುರಂಗ ಬಾಳಿಗರ ಪ್ರೇರಣೆಯಿಂದ ಖಾದಿಧಾರಿ ಆದದ್ದು ಮಾತ್ರವಲ್ಲದೆ, ಆವರೆಗೆ ಪ್ರಕಟವಾಗಿದ್ದ ಶಿವರಾಮ ಕಾರಂತ, ಮಾಸ್ತಿ, ರಾಜರತ್ನಂ, ಶ್ರೀರಂಗ, ಕುವೆಂಪು ಮುಂತಾದ ಹಿರಿಯರ ಕಾದಂಬರಿಗಳು ಮತ್ತು ಇತರ ಕೃತಿಗಳನ್ನು ಓದಿ ಸಾಹಿತ್ಯದ ಬಗ್ಗೆ ಪ್ರೀತಿ ಬೆಳೆಸಿಕೊಂಡರು. ಈ ಪ್ರಭಾವ ಎಷ್ಟರ ಮಟ್ಟಿಗೆ ಉಳಿಯಿತೆಂದರೆ ಅವರು ಕೊನೆಯ ದಿನಗಳವರೆಗೂ ಖಾದಿಧಾರಿಯಾಗಿಯೇ ಉಳಿದರು ಮತ್ತು ಓದಿನ ಪ್ರಭಾವದಿಂದ ಸಾಹಿತಿಯಾಗುವ ಕನಸು ಕಂಡರು ಮತ್ತು ಕನಸನ್ನು ನನಸು ಮಾಡಿಕೊಂಡರು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಶಾಲೆಯ ಕೈಬರಹದ *'ಮಿತ್ರವಾಣಿ'* ಪತ್ರಿಕೆಯ ಸಂಪಾದಕರಾಗಿ ಇಬ್ಬರು ಹಿರಿಯ ಸಾಹಿತಿಗಳನ್ನು ಕುರಿತು ಪರಿಚಯ ಲೇಖನ ಬರೆದು ಮೆಚ್ಚುಗೆ ಪಡೆದಿದ್ದರು ಮತ್ತು ಭಾಷಣಕಾರರಾಗಿ ಮೊದಲ ಬಹುಮಾನ ಪಡೆದಿದ್ದರು. ಬಾಲ್ಯದ ಕನಸುಗಳನ್ನು ನನಸು ಮಾಡಿಕೊಂಡ ಸೂರ್ಯನಾಥ ಕಾಮತರು, ಬಾಲ್ಯದಲ್ಲಿ ಕಂಡ ಕೆಲವು ವ್ಯಕ್ತಿಗಳನ್ನು ಮಾದರಿಯಾಗಿಟ್ಟುಕೊಂಡು, ಅಂದುಕೊಂಡದ್ದನ್ನು ಸಾಧಿಸಿದರು.

1952ರ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಪ್ರಚಾರವನ್ನೂ ಮಾಡಿದ್ದ ವಿದ್ಯಾರ್ಥಿ ಕಾಮತರು, ಮುಂದೆ ಇಂಟರ್‌ಮೀಡಿಯೆಟ್ ಓದಲು ಮಂಗಳೂರಿಗೆ ಬಂದು ಸೋದರಮಾವನ ಮನೆಯಲ್ಲಿ ನೆಲೆ ನಿಂತು, ಸೇಂಟ್ ಎಲೋಸಿಯಸ್ ಕಾಲೇಜಿಗೆ ಸೇರಿದಾಗ, ಅಲ್ಲಿ ಸೋದರಮಾವನ ಮಕ್ಕಳ ಪ್ರಭಾವದಿಂದ ಆರ್.ಎಸ್.ಎಸ್.ಗೆ ಸೇರಿದರು. ಆ ದಿನಗಳಲ್ಲಿ *Now it can be told* ಎಂಬ ಪುಸ್ತಕವನ್ನು ಓದಿ. ದೇಶ ವಿಭಜನೆಯ ಸಂದರ್ಭ ಕಾಂಗ್ರೆಸ್ ದುರ್ಬಲ ನೀತಿ ಅನುಸರಿಸಿತು ಎಂದು ತಿಳಿಯಿತು. ಅಂದಿನಿಂದ ಕೊನೆಯ ದಿನಗಳವರೆಗೂ ಅವರು ಸಂಘಕ್ಕೆ ನಿಷ್ಠರಾಗಿ ಉಳಿದರು. ಆದರೆ ವೃತ್ತಿ ಜೀವನವನ್ನು ಸಂಘದಿಂದ ದೂರ ಇರಿಸಿದ್ದರು. ಅದೇ ಸೂರ್ಯನಾಥ ಕಾಮತರ ವಿಶೇಷ ಗುಣ.

ಮೆಟ್ರಿಕ್‌ನಲ್ಲಿ ಹೆಚ್ಚು ಅಂಕ ಗಳಿಸಿದ್ದು, ಮುಂದಿನ ವಿದ್ಯಾಭ್ಯಾಸಕ್ಕೆ ವಿಜ್ಞಾನವನ್ನು ಆರಿಸಿಕೊಳ್ಳುವ ಅವಕಾಶಗಳಿದ್ದರೂ, ಸೂರ್ಯನಾಥ ಕಾಮತ್ ತರ್ಕಶಾಸ್ತ್ರ ಮತ್ತು ಇತಿಹಾಸವನ್ನು ಆಯ್ಕೆ ಮಾಡಿಕೊಂಡು ಓದಿದರು.

ಧಾರವಾಡದ ಜನತಾ ಕಾಲೇಜಿನಲ್ಲಿ 1955ರಿಂದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಕನ್ನಡ ವಿಷಯಗಳನ್ನು ಆಯ್ದುಕೊಂಡು ಬಿ.ಎ. ಪದವಿ ಪಡೆದ ಸೂರ್ಯನಾಥ ಕಾಮತರಿಗೆ ಸಂಘದ ಸಂಪರ್ಕದಿಂದ ಭಾರತೀಯ ಇತಿಹಾಸದ ಬಗ್ಗೆ ಆಸಕ್ತಿ ಹೆಚ್ಚಿತು. ಕೇಳಿದ ಐತಿಹಾಸಿಕ ಕಥೆಗಳ ಪ್ರಭಾವದಿಂದ ಬರವಣಿಗೆಯತ್ತಲೂ ಆಕರ್ಷಿತರಾದ ಕಾಮತ್ ಬರೆದ ಎಂಟು ಐತಿಹಾಸಿಕ ಮಹಿಳೆಯರ ಕಥಾ ಸಂಗ್ರಹವನ್ನು ಸಮಾಜ ಪುಸ್ತಕಾಲಯ ಪ್ರಕಟಿಸಿತು. ಆ ಹೊತ್ತಿಗೆ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಭಾರತೀಯ ವಿದ್ಯಾಭವನ ಪ್ರಕಟಿಸಿದ್ದ ಆರ್.ಸಿ.ಮಜುಂದಾರರ ಸಂಪುಟಗಳನ್ನು ಕಾಮತ್ ಓದಿಕೊಂಡಿದ್ದರು. ಹೀಗೆ ಸೂರ್ಯನಾಥ ಕಾಮತ್ ಇತಿಹಾಸಕಾರನಾಗಿ ಬೆಳೆದರು. ಜೊತೆಜೊತೆಗೇ ಕಾಲೇಜಿನ ಸ್ಪರ್ಧೆಗಳಲ್ಲಿ ಬಹುಮಾನಗಳನ್ನೂ ಪಡೆದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇತಿಹಾಸಶಾಸ್ತ್ರದಲ್ಲಿ ಎಂಎ., ಅಧ್ಯಯನ ಮಾಡಿದ ಸೂರ್ಯನಾಥ ಕಾಮತರಿಗೆ ಬಿ.ಎ.ಸಾಲ್ತೊರೆ, ಜಿ.ಎಸ್.ದೀಕ್ಷಿತ್, ಗ.ಸ.ಹಾಲಪ್ಪ, ಬಿ.ವಿ.ಕಾಳೆ ಮುಂತಾದ ಖ್ಯಾತರು ಇತಿಹಾಸದ ಬೋಧನೆ ಮಾಡಿದರು. ಇದರಿಂದಾಗಿ ಸೂರ್ಯನಾಥ ಕಾಮತ್ ನಿಷ್ಠಾವಂತ ಇತಿಹಾಸಕಾರನಾಗಿ ರೂಪುಗೊಳ್ಳಲು ಸಾಧ್ಯವಾಯಿತು ಎನಿಸುತ್ತದೆ. ಆ ಕಾಲಕ್ಕೆ ಧಾರವಾಡದಲ್ಲಿ ಮೇಲೆ ಹೆಸರಿಸಿದ ಪ್ರಾಧ್ಯಾಪಕರೆಲ್ಲರೂ ವಿದ್ಯಾರ್ಥಿಗಳ ವಿಶ್ವಾಸ ಗಳಿಸಿದ್ದವರು. ಸಾಲ್ತೊರೆಯವರ ಬೋಧನೆಯ ಪ್ರಭಾವದಿಂದ ಸೂರ್ಯನಾಥ ಕಾಮತ್ ಕರ್ನಾಟಕದ ಇತಿಹಾಸ ಕುರಿತು ತೀವ್ರ ಆಸಕ್ತಿ ಬೆಳೆಸಿಕೊಂಡರು. ಸಾಲ್ತೊರೆಯವರ ಮಾತುಗಳಿಗೆ ತಲೆಯಾಡಿಸಿ ಸೂರ್ಯನಾಥ ಕಾಮತರು ಐ.ಎ.ಎಸ್.ಮಾಡಿದ್ದರೆ, ಕರ್ನಾಟಕಕ್ಕೆ ಒಬ್ಬ ಇತಿಹಾಸಕಾರ ದೊರೆಯುತ್ತಿರಲಿಲ್ಲ; ಬದಲಿಗೆ ಒಬ್ಬ ನಿಷ್ಠಾವಂತ ಅಧಿಕಾರಿ ದೊರೆಯುತ್ತಿದ್ದ.

ಎಂ.ಎ.ಪರೀಕ್ಷೆಗಳು ಮುಗಿಯುವ ಹೊತ್ತಿಗೆ ಸೂರ್ಯನಾಥ ಕಾಮತ್ ನಾಗಪುರದಲ್ಲಿ ಸಂಘದ ಶಿಕ್ಷಕ ವರ್ಗಕ್ಕೆ ತರಬೇತು ಪಡೆದು, ಸಂಘದ ಪೂರ್ಣ ಪ್ರಮಾಣದ ಪ್ರಚಾರಕರಾಗಿ ಹುಬ್ಬಳ್ಳಿ, ಗೋಕಾಕ್ ಮತ್ತು ಬೆಳಗಾವಿಯಲ್ಲಿ ಕಾರ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಅವರಿಗೆ ರಾಷ್ಟ್ರನಿಷ್ಠೆ ಮತ್ತು ಇತಿಹಾಸ ನಿಷ್ಠೆ ಮಹತ್ವದ ವಿಷಯಗಳಾದವು. ಆಗಲೇ ಅವರು ತಮ್ಮ ಅಧ್ಯಯನ ಮುಗಿದ ನಂತರ ಕರ್ನಾಟಕದಲ್ಲೇ ನೆಲೆ ನಿಂತು ಕರ್ನಾಟಕದ ಇತಿಹಾಸ ಕುರಿತ ಸಂಶೋಧನೆಯ ಗುರಿಯನ್ನು ಹೊಂದಿದ್ದರು. ಅವರಿಗೆ ಭಾರತವೆಂದರೆ, ಆಲೂರು ವೆಂಕಟರಾಯರ 'ಕರ್ನಾಟಕಾಂತರ್ಗತ ಭಾರತ'. ಕರ್ನಾಟಕದ ಒಳಗೆ ಭಾರತ ಇದೆ. ಕರ್ನಾಟಕ ಮತ್ತು ಭಾರತ ಎರಡೂ ಬೇರೆಯಲ್ಲ;. ಕುವೆಂಪು ಅವರು ಹೇಳುವ 'ಭಾರತ ಜನನಿಯ ತನುಜಾತೆ ಕರ್ನಾಟಕ'. ಆರ್.ಎಸ್.ಎಸ್.ನ ಸಂಪರ್ಕದಿಂದ ಸೂರ್ಯನಾಥ ಕಾಮತರಿಗೆ ಇತಿಹಾಸದ ಬೋಧನೆ ಮಹತ್ವದ್ದು ಮತ್ತು ಮುಖ್ಯವಾದದ್ದು ಎಂಬ ಕಲ್ಪನೆ ಬಂದಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಸಂಘದ ಸಂಪರ್ಕವು

ರಾಷ್ಟ್ರಪ್ರೇಮ, ಇತಿಹಾಸ ಬೋಧಕರ ಮಾರ್ಗದರ್ಶನವು ಇತಿಹಾಸ, ಅದರಲ್ಲೂ ಭಾರತ ಮತ್ತು ಕರ್ನಾಟಕ ರಾಜ್ಯಗಳ ಇತಿಹಾಸ ಕುರಿತು ಹೆಚ್ಚಿನ ಆಸಕ್ತಿ ಹುಟ್ಟಿಸಿದವು. ಆದ್ದರಿಂದ ಸೂರ್ಯನಾಥ ಕಾಮತ್ ಅವರನ್ನು ಸಂಘ ಮತ್ತು ಇತಿಹಾಸದಿಂದ ಬೇರ್ಪಡಿಸಿ ನೋಡುವುದು ಸಾಧ್ಯವಾಗದ ಮಾತು;

ಜಿ.ಎ.ಸಾಲೆತ್ತೊರೆಯವರಿಂದ ಇತಿಹಾಸದ ದೀಕ್ಷೆ ಪಡೆದ ಸೂರ್ಯನಾಥ ಕಾಮತ್ ಅವರ ಮಾರ್ಗದರ್ಶನದಲ್ಲೇ ಪಿಎಚ್.ಡಿ., ಪದವಿಯ ಅಧ್ಯಯನಕ್ಕೆ ನೋಂದಣಿ ಮಾಡಿಸಿಕೊಂಡರು; ಅದು ಸಾಧ್ಯವಾಗುವುದಿಲ್ಲ ಎಂದು ತಿಳಿದಾಗ, ಜಿ.ಎಸ್.ದೀಕ್ಷಿತ್ ಅವರ ಮಾರ್ಗದರ್ಶನದಲ್ಲಿ ಅಧ್ಯಯನವನ್ನು ಮುಂದುವರಿಸಿದರು.

ಬಾಲ್ಯದಿಂದಲೂ ಸೂರ್ಯನಾಥ ಕಾಮತರ ಬದುಕು ಕಷ್ಟದ ಹಾದಿಯಲ್ಲೇ ಸಾಗಿತ್ತು. ಏಳು ವರ್ಷದವರಿದ್ದಾಗ ತಂದೆಯನ್ನು ಕಳೆದುಕೊಂಡು, ಬಿ.ಎ.ತೇರ್ಗಡೆಯಾದ ವರ್ಷ ತಾಯಿಯನ್ನು ಕಳೆದುಕೊಂಡು, ಸೈದ್ಧಾಂತಿಕ ಕಾರಣಗಳಿಂದ ಹಿರಿಯ ಅಣ್ಣನಿಂದ ಹೆಚ್ಚಿನ ನೆರವು ದೊರೆಯದಿದ್ದಾಗ, ಅಕ್ಕ, ಸೋದರಮಾವ ಇತ್ಯಾದಿ ಬಂಧುಗಳ ಆಶ್ರಯದಲ್ಲಿದ್ದು, ಬಿ.ಎ., ಮುಗಿದ ನಂತರ ಸಂಘದ ಪ್ರಚಾರಕರಾಗಿ ಕೆಲಸ ಮಾಡಿದರೂ, ಎಂ.ಎ., ಮುಗಿಯುವ ವೇಳೆಗೆ ಉದ್ಯೋಗದ ಹುಡುಕಾಟದಲ್ಲಿದ್ದ ಸೂರ್ಯನಾಥ ಕಾಮತರಿಗೆ ಉದ್ಯೋಗಕ್ಕೆ ಮುಂಬೈನಲ್ಲಿ ಅವಕಾಶ ದೊರೆಯಬಹುದೆಂಬ ಆಸೆಯಿತ್ತು; ಜೊತೆಗೆ ಪಿಎಚ್‌ಡಿ., ವ್ಯಾಸಂಗವೂ ಮುಂದುವರಿಯಬೇಕಾಗಿತ್ತು. ನೌಕರಿಯ ಹುಡುಕಾಟ ಮತ್ತು ಪಿಎಚ್.ಡಿ.ಗೆ ಸಂಬಂಧಿಸಿದ ಅಧ್ಯಯನಕ್ಕೆ ಆಶ್ರಯ ನೀಡಿದ್ದು ಮುಂಬೈನ ಸಂಘದ ಕಛೇರಿ. ಅಂತಿಮವಾಗಿ ವಿಲಿಯಂ ಕೊಯ್ಲೋ ಅವರ ಮಾರ್ಗದರ್ಶನದಲ್ಲಿ, ಮೊದಲಿನ ವಿಷಯವನ್ನೇ (*ವಿಜಯನಗರ ಕಾಲದಲ್ಲಿ ತುಳುನಾಡು*) ಕುರಿತು ಪಿಎಚ್.ಡಿ., ಮಹಾಪ್ರಬಂಧವನ್ನು ಮುಂಬೈ ವಿಶ್ವವಿದ್ಯಾಲಯಕ್ಕೆ 1965ರ ಫೆಬ್ರವರಿಯಲ್ಲಿ ಸಲ್ಲಿಸಿದ್ದರು. ಮೇ ತಿಂಗಳಿನಲ್ಲಿ ಪಿಎಚ್.ಡಿ ಪದವಿ ದೊರೆಯಿತು. ಸೂರ್ಯನಾಥ ಕಾಮತ್ ಅವರು ಗುರಿಯನ್ನು ಸಾಧಿಸಿಯಾಗಿತ್ತು.

1962ರ ಜುಲೈ ತಿಂಗಳಿನಿಂದ 1965ರ ಮೇ ತಿಂಗಳಿನವರೆಗೆ ಸೂರ್ಯನಾಥ ಕಾಮತರು ಮುಂಬಯಿಯ *ಫ್ರೀ ಪ್ರೆಸ್ ಜರ್ನಲ್* ಪತ್ರಿಕೆಯಲ್ಲಿ ಉಪಸಂಪಾದಕರಾಗಿ ಕಾರ್ಯ ನಿರ್ವಹಿಸಿ, ಪತ್ರಿಕೆಯ ಕಾರ್ಯನಿರ್ವಹಣೆಯ ಅನುಭವ ಮತು ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಸಂಪಾದಿಸಿದರು. ಆದರೆ ಅವರಲ್ಲಿದ್ದ ಒಬ್ಬ ಕನ್ನಡ ಮತ್ತು ಕರ್ನಾಟಕದ ಇತಿಹಾಸಕಾರ ಜಾಗೃತರಾಗಿಯೇ ಇದ್ದರು. ಮುಂಬೈ ಅಥವಾ ಧಾರವಾಡದಲ್ಲಿ ಕೆಲಸಕ್ಕೆ ಪ್ರಯತ್ನ ನಡೆಸಬಹುದಿತ್ತಾದರೂ, ಕಾಮತರು ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಳ್ಳಲು ನಿರ್ಧರಿಸಿದ್ದರು. ಆ ಹೊತ್ತಿಗೆ ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ ಆರಂಭಿಸಿದ್ದ ಉತ್ಥಾನ ತಿಂಗಳ ಪತ್ರಿಕೆಯ ಸಂಪಾದಕನ ಜವಾಬ್ದಾರಿಯನ್ನು ಒಪ್ಪಿಕೊಂಡರು. ಆರಂಭದ ಆರು ಸಂಚಿಕೆಗಳನ್ನು ಹೊರತಂದ ಸೂರ್ಯನಾಥ ಕಾಮತ್, ಅಲ್ಲಿಂದ ಬಿಡುಗಡೆ ಪಡೆದರು. ನಂತರ ಅವರು *ಪ್ರಜಾವಾಣಿ* ಪತ್ರಿಕೆಯಲ್ಲಿ ಉಪಸಂಪಾದಕನಾಗಿ 6 ತಿಂಗಳು ಕೆಲಸ ಮಾಡಿದರು. ಪತ್ರಿಕೆಗಳಲ್ಲಿ ಕೆಲಸ ಮಾಡುವಾಗ ಪುಟಗಳನ್ನು

ತುಂಬುವ ಸಲುವಾಗಿಯಾದರೂ ಬರೆಯಲೇ ಬೇಕಾದ ಅನಿವಾರ್ಯತೆಗಳು ಎದುರಾಗುತ್ತಿದ್ದವು. ಆದ್ದರಿಂದ ಕಾಮತರು ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಬರೆದರು. ಇತಿಹಾಸದಲ್ಲಿನ ಅವರ ಆಸಕ್ತಿ ಹೆಚ್ಚುತ್ತಲೇ ಹೋಯಿತು. ಬರೆಯುವುದರ ಜೊತೆಗೆ ಪಾಠ ಮಾಡಬೇಕು ಎಂಬ ಉತ್ಕಟ ಆಸೆ ಕಾಮತರದ್ದಾಗಿತ್ತು. ಅವರ ಆಸೆಗೆ ತಕ್ಕಂತೆ ಕಾಮತರಿಗೆ ಬೆಂಗಳೂರಿನ ನರಸಿಂಹರಾಜಾ ಕಾಲೋನಿಯ ಆಚಾರ್ಯ ಪಾಠಶಾಲೆಯ ಸಂಜೆ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕ ವೃತ್ತಿ ದೊರೆಯಿತು. 1968ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು, ಮುಂದಿನ 13 ವರ್ಷಗಳ ಕಾಲ ಒಳ್ಳೆಯ ಉಪನ್ಯಾಸಕರೆಂಬ ಹೆಸರು ಪಡೆದರು.

ಇತಿಹಾಸಕಾರನಾಗಿ ಸೂರ್ಯನಾಥ ಕಾಮತ್

ವಿದ್ಯಾಭ್ಯಾಸದ ಆರಂಭ ದಿನಗಳಿಂದಲೂ ಸೂರ್ಯನಾಥ ಕಾಮತ್ ಅವರ ಆಸಕ್ತಿಯು ಇತಿಹಾಸ ಮತ್ತು ಸಾಹಿತ್ಯವನ್ನು ಕುರಿತಾಗಿಯೇ ಇತ್ತು. ಅವರಿಗೆ ಬೋಧನೆ ಮತ್ತು ಬರವಣಿಗೆ ಎರಡರಲ್ಲೂ ಸಮಾನ ಆಸಕ್ತಿ ಇದ್ದುದರ ಜೊತೆಗೆ ಕರ್ನಾಟಕದ ಇತಿಹಾಸವನ್ನು ಕುರಿತು ತಿಳಿಯುವ ಮತ್ತು ತಿಳಿಸುವ ಉತ್ಕಟ ಆಸೆ ಇತ್ತು. ಅವರ ಅಸಕ್ತಿಗೆ ಸರಿಹೊಂದುವ ಇತಿಹಾಸ ಬೋಧನೆಯ ಕೆಲಸ ದೊರೆತಿತ್ತು. ಪತ್ರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾಗಲೂ, ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ., ತರಗತಿಗಳಿಗೆ ನೋಟ್ಸ್ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಲೇಖನ ಮತ್ತು ಕಥೆಗಳನ್ನು ಬರೆಯುತ್ತಿದ್ದರು. ಹೀಗೆ ಇತಿಹಾಸದೊಂದಿಗಿನ ಸಂಪರ್ಕವನ್ನು ಅವರು ಎಂದಿಗೂ ಕಡಿದುಕೊಂಡಿರಲಿಲ್ಲ. ಜೊತೆಗೆ ಇತಿಹಾಸಕ್ಕೆ ಸಂಬಂಧಿಸಿದ ಹಲವು ಮಹತ್ವದ ಕೃತಿಗಳ ವಿಮರ್ಶೆ ಮಾಡುವ ಅವಕಾಶಗಳನ್ನೂ ಹಲವು ಪತ್ರಿಕೆಗಳು ಒದಗಿಸಿದವು. ಇದರಿಂದ ಸೂರ್ಯನಾಥ ಕಾಮತರಿಗೆ ಇತಿಹಾಸ ಕುರಿತು ಸ್ಪಷ್ಟವಾದ ಮತ್ತು ಯಾವುದೇ ಪಕ್ಷಪಾತವಿಲ್ಲದ ವಿಮರ್ಶಾತ್ಮಕ ಪ್ರಜ್ಞೆ ಬೆಳೆಯಿತು. ಇತಿಹಾಸದ ವ್ಯಾಖ್ಯೆಯನ್ನು ಹೊರತುಪಡಿಸಿದ ಭಾವನಾತ್ಮಕ ವಿಮರ್ಶೆಗೆ ಕಾಮತರು ಎಂದಿಗೂ ಅವಕಾಶ ನೀಡಲಿಲ್ಲ. ಇದು ಅವರ ಇತಿಹಾಸನಿಷ್ಠೆಗೆ ಉದಾಹರಣೆ. ಎಂ.ವಿ.ಕೃಷ್ಣರಾಯರ *ಕರ್ನಾಟಕ ಇತಿಹಾಸ ದರ್ಶನ*, ಪಿ.ಬಿ.ದೇಸಾಯಿ, ರಿತ್ತಿ, ಗೋಪಾಲ್ ಅವರ *ಎ ಹಿಸ್ಟರಿ ಆಫ್ ಕರ್ನಾಟಕ*, ರಂ.ರಾ.ದಿವಾಕರ್ ಸಂಪಾದಕತ್ವದ *ಕರ್ನಾಟಕ ಥ್ರೂ ದಿ ಏಜಸ್* ಇತ್ಯಾದಿ ಕೃತಿಗಳನ್ನು ವಿಮರ್ಶೆ ಮಾಡುವಾಗ ಯಾವುದೇ ಕೃತಿಯಲ್ಲಿ ಕರ್ನಾಟಕದ ಸಮಗ್ರ ಇತಿಹಾಸದ ಸಮ್ಯಕ್‌ದೃಷ್ಟಿ ಇಲ್ಲದಿರುವುದನ್ನು ಗಮನಿಸಿದ್ದರು. ಕೆಲವು ಕೃತಿಗಳಲ್ಲಿ ವಿಜಯನಗರದ ಪತನಾನಂತರದ, ಕೆಲವು ಕೃತಿಗಳಲ್ಲಿ ಏಕೀಕರಣಾನಂತರದ ಮತ್ತು ಕೆಲವು ಕೃತಿಗಳಲ್ಲಿ ಆದಿಲ್‌ಶಾಹಿ, ಬಹಮನ್‌ಶಾಹಿಗಳ ಕಾಲದ ಇತಿಹಾಸವನ್ನು ವಿವರವಾಗಿ ಚರ್ಚಿಸದೇ ಇರುವುದನ್ನು, ಕರ್ನಾಟಕ ಇತಿಹಾಸದ ಸಮಗ್ರತೆಯ ದೃಷ್ಟಿಯಿಂದ ಕೊರತೆ ಎಂದೇ ತಿಳಿದಿದ್ದ ಸೂರ್ಯನಾಥ ಕಾಮತರು, ಆ ಕೊರತೆಯನ್ನು ತುಂಬುವ ಕೆಲಸ ಆಗಲೇಬೇಕು ಎಂದು ನಿರ್ಧರಿಸಿದರು. ಅದರ ಫಲವೇ *ಕರ್ನಾಟಕದ ಸಂಕ್ಷಿಪ್ತ ಇತಿಹಾಸ* ಕೃತಿ. ಹೆಸರು ಸಂಕ್ಷಿಪ್ತ ಇತಿಹಾಸ ಎಂದಿದ್ದರೂ, ಅದು ಕರ್ನಾಟಕದ ಸಮಗ್ರ

ಇತಿಹಾಸವನ್ನು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಸಂಗ್ರಹಿಸಿ ಸಿದ್ಧಪಡಿಸಲಾಗಿದ್ದ ಕೃತಿ. ಅದು ಪಠ್ಯಪುಸ್ತಕದ ಮಾದರಿಯಲ್ಲಿರದೆ, ಆಕರ ಗ್ರಂಥದ ಮಾದರಿಯಲ್ಲಿದೆ. ತಕ್ಷಣದ ಮಾಹಿತಿಗೆ ಆ ಕೃತಿಯನ್ನು ಈಗಲೂ ಅನೇಕರು ಬಳಸುತ್ತಿದ್ದಾರೆ. ಆ ಕೃತಿಗೆ 1975ರಲ್ಲಿ ಕರ್ನಾಟಕ ಸಾಹಿತ್ಯ ಅಕಾದೆಮಿಯ ಮಾನವಿಕ ವಿಭಾಗದ ಪುಸ್ತಕ ಬಹುಮಾನ ಲಭಿಸಿದೆ. *ಕರ್ನಾಟಕದ ಸಂಕ್ಷಿಪ್ತ ಇತಿಹಾಸ* ಕೃತಿಯು ಪುನರ್ಮುದ್ರಣಗಳ ಸಂದರ್ಭದಲ್ಲಿ, ಆವರೆಗಿನ ಸಂಶೋಧನೆಗಳಿಂದ ಪರಿಷ್ಕರಣೆಗೊಂಡಿದೆ. ಅದನ್ನು *ಎ ಕನ್ಸೈಸ್ ಹಿಸ್ಟರಿ ಆಫ್ ಕರ್ನಾಟಕ* ಎನ್ನುವ ಹೆಸರಿನಲ್ಲಿ ಸೂರ್ಯನಾಥ ಕಾಮತರೇ ಅನುವಾದಿಸಿ, ಪ್ರಕಟಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸ ಬೋಧನೆಯ ಸಂದರ್ಭದಲ್ಲಿ, ಬದಲಾಗುತ್ತಿದ್ದ ಪಠ್ಯಗಳಿಗೆ ಅನುಗುಣವಾಗಿ, ಅಭ್ಯಾಸ ಮಾಡುತ್ತಿದ್ದ ಕಾಮತರೇ ದಾಖಲಿಸಿರುವಂತೆ 13 ವರ್ಷಗಳ ಬೋಧನಾವಧಿಯಲ್ಲಿ ಅವರು ಬೋಧಿಸಿದ್ದು 22 ವಿಷಯಗಳನ್ನು.

ಅಧ್ಯಯನ ಮತ್ತು ಅಧ್ಯಾಪನಗಳಲ್ಲೇ ಹೆಚ್ಚಾಗಿ ತೊಡಗಿಕೊಂಡಿದ್ದ ಸೂರ್ಯನಾಥ ಕಾಮತರಿಗೆ ಸಂಶೋಧನೆಯತ್ತ ಗಮನ ಹರಿಯುವ ಹೊತ್ತಿಗೆ ಅವರಿಗೆ ಕೊಲ್ಹಾಪುರ ವಿಶ್ವವಿದ್ಯಾಲಯದಿಂದ ಅಲ್ಲಿಯ ಇತಿಹಾಸ ವಿಭಾಗದ ರೀಡರ್ ಮತ್ತು ವಿಭಾಗದ ಮುಖ್ಯಸ್ಥನ ಹುದ್ದೆಗೆ ಆಹ್ವಾನ ಬಂದಿತ್ತು. ಯಾವುದೇ ಕಾರಣದಿಂದ ಕರ್ನಾಟಕದಿಂದ ಹೊರಗೆ ಹೋಗಕೂಡದು ಎಂದು ಮೊದಲೇ ನಿರ್ಧರಿಸಿದ್ದ ಸೂರ್ಯನಾಥ ಕಾಮತರು ಬೆಂಗಳೂರಿನಲ್ಲೇ ಉಳಿದರು. ಸೂರ್ಯನಾಥ ಕಾಮತರನ್ನು ಸೃಜನಾತ್ಮಕ ಬರವಣಿಗೆಗಳಿಂದ ಬಿಡುಗಡೆಗೊಳಿಸಿ, ಸಂಶೋಧನೆಯತ್ತ ತಿರುಗಿಸಿದವರು ಅವರ ಗುರು ಜಿ.ಎಸ್.ದೀಕ್ಷಿತ್.

ಸಂಶೋಧನೆಯತ್ತ ತುಡಿತ ಹೆಚ್ಚಾದಾಗ, ಬಾಲ್ಯದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವನ್ನು ಕಣ್ಣಾರೆ ಕಂಡಿದ್ದ, ಕಾಮತರಿಗೆ ಅದನ್ನು ಕುರಿತೇ ಸಂಶೋಧನೆ ಮಾಡುವ ಹಂಬಲ ಹೆಚ್ಚಿತು. ಅದು ಪ್ರಾಚೀನ ಇತಿಹಾಸವಲ್ಲ; ಅತ್ಯಾಧುನಿಕ ಇತಿಹಾಸವಾಗಿತ್ತು. ಸ್ವಾತಂತ್ರ್ಯ ಬಂದು ಇನ್ನೂ ಮೂವತ್ತು ವರ್ಷಗಳೂ ಆಗಿರಲಿಲ್ಲ. ಕೇಂದ್ರ ಸರ್ಕಾರದ ಆಶ್ರಯದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆಯೇ ಹಲವು ಯೋಜನೆಗಳು ಜಾರಿಯಲ್ಲಿದ್ದವು. ಕೆಲಸ ನಡೆದಿತ್ತು. ಕಾಮತರು ಯಾವುದೇ ಸಂಸ್ಥೆಯ ನೆರವಿಗೆ ಕಾಯದೆ, ಮೌಖಿಕ ಆಕರಗಳನ್ನೇ ಪ್ರದಾನ ಮಾಡಿಕೊಂಡು ಕೃತಿ ರಚನೆಗೆ ತೊಡಗಿದರು. ಒಂದು ವಿಶ್ವವಿದ್ಯಾಲಯ ಅಥವಾ ಯಾವುದೇ ದೊಡ್ಡ ಸಂಶೋಧನ ಸಂಸ್ಥೆ ಮಾಡಬಹುದಾದ ಕೆಲಸಕ್ಕೆ ಸೂರ್ಯನಾಥ ಕಾಮತ್ ಕೈಹಾಕಿದ್ದಾಗಿತ್ತು. ಅದೂ ಆಗ ಉಳಿದಿದ್ದ ಸ್ವಾತಂತ್ರ್ಯಯೋಧರ ಪತ್ರಗಳು, ಹೇಳಿಕೆಗಳು ಮತ್ತು ಸಂದರ್ಶನಗಳನ್ನು ಆಧರಿಸಿದ ಕೃತಿ. ಮುಂದಿನ ಸಂಶೋಧಕರಿಗೆ ಆಕರವಾಗಿ ಉಳಿಯಬೇಕಾಗಿದ್ದ ಕೃತಿ ರಚನೆಯು ಸುಲಭದ ಮಾತಾಗಿರಲಿಲ್ಲ. ವಿಶ್ವವಿದ್ಯಾಲಯದ ಯಾವುದಾದರೂ ಸಂಶೋಧನ ಯೋಜನೆಯಡಿ ಆ ಕೆಲಸವನ್ನು ಮಾಡುವ ಅವಕಾಶಗಳಿದ್ದವು. ಆದರೆ ಅಧಿಕಾರಶಾಹಿಯ ಬೆನ್ನುಹತ್ತುವ ಕೆಲಸ ಕಾಮತರಿಗೆ ಎಂದಿಗೂ ಪ್ರಿಯವಾದುದಾಗಿರಲಿಲ್ಲ. ಆದ್ದರಿಂದ ಉಳಿದಿದ್ದ ಸ್ವಾತಂತ್ರ್ಯಯೋಧರ ವಿಳಾಸವನ್ನು ಸಂಗ್ರಹಿಸಿ, ಎಲ್ಲರಿಗೂ ಸಿದ್ಧಪಡಿಸಿದ್ದ ನಾಲ್ಕು

ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಕಾಮತ್ ಮನವಿ ಮಾಡಿಕೊಂಡರು. ಅದಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ದೊರೆಯಲಿಲ್ಲ. ಕೇವಲ ಕೆಲವು ಸಾಮಾನ್ಯ ಹೋರಾಟಗಾರರು ಉತ್ತರ ಬರೆದರು. ಅವಿರತ ಶ್ರಮದಿಂದ ಅವರಿಗೆ ನಿಧಾನವಾಗಿಯಾದರೂ ಉತ್ತರಗಳು ದೊರೆತವು. ಉತ್ತರಿಸಿದವರಲ್ಲಿ ಹೆಚ್ಚಿನವರು ಕರ್ನಾಟಕದ ಉತ್ತರ ಜಿಲ್ಲೆಗಳಿಗೆ ಸೇರಿದ್ದ ಹೋರಾಟಗಾರರು. ಅದರಲ್ಲೂ ಮುಂಬಯಿ ಆಧಿಪತ್ಯಕ್ಕೆ ಸೇರಿದ್ದ ಪ್ರದೇಶಗಳಿಂದ ಹೆಚ್ಚಿನ ಉಪಯುಕ್ತ ಉತ್ತರಗಳು ದೊರೆತಿದ್ದವು. ಅದನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವೇ ಪ್ರಕಟಿಸಲು ಮೊದಲಿಗೆ ಮುಂದೆ ಬಂದಿತ್ತಾದರೂ, ನಂತರ ಕೆಲವು ಕಾರಣಗಳಿಂದ ವಿಶ್ವವಿದ್ಯಾಲಯ ಅದನ್ನು ಪ್ರಕಟಿಸಲು ಸಾಧ್ಯವಿಲ್ಲ ಎಂದು ತಿಳಿಯಿತು. ಆಗ ಸೂರ್ಯನಾಥ ಕಾಮತರು ಪ್ರಕಟಣಪೂರ್ವ ಮನವಿ ಮಾಡಿಕೊಂಡು ನೆರವನ್ನು ನಿರೀಕ್ಷಿಸಿದರು. ಅದೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯಲಿಲ್ಲ. ಆಗ ಕಾಮತರ ನೆರವಿಗೆ ಬಂದವರು ಮೈಸೂರಿನ ಗೀತಾ ಬುಕ್ ಹೌಸ್‌ನ ಪ್ರಕಾಶಕರು. ಮುಂಗಡವಾಗಿ ಒಂದಷ್ಟು ಪ್ರತಿಗಳ ಮಾರಾಟದ ಹಣ ಸಂಗ್ರಹಿಸಿಕೊಡುವುದಾಗಿ ಕಾಮತರು ತಿಳಿಸಿದ್ದರು. ಆ ಮೊತ್ತವೂ ನಿರೀಕ್ಷಿತ ಪ್ರಮಾಣವನ್ನು ತಲುಪಲಿಲ್ಲ. ಆದರೆ ಕಾಮತ್ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಲಿಲ್ಲ. *ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳ* ಮೊದಲ ಸಂಪುಟವು 1974ರ ಮೇನಲ್ಲಿ ಪ್ರಕಟವಾಯಿತು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಆರ್.ಆರ್. ದಿವಾಕರ್, ನರಸಿಂಹ ದಾಬಡೆ, ಶ್ರೀನಿವಾಸರಾವ್ ಮಂಗಳವೇಢೆ ಮುಂತಾದ ಹೋರಾಟಗಾರರು ಬಂದಿದ್ದರು. ಇದರಿಂದ ಸೂರ್ಯನಾಥ ಕಾಮತ್ ಆವರೆಗೆ ಆಗಿದ್ದ ನೋವು ಮತ್ತು ಕಷ್ಟಗಳನ್ನೆಲ್ಲ ಮರೆತರು. ಮೊದಲ ಸಂಪುಟದಲ್ಲಿ ಮುಂಬಯಿ ಕರ್ನಾಟಕ ಪ್ರದೇಶದ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ದಾಖಲಾದರೆ, ಎರಡನೆಯ ಸಂಪುಟದಲ್ಲಿ ಮೈಸೂರು ಸಂಸ್ಥಾನ ಮತ್ತು ಉಳಿದ ಭಾಗಗಳ ಹೋರಾಟಗಾರರ ನೆನಪುಗಳು ದಾಖಲಾದವು. ಮೂರನೆಯ ಸಂಪುಟವು ಮೊದಲಿನ ಎರಡೂ ಸಂಪುಟಗಳಲ್ಲಿ ಸೇರದೆ ಉಳಿದಿದ್ದ ಹೋರಾಟಗಾರರ ನೆನಪುಗಳನ್ನು ದಾಖಲಿಸಿದವು. ಇವು ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಕುರಿತು ಸಂಶೋಧನೆ ಮಾಡುವವರಿಗೆ ಬಹುಮುಖ್ಯವಾದ ಆಕರ ಗ್ರಂಥವಾಗಿ ದೀರ್ಘಕಾಲ ಉಳಿಯುತ್ತವೆ.

ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳ ಮೊದಲ ಸಂಪುಟದ ಕೆಲಸ ನಡೆದಿದ್ದಾಗ ಸೂರ್ಯನಾಥ ಕಾಮತರಿಗೆ ಸ್ಲಿಪ್ ಡಿಸ್ಕ್ ಆಯಿತು. ಆಗ ಮಲಗಿಯೇ ಅಚ್ಚಿನ ಪುಟಗಳನ್ನು ತಿದ್ದಿದರು ಎಂದರೆ ಅವರಿಗೆ ಕೆಲಸದ ಬಗ್ಗೆ ಇದ್ದ ಶ್ರದ್ಧೆಯ ಅರಿವಾಗುತ್ತದೆ. ಸ್ಮೃತಿ ಸಂಪುಟಗಳಲ್ಲಿ ಸಂಶೋಧನೆಯ ಭಾರವಿಲ್ಲ. ಹೋರಾಟಗಾರರು ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಸಂಶೋಧನೆ ಮಾಡುವವರಿಗೆ, ಕಾಮತರು ಒಟ್ಟಾರೆಯಾಗಿ ಕೂಡಿಸಿರುವ ಮೌಖಿಕ ಸಾಮಗ್ರಿಗಳು ನಿರಂತರ ಆಕರಗಳನ್ನು ಒದಗಿಸಬಲ್ಲವು. 3214 ಪುಟಗಳಲ್ಲಿ ಸಂಗ್ರಹವಾಗಿರುವ 814 ಸ್ವಾತಂತ್ರ್ಯಯೋಧರ ನೆನಪುಗಳಲ್ಲಿ ಎಲ್ಲವೂ ನಿಜ ಅಲ್ಲವೆಂದು ಕೆಲವರು ಆಕ್ಷೇಪ ಮಾಡಿದ್ದಾರೆ. ಬಹುತೇಕ ಎಲ್ಲರ ವಿಚಾರಗಳನ್ನೂ ಸರ್ಕಾರಿ ಕಡತಗಳಿಂದ ಪರಿಶೀಲಿಸಿ ಪ್ರಕಟಿಸಿರುವುದಾಗಿ ಕಾಮತ್ ಸಮರ್ಥಿಸಿಕೊಂಡಿದ್ದಾರೆ.

ಅವರು *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳ* ಮೂಲಕ ಸಂಗ್ರಹಿಸಿದ್ದ ಆಕರಗಳೇ ಮುಂದೆ ಅವರು ಸಿದ್ಧಪಡಿಸಿದ *ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ* ಕೃತಿಗೆ ಪ್ರೇರಣೆಯಾದವು. ಕೃತಿ ರಚನೆಗೆ ಆರ್.ಆರ್.ದಿವಾಕರ್ ಮತ್ತು ರಾಮಕೃಷ್ಣ ಹೆಗಡೆ ಅವರು ಪ್ರೋತ್ಸಾಹ ನೀಡಿದ್ದರು. ಅದೇ ಕೃತಿಯು ಕಾಮತರಿಂದಲೇ *ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ* ಎಂಬ ಹೆಸರಿನಿಂದ ಅನುವಾದಿತವಾಗಿ ಪ್ರಕಟಗೊಂಡಿದೆ. *ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇನ್ ಕರ್ನಾಟಕ* ಕೃತಿಗೆ ಮುನ್ನುಡಿ ಬರೆದಿರುವ ಸ್ವಾತಂತ್ರ್ಯ ಹೋರಾಟಗಾರ ಆರ್.ಆರ್.ದಿವಾಕರ್ ಅವರು 'ಪ್ರತಿಯೊಂದು ರಾಜ್ಯದಲ್ಲಿಯೂ ಸೂರ್ಯನಾಥ ಕಾಮತ್ ಅವರಂತಹ ಒಬ್ಬ ಇತಿಹಾಸಕಾರ ಇರಬೇಕು' ಎಂಬ ಅಭಿಪ್ರಾಯವನ್ನು ದಾಖಲಿಸಿದ್ದಾರೆ. ಅದೇ ವರ್ಷ *ಕರ್ನಾಟಕ ಏಕೀಕರಣದ ಸಿದ್ಧಿ ಮತ್ತು ಸಾಧನೆ* ಕೃತಿಯೂ ಬಿಡುಗಡೆ ಆಯಿತು. ಇದರಿಂದ ಒಂದೇ ಸಮಯದಲ್ಲಿ ಹಲವು ಕೃತಿಗಳ ರಚನೆಗೆ ತೊಡಗುತ್ತಿದ್ದ ಸೂರ್ಯನಾಥ ಕಾಮತರ ಬಳಿ ಇದ್ದ ಆಕರ ಸಾಮಗ್ರಿಗಳು ಮತ್ತು ಶ್ರಮದ ಬಗ್ಗೆ ಅಚ್ಚರಿ ಮೂಡುತ್ತದೆ ಮತ್ತು ಬರವಣಿಗೆಯಲ್ಲಿನ ನಿಷ್ಠೆ ಮೆಚ್ಚುಗೆಗೆ ಕಾರಣವಾಗುತ್ತದೆ.

ಭಾರತದಲ್ಲಿನ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸದಂತೆ ಗಮನಿಸಲೇಬೇಕಾಗಿರುವ ಸೂರ್ಯನಾಥ ಕಾಮತರ ಮತ್ತೆರಡು ಕೃತಿಗಳೆಂದರೆ *ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು* ಮತ್ತು *ಸ್ವಾತಂತ್ರ್ಯ ಸಂಗ್ರಾಮದ ಗೇಯ ಗೀತೆಗಳು.* ಈ ನಿಟ್ಟಿನಲ್ಲಿ ಕಾಮತರು ಪ್ರಾಮಾಣಿಕರು. ಒಪ್ಪಿಕೊಂಡ ಯಾವುದೇ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ನನಗೆ ತಿಳಿದಂತೆ ಅವರಲ್ಲಿ ಅಪ್ರಾಮಾಣಿಕತೆ ಮತ್ತು ಭ್ರಷ್ಟತೆ ಇರಲಿಲ್ಲ. ನೇರನುಡಿಯ ಕಾರಣದಿಂದಲೇ ಕಾಮತರು ಹಲವರ ಅಸಮಾಧಾನಕ್ಕೂ ಕಾರಣರಾಗಿದ್ದರು.

ಕರ್ನಾಟಕ ಜಾಗೃತಿ, ವಿಜಯನಗರ ಸಾಮ್ರಾಜ್ಯ, ಛತ್ರಪತಿ ಶಿವಾಜಿ, ಗೊಮ್ಮಟ, ಕರ್ನಾಟಕ – ಎ ಹ್ಯಾಂಡ್ ಬುಕ್, ಇತ್ಯಾದಿ ಐತಿಹಾಸಿಕ ಕಿರುಕೃತಿಗಳ ಮೂಲಕ ಸಾಮಾನ್ಯರಿಗೆ ಇತಿಹಾಸವನ್ನು ಪರಿಚಯಿಸುವ ಸಾರ್ಥಕ ಕೆಲಸವನ್ನೂ ಕಾಮತ್ ಮಾಡಿದರು. ಇತಿಹಾಸವನ್ನು ಮಕ್ಕಳಿಗೆ ತಿಳಿಸುವ ನಿಟ್ಟಿನಲ್ಲೂ ಸೂರ್ಯನಾಥ ಕಾಮತ್ ಮುಂದಿದ್ದರು. *ಅಬ್ಬಕ್ಕ, ಕೆಳದಿಯ ಚೆನ್ನಮ್ಮಾಜಿ, ಕರ್ನಾಟಕ ಗಾಂಧಿ ತಿಮ್ಮಪ್ಪನಾಯಕ, ಕರ್ನಾಟಕ ನಾಡು–ನುಡಿ–ಸಂಸ್ಕೃತಿ, ಮೈಲಾರ ಮಹದೇವ* ಇತ್ಯಾದಿ ಕೃತಿಗಳನ್ನು ಮಕ್ಕಳಿಗಾಗಿಯೇ ಬರೆದರು.

ಕಾಮತರ ಚೊಚ್ಚಲ ಕೃತಿ ಎನಿಸಿಕೊಂಡ *ಬೆಳಗಿದ ತಾರೆಗಳು* ಒಂದು ಐತಿಹಾಸಿಕ ಕಥಾ ಸಂಕಲನ. *ವಿಜಯನಗರ ಕಥೆಗಳು, ಕರ್ನಾಟಕ ಇತಿಹಾಸ ಕಥಾಮಂಜರಿ, ಕರ್ನಾಟಕದ ವೀರರಾಣಿಯರು* ಮುಂತಾದ ಕೃತಿಗಳು ಜನಪ್ರಿಯವಾಗುವ ಮಾದರಿಯಲ್ಲಿ ಇತಿಹಾಸವನ್ನು ಕುರಿತ ಸೃಜನಾತ್ಮಕ ಕೃತಿಗಳಾಗಿವೆ. ಅವರ ಐತಿಹಾಸಿಕ ಕಾದಂಬರಿ *ಕೃಷ್ಣದೇವರಾಯ* 1968ರಲ್ಲೇ ಮೊದಲಿಗೆ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಮತ್ತು ನಂತರ ಪುಸ್ತಕ ರೂಪದಲ್ಲಿ ಪ್ರಕಟವಾಗಿ ಜನಪ್ರಿಯವಾಯಿತು. ಆವರೆಗೆ ಕೃಷ್ಣದೇವರಾಯನ ಬಗ್ಗೆ ತಿಳಿದಿದ್ದ ಐತಿಹಾಸಿಕ ಸಂಗತಿಗಳನ್ನು ಆಧರಿಸಿದ್ದ ಕಾದಂಬರಿಯಲ್ಲಿ, ನಂತರದ

ಸಂಶೋಧನೆಗಳಿಂದ ಹಲವು ಅತಾರ್ಕಿಕ ವಿಷಯಗಳಿವೆಯೆಂದು ತಿಳಿದ ಕಾಮತರು ಅದರ ಮರುಮುದ್ರಣಕ್ಕೆ ಅವಕಾಶ ನೀಡಲಿಲ್ಲ ಎನ್ನುವುದು ಅವರ ಐತಿಹಾಸಿಕ ನಿಷ್ಠೆಗೆ ಉದಾಹರಣೆಯಾಗುತ್ತದೆ.

ಸಂಘ, ಸಂಸ್ಥೆಗಳೊಡನೆ ಸಂಪರ್ಕ

ವೃತ್ತಿಜೀವನದ ಜೊತೆಗೆ ಎಂದೂ ತಮ್ಮ ಆರ್.ಎಸ್.ಎಸ್. ಸಂಬಂಧವನ್ನು ಬೆರೆಸದ ಸೂರ್ಯನಾಥ ಕಾಮತ್, 1974ರಲ್ಲಿ ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಹಲವು ಹಿರಿಯರ ಜೊತೆಗೆ ಸೇರಿ 'ಸಮೃದ್ಧ ಕರ್ನಾಟಕ ಸಂಯೋಜನಾ ಸಮಿತಿ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಕರ್ನಾಟಕದಲ್ಲಿರುವ ಮಾನವ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಕರ್ನಾಟಕವನ್ನು ಸಮೃದ್ಧಿಯತ್ತ ಕೊಂಡೊಯ್ಯುವ ಗುರಿ ಆ ಸಂಸ್ಥೆಗಿತ್ತು. ಅದು ಮೂರು ತ್ರೈಮಾಸಿಕ ನಿಯತ ಕಾಲಿಕೆಗಳನ್ನೂ ಪ್ರಕಟಿಸಿತು. ಆದರೆ ಬಹುತೇಕ ಹಿರಿಯರೇ ಹೆಚ್ಚಾಗಿದ್ದ ಆ ಸಂಸ್ಥೆ ಹೆಚ್ಚು ಅವಧಿಗೆ ಉಳಿಯಲಿಲ್ಲ. ಬಹುತೇಕ ಕಾಮತರ ಸಂಪರ್ಕವಿದ್ದು, ಬಹಳ ಬೇಗ ಸ್ಥಗಿತಗೊಂಡ ಸಂಸ್ಥೆ ಇದೊಂದೇ ಎನಿಸುತ್ತದೆ.

1909ರಲ್ಲಿ ಸ್ಥಾಪಿತವಾಗಿ, ಕರ್ನಾಟಕದಲ್ಲಿ ಇತಿಹಾಸ, ತತ್ತ್ವಶಾಸ್ತ್ರ ಇತ್ಯಾದಿ ಭಾರತೀಯ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಅತ್ಯುತ್ತಮ ಕಾರ್ಯವನ್ನು ಮಾಡುತ್ತಿರುವ ಮಿಥಿಕ್ ಸೊಸೈಟಿಯ ಗ್ರಂಥಾಲಯ ಮತ್ತು ಅದು ಈಗಲೂ ಹೊರತರುತ್ತಿರುವ *ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ (ಕ್ಯು.ಜೆ.ಎಂ.ಎಸ್.)* ಇಂದಿಗೂ ಭಾರತದಾದ್ಯಂತ ಖ್ಯಾತಿ ಗಳಿಸಿರುವ ಸಂಸ್ಥೆ. ಸೂರ್ಯನಾಥ ಕಾಮತರು ಆ ಸಂಸ್ಥೆಗೆ 1969ರಲ್ಲಿ ಸದಸ್ಯರಾಗಿ ಸೇರ್ಪಡೆಯಾದರು. ನಂತರದ ಎರಡನೆಯ ವರ್ಷವೇ ಚುನಾವಣೆಯ ಮೂಲಕ ಕಾಮತರು ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾದರು. 1973ರಲ್ಲಿ ಸಂಸ್ಥೆಯ ವಜ್ರಮಹೋತ್ಸವ ನಡೆಯಿತು. ಆಗ ಸಂಸ್ಥೆಯ ಅಧ್ಯಕ್ಷರಾಗಿದ್ದವರು ತಿ.ತಾ.ಶರ್ಮ. 1975ರಲ್ಲಿ *ಕ್ಯು.ಜೆ.ಎಂ.ಎಸ್.*ನ ಸಂಪಾದನೆಯ ಜವಾಬ್ದಾರಿಯನ್ನು ಸೂರ್ಯನಾಥ ಕಾಮತ್ ಒಪ್ಪಿಕೊಂಡರು. ಭಾರತದಲ್ಲಿ ತುರ್ತುಪರಿಸ್ಥಿತಿ (ಎಮರ್ಜೆನ್ಸಿ) ಇದ್ದ ಸಂದರ್ಭದಲ್ಲಿ ಸಂಸ್ಥೆಯು ಕಾನೂನುಬಾಹಿರ ಕೆಲಸವನ್ನು ಮಾಡುತ್ತಿದೆ ಎಂಬ ಆಪಾದನೆಯ ಮೇಲೆ ಸರ್ಕಾರ ಸಂಸ್ಥೆಯ ಮೇಲೆ ನಿರ್ಬಂಧ ಹಾಕಿತ್ತು. ಸರ್ಕಾರವೇ ಒಬ್ಬ ಆಡಳಿತ ಮಂಡಳಿಯ ಅಧ್ಯಕ್ಷರನ್ನೂ ನೇಮಿಸಿತ್ತು. ಸರ್ಕಾರದ ಆಪಾದನೆಗಳೆಲ್ಲವೂ ಸುಳ್ಳು ಎಂದು ಸೂರ್ಯನಾಥ ಕಾಮತ್ ಒಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದರು. ಮೂರು ವರ್ಷ ಸರ್ಕಾರದ ಅಧೀನದಲ್ಲಿದ್ದ ಮಿಥಿಕ್ ಸೊಸೈಟಿ 1978ರಲ್ಲಿ ಪುನಃ ಎಂದಿನಂತೆ ಸ್ವತಂತ್ರವಾಗಿ ತನ್ನ ಕಾರ್ಯಚಟುವಟಿಕೆಗಳಲ್ಲಿ ತೊಡಗಿತು.

1993ರಿಂದ 2005ರವರೆಗೆ ಸೂರ್ಯನಾಥ ಕಾಮತ್ ಮಿಥಿಕ್ ಸೊಸೈಟಿಯ ಅಧ್ಯಕ್ಷರಾಗಿ ಮತ್ತು *ಕ್ಯು.ಜೆ.ಎಂ.ಎಸ್.*ನ ಸಂಪಾದಕರಾಗಿ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ನೀಡಿರುವ ಕೊಡುಗೆ ಅತ್ಯಂತ ಮಹತ್ವದ್ದು. ಬಾದಾಮಿ ಚಲುಕ್ಯ, ಕಲ್ಯಾಣ ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದ ವಿವಿಧ ವಿಚಾರಗಳನ್ನು

ಕುರಿತ ವಿಚಾರಸಂಕಿರಣಗಳು, ಆರ್ಯರು ಮತ್ತು ಮಹಾಭಾರತ ಯುದ್ಧಕ್ಕೆ ಸಂಬಂಧಿಸಿದ ವಿಚಾರಗಳು ಇತ್ಯಾದಿ ಅನೇಕ ಮಹತ್ವದ ವಿಚಾರಗಳನ್ನು ಕುರಿತು ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಎಪಿಗ್ರಫಿಕಲ್ ಸೊಸೈಟಿ ಆಫ್ ಇಂಡಿಯಾದ ಹಲವು ವಾರ್ಷಿಕ ಸಮ್ಮೇಳನಗಳು ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿಯ ಎರಡು ವಾರ್ಷಿಕ ಸಮ್ಮೇಳನಗಳಿಗೆ ಆಶ್ರಯ ನೀಡಿ ಇತಿಹಾಸ ಮತ್ತು ಸಂಸ್ಕೃತಿ ಕುರಿತ ನಿರಂತರ ಚರ್ಚೆಗಳಿಗೆ ಅವಕಾಶ ಕಲ್ಪಿಸಿದ್ದಾರೆ. ಮಿಥಿಕ್ ಸೊಸೈಟಿಯಲ್ಲಿ ವಿಶೇಷ ಉಪನ್ಯಾಸಗಳಿಗಂತೂ ಕೊರತೆಯಿಲ್ಲ. ನಗರಕ್ಕೆ ಯಾವುದೇ ಮಹತ್ವದ ಇತಿಹಾಸಕಾರರು ಆಗಮಿಸಿದರೂ, ಅವರಿಂದ ಒಂದು ವಿಶೇಷ ಉಪನ್ಯಾಸ ಏರ್ಪಡಿಸುವುದು ಮಿಥಿಕ್ ಸೊಸೈಟಿಯ ಪದ್ಧತಿ. ಎಲ್ಲ ಪಂಥದ ಇತಿಹಾಸಕಾರರ ವಿದ್ವತ್ತಿಗೂ ಮಿಥಿಕ್ ಸೊಸೈಟಿ ಗೌರವ ಸಲ್ಲಿಸುತ್ತದೆ. ಅದನ್ನು ಅರ್ಥವತ್ತಾಗಿ ಕಾರ್ಯರೂಪಕ್ಕಿಳಿಸಿದವರು ಸೂರ್ಯನಾಥ ಕಾಮತ್.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ 13 ವರ್ಷಗಳ ಬೋಧನೆಯ ನಂತರ ಆಗಿನ ಶಿಕ್ಷಣ ಕಾರ್ಯದರ್ಶಿ ಮತ್ತು ಗೆಳೆಯರೊಬ್ಬರ ಒತ್ತಾಯದ ಕಾರಣ ಕರ್ನಾಟಕ ಸರ್ಕಾರದ ಗ್ಯಾಸೆಟಿಯರ್ ಇಲಾಖೆಗೆ ಮುಖ್ಯ ಸಂಪಾದಕರಾಗಿ ಬಂದ ಸೂರ್ಯನಾಥ ಕಾಮತ್, ಅಲ್ಲಿನ 14 ವರ್ಷಗಳ ಸೇವಾವಧಿಯಲ್ಲಿ ಏಳು *ಜಿಲ್ಲಾ ಗ್ಯಾಸೆಟಿಯರ್* ಮತ್ತು ಒಂದು *ರಾಜ್ಯ ಗ್ಯಾಸೆಟಿಯರನ್ನು* ಸಂಪಾದಿಸಿ ಪ್ರಕಟಿಸಿದರು. ಈ ಎಲ್ಲಾ ಗ್ಯಾಸೆಟಿಯರ್‌ಗಳಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ವಿವರಗಳು ಹೊಸ ಶೋಧಗಳನ್ನು ಆಧರಿಸಿದ್ದವು ಮತ್ತು ಆಯಾ ಜಿಲ್ಲೆಯ ಪ್ರಮುಖ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸ್ಥಳಗಳ ಮಾಹಿತಿ ಲಭ್ಯವಾದವು. ಗ್ಯಾಸೆಟಿಯರ್ ಇಲಾಖೆಯ ಜವಾಬ್ದಾರಿ ಒಪ್ಪಿಕೊಂಡ ತರುಣದಲ್ಲೇ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರ ಹೆಚ್ಚುವರಿ ಜವಾಬ್ದಾರಿಯನ್ನೂ ನಿರ್ವಹಿಸಿದರು. ಆಗ ಅವರು ಹಲವು ಖಾಸಗಿ ಸಂಗ್ರಹದಲ್ಲಿದ್ದ ಕಾಗದ ಪತ್ರ ದಾಖಲೆಗಳನ್ನು ಇಲಾಖೆಗಾಗಿ ಸಂಗ್ರಹಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಮೈಸೂರಿನ ಅರಮನೆಯಲ್ಲಿದ್ದ ಅರಮನೆಯ ಕಾಗದ ಪತ್ರ ದಾಖಲೆಗಳನ್ನು ರಾಜ್ಯ ಪತ್ರಾಗಾರಕ್ಕೆ ಪಡೆದರು. ಇತಿಹಾಸ ಸಂಶೋಧನೆಗೆ ಅತ್ಯಗತ್ಯವಾದ ದಾಖಲೆಗಳ ಸಂಗ್ರಹಣೆಯಲ್ಲಿ ಸೂರ್ಯನಾಥ ಕಾಮತರ ಆಸಕ್ತಿ ವಿಶೇಷವಾದುದು.

1985ರಲ್ಲಿ ಕೆಲವು ಇತಿಹಾಸಾಸಕ್ತ ಗೆಳೆಯರನ್ನು ಸೇರಿಸಿಕೊಂಡು ಸೂರ್ಯನಾಥ ಕಾಮತರು ಸ್ಥಾಪಿಸಿದ ಕರ್ನಾಟಕ ಇತಿಹಾಸ ಅಕಾದೆಮಿಯು, ಇತಿಹಾಸವನ್ನು ಸಾಮಾನ್ಯರಿಗೂ ತಲುಪಿಸಿತು. ಇತಿಹಾಸ ಬೋಧಕರನ್ನು ಮಾತ್ರವಲ್ಲದೆ ಇತಿಹಾಸದ ಬಗ್ಗೆ ಆಸಕ್ತಿ ಇರುವ ಎಲ್ಲರಿಗೂ, ತಮ್ಮ ಸಂಶೋಧನೆಯನ್ನು ಪ್ರಕಟಗೊಳಿಸಲು ಮುಕ್ತ ಅವಕಾಶ ನೀಡಿದ ಕರ್ನಾಟಕ ಇತಿಹಾಸ ಅಕಾದೆಮಿಯ ಮೊದಲ ಹತ್ತು ವರ್ಷದ ಅಧ್ಯಕ್ಷರಾಗಿದ್ದವರು, ಕಾಮತರ ಗುರುಗಳೇ ಆಗಿದ್ದ ಜೆ.ಎಸ್.ದೀಕ್ಷಿತ್. ನಂತರದ ಹತ್ತು ವರ್ಷಗಳ ಅವಧಿಗೆ ಸೂರ್ಯನಾಥ ಕಾಮತರೇ ಸಂಸ್ಥೆಯನ್ನು ಮುನ್ನಡೆಸಿದರು. ಇತಿಹಾಸ ಅಕಾದೆಮಿಯ ವಾರ್ಷಿಕ ಸಮ್ಮೇಳನಗಳನ್ನು ಬೆಂಗಳೂರಿನಿಂದ ಹೊರಗೂ ಹಮ್ಮಿಕೊಂಡು, ಆಯಾ ಭಾಗದ ಜನರಲ್ಲಿ ಉತ್ಸಾಹ ಮೂಡಿಸಿದರು. ವಾರ್ಷಿಕ ಸಮೇಳನಗಳಲ್ಲಿ

ಮಂಡಿತವಾದ ಸಂಪ್ರಬಂಧಗಳನ್ನು ಒಳಗೊಂಡ *ಇತಿಹಾಸ ದರ್ಶನ* ಸಂಪುಟಗಳು ಸಂಶೋಧಕರಿಗೆ ಮಹತ್ವದ ಆಕರ ಗ್ರಂಥಗಳಾಗಿವೆ. ಇತಿಹಾಸ ಬೋಧಕರು ಮಾತ್ರವಲ್ಲದೆ, ವಿವಿಧ ಶಾಖೆಗಳ ಬೋಧಕರು, ಎಂಜಿನಿಯರುಗಳು, ಭೂಗರ್ಭ ಶಾಸ್ತ್ರಜ್ಞರು, ವೈದ್ಯರು ಹಾಗೂ ರೈತರಿಗೂ ಸದಸ್ಯತ್ವ ನೀಡಿ ಅವರ ಸಂಪ್ರಬಂಧಗಳ ಮಂಡನೆಗೂ ಅವಕಾಶ ಕಲ್ಪಿಸಿದ ಸೂರ್ಯನಾಥ ಕಾಮತರನ್ನು ಜನಸಾಮಾನ್ಯರಿಗೆ ಇತಿಹಾಸವನ್ನು ತಲುಪಿಸಿದ ಇತಿಹಾಸಕಾರ ಎಂದೇ ಒಪ್ಪಿಕೊಳ್ಳಬೇಕು.


ಕರ್ನಾಟಕ ಇತಿಹಾಸ ಅಕಾದೆಮಿಯು ಕೆಲವು ವರ್ಷಗಳ ಕಾಲ 2ನೇ ವರ್ಷದ ಪಿ.ಯು.ಸಿ.ವಿದ್ಯಾರ್ಥಿಗಳಿಗೆ ಅವರಿಗಿದ್ದ *ಕರ್ನಾಟಕ ಇತಿಹಾಸ* ಪಠ್ಯದ ವಿಷಯವನ್ನೇ ಆಧರಿಸಿ, ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ನಡೆಸಿ ಹೆಚ್ಚು ಅಂಕ ಗಳಿಸಿದವರಿಗೆ ಬಹುಮಾನಗಳನ್ನು ನೀಡಿತು. ಬಹುಮಾನಗಳನ್ನು ಹೆಚ್ಚು ಪಡೆದವರು ಗ್ರಾಮೀಣ ಕಾಲೇಜಿನ ವಿದ್ಯಾರ್ಥಿಗಳು ಎಂಬುದು ಸ್ತುತ್ಯರ್ಹ. ಅಕಾದೆಮಿಯು ಹಲವು ವಿಚಾರ ಸಂಕಿರಣ ಮತ್ತು ಸಂಶೋಧನ ತರಬೇತಿ ಶಿಬಿರಗಳನ್ನೂ ನಡೆಸಿತು. ಇದಕ್ಕೆಲ್ಲಾ ಸೂರ್ಯನಾಥ ಕಾಮತರೇ ಪ್ರೇರಣೆ ಎಂಬುದು ಮರೆಯದ ಮಾತು.

■

ಪುಸ್ತಕ ವಿಮರ್ಶೆ

ಸಿನಿ ಪಾಲಿಟಿಕ್ಸ್ : ದಕ್ಷಿಣ ಭಾರತದ ಸಿನಿಮಾ ಮತ್ತು ರಾಜಕಾರಣದ ಪ್ರತಿಬಿಂಬ

❑ ಪ್ರದೀಪ ಕುಮಾರ್ ಕೆ. ಶೆಟ್ಟಿ
ಇತಿಹಾಸ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು, ಬೈಂದೂರು, ಉಡುಪಿ – ಜಿಲ್ಲೆ.
pradeephistory@gmail.com



ಸಿನಿ ಪಾಲಿಟಿಕ್ಸ್: ಫಿಲ್ಮ್ ಸ್ಟಾರ್ಸ್ ಆಂಡ್ ಪೊಲಿಟಿಕಲ್ ಎಕ್ಸಿಸ್ಟೆನ್ಸ್ ಇನ್ ಸೌತ್ ಇಂಡಿಯಾ

ಲೇಖಕರು : ಎಂ. ಮಾಧವ ಪ್ರಸಾದ್

ಪ್ರಕಾಶಕರು: ಓರಿಯಂಟಲ್ ಬ್ಲಾಕ್‌ಸ್ವಾನ್

ವರ್ಷ : 2014   ಪುಟ : 240

ಬೆಲೆ : ರೂ. 765/–

ಪ್ರೊಫೆಸರ್ ಮಾಧವ ಪ್ರಸಾದ್, ಸಮಕಾಲೀನ ಸಂದರ್ಭದ ಸಿನಿಮಾ ಮತ್ತು ಕಲ್ಚರಲ್ ಸ್ಟಡೀಸ್‌ನ ಪ್ರಮುಖ ವಿದ್ವಾಂಸರು. ಭಾರತೀಯ ಸಿನಿಮಾ ಅಧ್ಯಯನದಲ್ಲಿ ಹಲವಾರು ಕಾಣ್ಕೆಗಳಿಂದ, ಹಲವಾರು ಮಾದರಿಗಳಿಂದ ಮನೆ ಮಾತಾದವರು. ಮಾಧವ ಪ್ರಸಾದರ, *ಐಡಿಯಾಲಜಿ ಆಫ್ ಹಿಂದಿ ಸಿನಿಮಾ: ಎ ಹಿಸ್ಟೋರಿಕಲ್ ಕನ್‌ಸ್ಟ್ರಕ್ಷನ್* ಬಹುಶಃ ಅಂತಹ ಒಂದು ಮಾದರಿ ಅಧ್ಯಯನ ಮತ್ತು ಕೃತಿ. ಭಾರತೀಯ ಸಿನಿಮಾ ಬರಹದ ಚರಿತ್ರೆಯಲ್ಲಿ ಅತ್ಯಂತ ಸಂಕೀರ್ಣವಾದ, ಕಲ್ಚರಲ್ ಸ್ಟಡೀಸ್‌ನ ಪರಿಕಲ್ಪನೆಗಳನ್ನು ದುಡಿಸಿಕೊಂಡು, ಬಳಸಿ ಬರೆದು ಹಿಂದಿ ಸಿನಿಮಾದ ಚರಿತ್ರೆಯ ಪ್ರಮುಖ ಪ್ರಶ್ನೆ ಮತ್ತು ಕಾಳಜಿಗಳನ್ನು ಎತ್ತಿಹಿಡಿದ ಕೃತಿಯಾಗಿ ಇದು ಮಹತ್ವದ್ದೆನಿಸುತ್ತದೆ. ಈ ನೆಲೆಯಲ್ಲಿ ವಿದ್ವಾಂಸ ರವಿ ವಾಸುದೇವನ್ ಇದನ್ನು ಭಾರತೀಯ ಸಿನಿಮಾ ಅಧ್ಯಯನದ ಸಂದರ್ಭದಲ್ಲಿ ಮಾದರಿ ಸ್ಥಿತ್ಯಂತರವನ್ನು ತಂದಂತಹ ಕೃತಿ ಎಂದೇ ಗುರುತಿಸುತ್ತಾರೆ.

ಇದರ ನಂತರದ ಮಾಧವ ಪ್ರಸಾದರ ಬಹುಮುಖ್ಯ ಕೃತಿ, *ಸಿನಿ ಪಾಲಿಟಿಕ್ಸ್: ಫಿಲ್ಮ್ ಸ್ಟಾರ್ಸ್ ಆಂಡ್ ಪೊಲಿಟಿಕಲ್ ಎಕ್ಸಿಸ್ಟೆನ್ಸ್ ಇನ್ ಸೌತ್ ಇಂಡಿಯಾ.* ಇದು ಅವರ ಮತ್ತು ಭಾರತೀಯ ಸಿನಿಮಾದ ಬರವಣಿಗೆಯಲ್ಲಿನ ಪ್ರಮುಖ ಕೃತಿ. ಈ ಕೃತಿ ದಕ್ಷಿಣ ಭಾರತದಲ್ಲಿ, ಸಿನಿಮಾ ರಾಜಕಾರಣ ಮತ್ತು ಉದ್ಯಮ ರೂಪುಗೊಂಡ ಬಗೆ ಮತ್ತೆ ಸಮಾನಾಂತರವಾಗಿ ಅದು ಅನುಭವಿಸಿದ, ಕಂಡುಕೊಂಡ ರಾಜಕಾರಣದ ಅನುಭವ ಮತ್ತು ಆಯಾಮದ

ಕುರಿತು ಮಾತನಾಡುತ್ತದೆ. ವಿಶೇಷವಾಗಿ ಸಿನಿಮಾ ರೂಪಿಸುವ ರಾಜಕಾರಣದ ಅನುಭವವಾಗಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಭೂಭಾಗವನ್ನು ವಿವಕ್ಷೆಗೆ ತೆಗೆದುಕೊಳ್ಳುತ್ತದೆ. ಅಧ್ಯಯನದ ಆರಂಭದಲ್ಲಿಯೇ ಮಾಧವ ಪ್ರಸಾದ್, ದಕ್ಷಿಣ ಭಾರತವನ್ನು ಒಂದು ಕೌತುಕದ ಅಥವಾ ವಂಡರ್‌ಲ್ಯಾಂಡ್ ಆಗಿ ಗುರುತಿಸದೇ ತರ್ಕ ಮತ್ತು ವೈಚಾರಿಕತೆಯ ಆಧಾರದ ಮೇಲೆ ಒಂದು ವಿಭಿನ್ನ ಆಯಾಮದ, ವೈವಿಧ್ಯದ ಅಧ್ಯಯನಗಳು ನಡೆಯಬೇಕು ಎನ್ನುವ ರೀತಿಯ ಭೂಗೋಳ ಎನ್ನುವ ಇಂಗಿತವನ್ನು ವ್ಯಕ್ತಪಡಿಸುತ್ತಾರೆ (ರಿಚರ್ಡ್ ಡೈಯರ್: *ಹೆವೆನ್ಲೀ ಬಾಡೀಸ್: ಫಿಲ್ಮ್ ಸ್ಟಾರ್ಸ್ ಅಂಡ್ ಸೊಸೈಟಿ*, 1986.) ಈ ರೀತಿ ಸಿನಿಮಾ ರೂಪಿಸುವ ಪ್ರತಿಮಾ ರಾಜಕಾರಣ, ಸಿನಿಮಾಗಳು ರೂಪಿಸುವ, ಸಿನಿಮಾದ ಪಾತ್ರಗಳು ಪ್ರಭಾವಿಸಿ ನಿರ್ಮಿಸುವ ಪ್ರತಿಮೆಗಳ ವಿನ್ಯಾಸವು ಜಗತ್ತಿನ ಇತರೆ ಭಾಗಗಳಲ್ಲಿರುವ ಹಾಗೆ ರೂಪುಗೊಂಡಿದೆಯೆಂಬುದನ್ನು ಇಲ್ಲಿ ಅನುಮೋದಿಸುತ್ತಾರಾದರೂ ಕೂಡಾ, ದಕ್ಷಿಣ ಭಾರತದ ಸಂದರ್ಭ, ರೂಪುಗೊಂಡ ಈ ವಿನ್ಯಾಸ ಇಲ್ಲಿಯ ಕಾಲ-ದೇಶ, ಭೂಗೋಳದ ಪ್ರತಿಫಲನವೆಂಬುದು ಮಾಧವ ಪ್ರಸಾದರ ಅನುಮೋದನೆ. ಈ ನೆಲೆಯಲ್ಲಿ ಮಾಧವ ಪ್ರಸಾದ ಅವರು ವಿದ್ವಾಂಸ ಎಂ.ಎಸ್.ಎಸ್. ಪಾಂಡ್ಯನ್‌ರ (ಎಂ.ಎಸ್. ಪಾಂಡ್ಯನ್: *ಇಮೇಜ್ ಟ್ರಾಪ್*, 1992) ಅನೇಕ ತರ್ಕ, ಊಹೆಗಳನ್ನು ಪುರಸ್ಕರಿಸುತ್ತಾ ದಕ್ಷಿಣಭಾರತದ ಸಿನಿ ರಾಜಕಾರಣದ ಅನನ್ಯತೆಯನ್ನು ಒಪ್ಪುತ್ತಾ ಒಂದು ಹೊಸದಾದ ಸಮಾಜಶಾಸ್ತ್ರೀಯ ಅಧ್ಯಯನ ನಡೆಯುವ ಅಗತ್ಯ, ಇರಾದೆಯನ್ನು ವ್ಯಕ್ತಪಡಿಸುತ್ತಾರೆ.

ಸಿನಿ ಪಾಲಿಟಿಕ್ಸ್‌ನ ಅಧ್ಯಯನಗಳು ಬಹುತೇಕ ಸಾಮಾಜಿಕ ಹಾಗೂ ರಾಜಕೀಯ ಆಯಾಮದಿಂದ ನಡೆದಿರುವಂತವುಗಳು. ಕೃತಿಯು ಆರು ಅಧ್ಯಾಯಗಳನ್ನು ಮತ್ತು ಒಂದು ಅನುಬಂಧವನ್ನೂ ಹೊಂದಿದೆ. ಮೊದಲ ಅಧ್ಯಾಯ, 'ಸಿನಿ ಪಾಲಿಟಿಕ್ಸ್; ಆನ್ ದಿ ಪೊಲಿಟಿಕಲ್- ಸಿಗ್ನಿಫಿಕೆನ್ಸ್ ಆಫ್ ಸಿನಿಮಾ ಇನ್ ಸೌತ್ ಇಂಡಿಯಾ'ವು ಹೆಸರೇ ಸೂಚಿಸುವ ಹಾಗೆ ದಕ್ಷಿಣ ಭಾರತದ ಸಿನಿ ರಾಜಕೀಯದ ಸಂದರ್ಭದಲ್ಲಿ ದಕ್ಷಿಣ ಭಾರತದ ಸಿನಿಮಾಗಳ ಮಹತ್ವವನ್ನು ಚರ್ಚಿಸುತ್ತದೆ. ಎರಡನೆಯ ಅಧ್ಯಾಯ, 'ಎಂ.ಜಿ.ಆರ್ ಆಂಡ್ ದಿ ರೂಟ್ಸ್ ಆಫ್ ಸಿನಿ ಪಾಲಿಟಿಕ್ಸ್' ತಮಿಳುನಾಡಿನಲ್ಲಿ ಎಂ.ಜಿ.ಆರ್ ಮತ್ತು ಸಿನಿಮಾ ರಾಜಕಾರಣ ರೂಪುಗೊಂಡ ಬಗೆಯನ್ನು ವಿಶದವಾಗಿ ಚರ್ಚಿಸುತ್ತದೆ. ಎಂ.ಜಿ. ರಾಮಚಂದ್ರನ್ ಸಕ್ರಿಯ ರಾಜಕಾರಣವನ್ನು ಪ್ರವೇಶಿಸುವ ಮೊದಲೇ ಸಿನಿಮಾದ ಪ್ರತಿಮೆ, ಪ್ರಭಾವಗಳ ಮೂಲಕ 'ಸ್ಟಾರ್‌ಡಮ್' ಅನ್ನು ಗಿಟ್ಟಿಸಿಕೊಂಡಿದ್ದರು. ಈ ಸ್ಟಾರ್‌ಡಮ್ ಎನ್ನುವ ಪ್ರಭಾವಳಿಯೇ ಒಂದು ಪ್ಯಾಸಿವ್ ಆದ ರಾಜಕಾರಣದ ಪರಿಪ್ರೇಕ್ಷವನ್ನು ಎಂ.ಜಿ.ಆರ್‌ಗೆ ರೂಪಿಸಿಕೊಟ್ಟಿತ್ತು ಎಂದು ಮಾಧವಪ್ರಸಾದ್ ವಾದಿಸುತ್ತಾರೆ. ದಕ್ಷಿಣ ಭಾರತದಲ್ಲೇ ತಮಿಳು ಮಾದರಿಯನ್ನು ಅವರು ವಿಭಿನ್ನವಾಗಿ ಗುರುತಿಸುತ್ತಾರೆ. ರಷ್ಯಾದಲ್ಲಿ ಸ್ಟಾಲಿನ್ ಮಾಡಿದ ರೀತಿಯಲ್ಲೇ ಎಂ.ಜಿ.ಆರ್ ನಡೆಸಿದ ಸಕ್ರಿಯ ರಾಜಕಾರಣವು ಜಸ್ಟೀಸ್ ಪಾರ್ಟಿ, ನಂತರ ಬಂದ ಡಿ.ಎಂ.ಕೆ ಪಕ್ಷ ಸಿನಿಮಾವನ್ನು ರಾಜಕೀಯ ಸಂದೇಶ ನೀಡುವ ಮಾಧ್ಯಮವಾಗಿ ಬಳಸಿದಾಗ ಜನರನ್ನು ರಾಜಕೀಯ ತರಬೇತಿ ಮತ್ತು ಸಾಮಾಜಿಕ ಪರಿವರ್ತನೆ ಮೂಡಿಸುವ

ನೆಲೆಯಲ್ಲಿ ಕೂಡಾ ಅದು ಕಾರ್ಯ ನಿರ್ವಹಿಸಿರುವುದನ್ನು ಗುರುತಿಸುತ್ತಾ ಅದನ್ನು ಒಂದು ಅನನ್ಯ ಅನುಭವವಾಗಿ ಅವರು ಕಾಣುತ್ತಾರೆ.

ಮಾಧವ ಪ್ರಸಾದ್, ಮೂರನೆ ಅಧ್ಯಾಯವಾದ, 'ಎನ್.ಟಿ.ಆರ್: ದಿ ಆಕ್ಸಿಡೆಂಟಲ್ ಪೊಲಿಟಿಶಿಯನ್' ಅಲ್ಲಿ, ರಾಷ್ಟ್ರೀಯತೆ ಗುರುತು ಮತ್ತು ತೆಲುಗು ಭಾಷಿಕ ಪ್ರದೇಶ ಮತ್ತು ಅನುಭವ ಅತ್ಯಂತ ಪ್ರಭಾವಿಯಾಗಿ, 'ಎನ್.ಟಿ.ಆರ್', ತೆಲುಗು ಭಾಷೆಯ ರೆಟರಿಕ್, ವಿಶೇಷವಾಗಿ ತೆಲುಗು ಭಾಷೆಯ ಉಳಿವು, ರಕ್ಷಣೆ ಮತ್ತು ತೆಲುಗು ಭಾಷೆಯ ರಾಷ್ಟ್ರೀಯತೆಯನ್ನು ದಕ್ಷವಾಗಿ ಬಳಸಿದ ಕಾರಣದಿಂದ ರೂಪುಗೊಂಡರು ಎನ್ನುವುದು ಪ್ರಸಾದರ ಅಭಿಮತ. ಈ ನೆಲೆಯಲ್ಲಿ ಪ್ರಸಾದ್, ರಾಜಕುಮಾರ್ ಮತ್ತು ಎನ್.ಟಿ. ರಾಮರಾವ್ ಪ್ರತಿನಿಧಿಸಿದ ಕಾಳಜಿಗಳು, ಸಮಕಾಲೀನ ಬೇಡಿಕೆಗಳು ಸರಿಸುಮಾರಾಗಿ ಸಾದೃಶ್ಯವಾಗಿದ್ದುವು ಎಂದು ಅಭಿಪ್ರಾಯಿಸುತ್ತಾರೆ.

ಕೃತಿಯ ನಾಲ್ಕನೆಯ ಅಧ್ಯಾಯ, 'ರಾಜ್‌ಕುಮಾರ್, ದಿ ಅನ್‌ಕ್ರೌನ್‌ಡ್ ಕಿಂಗ್' ರಾಜಕುಮಾರ್ ಎನ್ನುವ ವಿದ್ಯಮಾನವು ರೂಪುಗೊಂಡ ಚಾರಿತ್ರಿಕ ಪರಿಪ್ರೇಕ್ಷವನ್ನು ಕುರಿತು ಕೆಲವು ಪ್ರಶ್ನೆ, ವಾದ ಮತ್ತು ಅನುಮಾನಗಳನ್ನೂ ತಾರ್ಕಿಕವಾಗಿ ಎತ್ತುತ್ತದೆ. ರಾಜ್‌ಕುಮಾರ್ ಸಕ್ರಿಯ ರಾಜಕಾರಣವನ್ನು ಪ್ರವೇಶ ಮಾಡದಿರುವ ಸಂದರ್ಭವನ್ನು ಇವರು ಎನ್.ಟಿ.ಆರ್ ಗಿಂತ, ಆತನ ಸಿನಿಮಾ ರಾಜಕಾರಣ ಮತ್ತು ಪ್ರತಿಮಾ ವಿನ್ಯಾಸಗಳಿಗಿಂತ ವಿಭಿನ್ನ ಮತ್ತು ಅನನ್ಯವೆನ್ನುತ್ತಾ ಕೆಲವು ತರ್ಕಗಳನ್ನು ಮಂಡಿಸುತ್ತಾರೆ. ಬಹುಶ: ರಾಜ್‌ಕುಮಾರ್ ಎನ್ನುವ ಸಮಾಜೋ-ಸಾಂಸ್ಕೃತಿಕ ಮತ್ತು ಚಾರಿತ್ರಿಕ ವಿದ್ಯಮಾನವನ್ನು ಮೊತ್ತಮೊದಲು ಕಾರ್ಯಕಾರಣತೆಯೊಂದಿಗೆ ಚರ್ಚಿಸಿ, ವಿಶ್ಲೇಷಿಸಿದ್ದು ಮಾಧವಪ್ರಸಾದ್. ರಾಜ್‌ಕುಮಾರ್ ಬಗ್ಗೆ ಇರುವ ಸುಮಾರು ಮೂವತ್ತೆರಡು ಪುಟಗಳಲ್ಲಿ ರಾಜ್‌ಕುಮಾರ್ ಬಗೆಗೆ ಹಲವು ವಾದಗಳನ್ನು ಮಾಧವ ಪ್ರಸಾದ್ ಚರ್ಚಿಸುತ್ತಾರೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದ ಸಂಗತಿಯೆಂದರೆ,' ಗೋಕಾಕ್ ಚಳವಳಿ ರೂಪಿಸಿದ ಮತ್ತು ಗೋಕಾಕ್ ಚಳವಳಿಯನ್ನು ರೂಪಿಸಿದ ರಾಜ್‌ಕುಮಾರ್ ಬಗೆಗಿರುವ ದೈನ್ಯವನ್ನು, ಕರುಣೆ ಅಥವಾ ಜನರು ವ್ಯಕ್ತಪಡಿಸುವ ಕರುಣೆಯ ಬಗೆಗಿನದು. ಅದೇನೆಂದರೆ, ಗೋಕಾಕ್ ಚಳವಳಿಯ ನಂತರ ರಾಜ್‌ಕುಮಾರ್‌ಗೆ ಸಕ್ರಿಯ ರಾಜಕಾರಣವನ್ನು ಪ್ರವೇಶಿಸುವ ಎಲ್ಲಾ ಸಾಧ್ಯತೆಗಳಿತ್ತು. ಆದರೆ ರಾಜ್‌ಕುಮಾರ್ ಅದನ್ನು ತಳ್ಳಿ ಹಾಕಿದರು ಎನ್ನುವುದನ್ನು ಮಾಧವಪ್ರಸಾದ್ ಇಂತಹ ಅಭಿಪ್ರಾಯಕ್ಕೆ ಪ್ರತಿರೋಧದ (ಕೌಂಟರ್) ನೆಲೆಯಲ್ಲಿ ಕೆಲವು ಅದ್ಭುತವಾದ ವಿಚಾರಗಳನ್ನು ಚರ್ಚಿಸುತ್ತಾರೆ. ಮಾಧವಪ್ರಸಾದ್ ಪ್ರಕಾರ (*ಸಿನಿಪಾಲಿಟಿಕ್ಸ್:* ಪುಟ:99,2014) ರಾಜ್‌ಕುಮಾರ್, ಸಕ್ರಿಯ ರಾಜಕಾರಣವನ್ನು ಪ್ರವೇಶಿಸದೆಯೇ ರಾಜಕಾರಣಿಯಾಗಿದ್ದರು, ರಾಜಕಾರಣದ ಪ್ರಭಾವಳಿ, ಪ್ರತಿಮೆ, ವರ್ಚಸ್ಸನ್ನೂ ಹೊಂದಿದ್ದರು. ಇಂತಹ ರಾಜ್‌ಕುಮಾರ್ ಎಂಬ ವರ್ಚಸ್ಸೇ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸಿ, ಭಾಗವಹಿಸುವ ರಾಜಕಾರಣಿ ಮತ್ತು ರಾಜಕಾರಣಕ್ಕಿಂತ ಮಿಗಿಲು ಎಂದು ಪ್ರಬಲವಾಗಿ ತರ್ಕಿಸಿ ಮಂಡಿಸುತ್ತಾರೆ. ಪ್ರಸಾದ್ ಪ್ರಕಾರ, ರಾಜ್‌ಕುಮಾರ್ ಎನ್ನುವ ಗುರುತೇ ಅಥವಾ ಐಡೆಂಟಿಟಿಯೇ ಅತ್ಯಂತ ಪ್ರಮುಖವಾದ ರಾಜಕೀಯ ಮಾಧ್ಯಮವೆಂಬುದಾಗಿ,

ವಿನ್ಯಾಸ ಎಂಬುದಾಗಿ ಗಮನಿಸುತ್ತಾರೆ. ರಾಜ್‌ಕುಮಾರ್ ಎಂಬ ನಾಯಕನಟನ ದೈಹಿಕ, ಪ್ರತಿಮೀಯ ಸ್ಥಿತಿ ಮತ್ತು ಅನುಭವದ ದಕ್ಷತೆಯನ್ನು ಸ್ವತ: ನಿಯಂತ್ರಿಸಿದ, ಕಾಪಿಟ್ಟುಕೊಂಡ ಬಗೆಯನ್ನೂ ಇದರ ಒಂದು ಭಾಗವೆಂದೇ ಅವರು ಬಗೆಯುತ್ತಾರೆ. ಇದಕ್ಕೆ ಉದಾಹರಣೆಯಾಗಿ ಬರಿಯ ಪೌರಾಣಿಕ, ರಾಜರ ಪಾತ್ರಗಳನ್ನು ಮಾಡುತ್ತಿದ್ದ ರಾಜ್‌ಕುಮಾರ್ 'ರಾಯರ ಸೊಸೆ' ಎಂಬ ಮೊದಲ ಸಾಮಾಜಿಕ ಚಿತ್ರದಲ್ಲಿ ಹಳೆಯ ಭಾಗವತರ ಜುಟ್ಟು ಬಿಟ್ಟಿದ್ದು, ಅದನ್ನು ಕ್ರಾಪು ಮಾಡಲು ಕತ್ತರಿಸಬೇಕಾಗಿ ಬಂದಾಗ ಪ್ರತಿರೋಧಿಸುವ ಕ್ರಮವೇ ರಾಜ್‌ಕುಮಾರ್ ಮತ್ತು ಆತನಿಗೆ ರಾಜ, ಪುರಾಣದ ಪಾತ್ರಗಳು ಕಟ್ಟಿಕೊಟ್ಟ ಪ್ರತಿಮೆ ಮತ್ತು ಅದು ನಿರೂಪಿಸಿ ಕೊಟ್ಟಿರುವ ರಾಜಕಾರಣದ ಭಾಗವಾಗಿ, ಪ್ರತಿಮೆಯ ಸ್ಥಿರೀಕರಣದ ಕ್ರಮವಾಗಿ ಹಾಗೂ ಅದರ ಹಿಂದಿನ ರಾಜಕೀಯ ವಿನ್ಯಾಸವಾಗಿಯೇ ಪ್ರಸಾದ್ ಗುರುತಿಸುತ್ತಾರೆ.


ಐದನೆಯ ಅಧ್ಯಾಯ, 'ದಿ ಸಿನಿ-ಪೊಲಿಟಿಕಲ್ ಇವೆಂಟ್: ಸ್ಟ್ರಕ್ಚರ್ ಅಂಡ್ ಕಾಸ್'ದಲ್ಲಿ, ಪ್ರಸಾದ್, ಸಿನಿರಾಜಕಾರಣದ ಕಾರಣವನ್ನೂ ಮತ್ತು ಸಂರಚನೆಯನ್ನೂ ಗುರುತಿಸುತ್ತಾರೆ. ಇಂತಹ ಕಾರಣಗಳನ್ನು ವೈವಿಧ್ಯ, ಸಾಪೇಕ್ಷ ಮತ್ತು ಚಾರಿತ್ರಿಕವಾಗಿ ವಿಕಾಸವಾಗಿರುವ ಕ್ರಮವಾಗಿ ನೋಡುತ್ತಾರೆ. ಆರನೆಯ ಅಧ್ಯಾಯವಾದ, 'ಫ್ಯಾನ್ ಭಕ್ತಿ ಆಂಡ್ ಸಬಾಲ್ಟರ್ನ್ ಸಾವರ್ನಿಟಿ: ಎಂತೂಸಿಯಾಸಂ ಇನ್ ಇಂಡಿಯನ್ ಪೊಲಿಟಿಕಲ್ ಲೈಫ್'. ಅಧ್ಯಾಯವು ದಕ್ಷಿಣ ಭಾರತ, ಅದರಲ್ಲೂ ತಮಿಳುನಾಡಿನ ಪ್ರೇಕ್ಷಕರು ಸಿನಿಮಾಗಳಿಗೆ ವ್ಯಕ್ತಪಡಿಸುವ ಪ್ರತಿಕ್ರಿಯೆಯನ್ನು, ಅದರ ಸ್ವರೂಪವನ್ನು ಮಂಡಿಸುತ್ತಾರೆ. ಸಿನಿಮಾವನ್ನು ನೋಡುವ ಸಮುದಾಯ, ಮಾಸ್, ಅದು ಸಬಾಲ್ಟರ್ನ್ ಅಥವಾ ಕೆಳಸ್ತರದ ಜನರನ್ನು ಒಳಗೊಂಡಂತೆ, ಸಿನಿಮಾದ ಕುರಿತು ತಾಳುವ ಕುತೂಹಲ ಮತ್ತು ಅಂತಹ ಕುತೂಹಲ ರಾಜಕೀಯ ಜೀವನದ ಮೇಲೆ ತಾಳುವ ಶಕ್ತಿಯನ್ನೂ ಕೂಡಾ ಅತ್ಯಂತ ಆಸಕ್ತಿಯಿಂದ ವಿವೇಚಿಸಿದ್ದಾರೆ. ಕೃತಿಯ ಅನುಭಂದ, 'ಜಯಲಲಿತಾ- ಜೆಂಡರ್ ಅಂಡ್ ಸಿನಿ-ಪೊಲಿಟಿಕ್ಸ್', ವಿಶದವಾಗಿ ಜಯಲಲಿತಾ ಹೇಗೆ ರೂಪುಗೊಂಡರು ಲಿಂಗೀಯ ರಾಜಕಾರಣದ ನೆಲೆಯಲ್ಲಿ ಎನ್ನುವ ಜಿಜ್ಞಾಸೆಯನ್ನು ವಿವೇಚಿಸುತ್ತದೆ.

ಒಟ್ಟಾರೆ ಸಿನಿ ಪಾಲಿಟಿಕ್ಸ್ ಕೃತಿಯು ಸಿನಿಮಾದ, ಅದರಲ್ಲೂ ದಕ್ಷಿಣ ಭಾರತದ ಸಿನಿಮಾದ ಚರಿತ್ರೆ ಮತ್ತು ರಾಜಕಾರಣವನ್ನು ತುಂಬಾ ಸಮರ್ಥವಾಗಿ ನಮ್ಮ ಮುಂದೆ ತೆರೆಯುತ್ತದೆ. ದಕ್ಷಿಣ ಭಾರತದ ಸಿನಿಮಾ ಚರಿತ್ರೆ ಮತ್ತು ರಾಜಕಾರಣದ ಏಕತಾನತೆಯನ್ನೂ ಮುರಿಯುತ್ತದೆ. ಈ ಕೃತಿ ಕಲ್ಚರಲ್ ಸ್ಟಡೀಸ್‌ನ ಭಾರದಿಂದ ಬಳಲುವುದಿಲ್ಲ, ಬಳುಕುವುದೂ ಇಲ್ಲ. ಸಿನಿಮಾ ಮತ್ತು ಸಿನಿಮಾ ಚರಿತ್ರೆಯನ್ನು ಅಧ್ಯಯನ ಮಾಡಬೇಕಾದ ಸಂದರ್ಭದ ಕೆಲವು ವಿಚಾರಗಳನ್ನೂ, ವೈಚಾರಿಕತೆಯನ್ನೂ ಇದು ಚರ್ಚಿಸುತ್ತದೆ. ಕನ್ನಡದ ಸಂದರ್ಭದಲ್ಲಿ ಲೇಖಕರು ರಾಜ್‌ಕುಮಾರ್ ಬಗೆಗೆ ಇನ್ನೂ ಕೆಲವು ಪುಟಗಳನ್ನು ವಿಸ್ತರಿಸ ಬಹುದಾಗಿತ್ತೆನ್ನುವುದಷ್ಟೇ ಓದುಗನ ತಕರಾರು.

■

ರಾಷ್ಟ್ರೀಯ ಆಂದೋಲನ: ವಿಭಿನ್ನ ನೆಲೆಗಳ ಸಮಗ್ರ ಚಿತ್ರಣ

❑ ರಶ್ಮಿ .ಎಸ್
ಅತಿಥಿ ಉಪನ್ಯಾಸಕರು ಇತಿಹಾಸ ವಿಭಾಗ,
ವಿಶ್ವವಿದ್ಯಾಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾಲಯ
rashmi.mugoor@gmail.com



ರಾಷ್ಟ್ರೀಯ ಆಂದೋಲನ – ಸಿದ್ಧಾಂತದ ಮತ್ತು ಇತಿಹಾಸದ ಅಧ್ಯಯನಗಳು

ಲೇಖಕರು : ಇರ್ಫಾನ್ ಹಬೀಬ್

ಪ್ರಕಾಶಕರು: ನವಕರ್ನಾಟಕ
ಬೆಂಗಳೂರು

ವರ್ಷ : 2012 ಪುಟ : 144

ಬೆಲೆ : ರೂ. 90/-

ರಾಷ್ಟ್ರೀಯ ಆಂದೋಲನ – ಸಿದ್ಧಾಂತದ ಮತ್ತು ಇತಿಹಾಸದ ಅಧ್ಯಯನಗಳು ಕೃತಿಯ ಹೆಸರೇ ಸೂಚಿಸುವಂತೆ ರಾಷ್ಟ್ರೀಯ ಆಂದೋಲನ ಮತ್ತು ರಾಷ್ಟ್ರೀಯ ಆಂದೋಲನದ ಚರಿತ್ರೆ ಮತ್ತು ಲೇಖನಶಾಸ್ತ್ರ ಎಂಬ ಎರಡು ಧಾರೆಗಳು ಒಂದಕ್ಕೊಂದು ಹೆಣೆದುಕೊಂಡು ಅನೇಕ ಭಿನ್ನ ನೋಟಗಳೆಡೆಗೆ ಸೆಳೆಯುವುದು. ಒಟ್ಟು ಐದು ಪ್ರಬಂಧಗಳನ್ನು ಒಳಗೊಂಡಿರುವ ಈ ಕೃತಿಯು ಇಪ್ಪತ್ತನೇ ಶತಮಾನದಲ್ಲಿ ಅದರಲ್ಲಿಯೂ ಗಾಂಧೀಜಿ ಅವರ ಆಗಮನದ ನಂತರದ ರಾಷ್ಟ್ರೀಯ ಹೋರಾಟಗಳನ್ನು ಕಟ್ಟಿಕೊಡುವುದು. ಅಲ್ಲದೆ, ಪ್ರಸಿದ್ಧ ಇತಿಹಾಸಕಾರ ಇರ್ಫಾನ್ ಹಬೀಬ್ ಅವರ ವಿಸ್ತಾರವಾದ ನೋಟ ಹಾಗೂ ಮಹತ್ವದ ಗ್ರಹಿಕೆಗಳನ್ನು ಹೊಂದಿರುವುದನ್ನು ಹಂತ ಹಂತವಾಗಿ ಸ್ಪಷ್ಟಪಡಿಸುವುದು.

ಆರಂಭದ ಎರಡು ಲೇಖನಗಳು ಗಾಂಧೀಜಿ ಕುರಿತಾದರೆ, ಮೂರನೆಯದು ನೆಹರು ಕೇಂದ್ರಿತವಾಗಿದೆ. ನಾಲ್ಕನೆಯದು ಕಾಯ್ದೆಭಂಗ ಚಳವಳಿಯನ್ನು ವಿಮರ್ಶಿಸುತ್ತಾ, ಅದರ ಸುತ್ತ ಆವರಿಸಿರುವ ವಿವಿಧ ಹೋರಾಟಗಳು ಅದರ ಪ್ರಭಾವವನ್ನು ಒಟ್ಟಂದದಲ್ಲಿ ವಿಶ್ಲೇಷಿಸುವುದು. ಕೊನೆಯ ಪ್ರಬಂಧ ರಾಷ್ಟ್ರೀಯ ಚಳವಳಿಯಲ್ಲಿ ಎಡ ಪಂಥದ ಪ್ರಭಾವ, ಅದರ ಕೊಡುಗೆಗಳನ್ನು ಮುಂದಿಡುವುದು. ಈ ಐದು ಪ್ರಬಂಧಗಳು 1995 ರಿಂದ 2011ರವರೆಗೆ ವಿವಿಧ ಘಟ್ಟಗಳಲ್ಲಿ ಬರೆದು ಮತ್ತು ಪರಿಷ್ಕರಿಸಿದವುಗಳಾಗಿವೆ. ಸುಮಾರು 15 ವರ್ಷಗಳ ಕಾಲದ ಇರ್ಫಾನ್ ಹಬೀಬ್ ಅವರ ಚಿಂತನೆಗಳ ಬೆಳವಣಿಗೆ ಹಾಗೂ ಸಮಕಾಲೀನ ಪ್ರಭಾವವು ಗಮನ ಸೆಳೆಯುತ್ತದೆ. ಈ ಐದು ಪ್ರಬಂಧಗಳಲ್ಲಿ ಸಮಾನವಾಗಿ ಕಂಡುಬರುವ ಕೋಮುವಾದ ಮತ್ತು ಕೋಮುಗಲಭೆ ಕೇಂದ್ರಿತ ಚರ್ಚೆಗಳು ಪ್ರಮುಖವಾಗಿವೆ.

ರಾಷ್ಟ್ರೀಯ ಹೋರಾಟಗಳು : ಅಧ್ಯಯನಗಳು

ಮೊದಲ ಲೇಖನವು, 'ಗಾಂಧೀಜಿ: ಬದುಕು', ಗಾಂಧೀಜಿ ಸ್ವತಃ ನಿರ್ಧರಿಸಿ ನಡೆದ ಹಾದಿಯು 'ಮಹಾತ್ಮ'ರನ್ನಾಗಿಸಿದನ್ನು ವಿಶ್ಲೇಷಿಸಿರುವುದು. ಅವರ ಮೇಲಿನ ಪ್ರಭಾವಗಳು

ಮತ್ತು ಅವರ ಚಿಂತನೆಗಳಲ್ಲಿ ಉಂಟಾದ ಬದಲಾವಣೆಗಳನ್ನು ಅವರ ಕೃತಿಗಳಲ್ಲಿ ಹಾಗೂ ಹೋರಾಟದ ಮಾರ್ಗದಲ್ಲಿ ಚರ್ಚಿಸುತ್ತ ಸಾಗುವುದು. ಗಾಂಧೀಜಿ ಅವರ ಹೋರಾಟದ ಮಾರ್ಗಗಳಲ್ಲಿನ ವಿನೂತನ ಪ್ರಯೋಗಗಳನ್ನು 19ನೇ ಶತಮಾನದ ಕೊನೆಯ ದಶಕದಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯ ನೆಲಸಿಗರ ಹಕ್ಕುಗಳಿಗಾಗಿ ನಡೆಸಿದ ಹೋರಾಟಗಳಲ್ಲಿ ಹುಡುಕುವರು. ಬಡವರೊಂದಿಗೆ ಗುರುತಿಸಿಕೊಳ್ಳುತ್ತಾ ಮತ್ತು ರೈತರನ್ನು ಬಹುವಚನದೊಂದಿಗೆ ಸಂಬೋಧಿಸುತ್ತಾ (ನಾವು), ಜಮೀನ್ದಾರರನ್ನು ಹೊರಗಿನವರಂತೆ (ಅವರು) ನೋಡುವ ಮೂಲಕ ಸ್ವಾತಂತ್ರ್ಯ ಚಳವಳಿಯನ್ನು ಸಮೂಹ ಚಳವಳಿಯನ್ನಾಗಿ ಗಾಂಧೀಜಿ ಬದಲಾಯಿಸುವಲ್ಲಿ ಯಶಸ್ವಿಯಾದರು ಎಂದು ಇರ್ಫಾನ್ ಹಬೀಬ್ ಅವರು ಗುರುತಿಸುವರು. ಇದೇ ಸಂದರ್ಭದಲ್ಲಿ ಬಳಸಲಾಗುತ್ತಿದ್ದ ಅಸಹಕಾರ ಹೋರಾಟದ ವಿವಿಧ ರೂಪಗಳಾದ ಮುಷ್ಕರಗಳು, ಪಿಕೆಟಿಂಗ್, ಬಾಯ್‌ಕಾಟ್ ಮತ್ತು ನಿಧಾನಗತಿಯ ಪ್ರತಿರೋಧಗಳನ್ನು ಗಾಂಧೀಜಿ ಇವುಗಳನ್ನೆಲ್ಲ "ಅಹಿಂಸೆ ಮತ್ತು ಸರ್ವೋದಯದ ನಂಬಿಕೆಗಳನ್ನಾಗಿಸಿದರು".

ಗಾಂಧಿ ಅವರ ಬರವಣಿಗೆಗಳಲ್ಲಿಯೇ ಹಿಂದ್ ಸ್ವರಾಜ್ ಕೃತಿಯು ಲೇಖಕರ ಗಮನವನ್ನು ವಿಶೇಷವಾಗಿ ಸೆಳೆದಿದೆ. ಈ ಕೃತಿಯು ಗಾಂಧೀಜಿ ಅವರ ಚಿಂತನೆಗಳಲ್ಲಿದ್ದ ವಿರೋಧಾಭಾಸಗಳನ್ನು ಎತ್ತಿಹಿಡಿಯುವುದು. ಇದನ್ನು ವಿಶ್ಲೇಷಿಸುತ್ತ "ಭಾರತದ ಕುರಿತ ಆದರ್ಶ ನಾಗರೀಕ ಚಿತ್ರದ ಬೇರುಗಳು ಭಾರತದಲ್ಲಿರದೆ, ಪಾಶ್ಚಿಮಾತ್ಯ ಚಿಂತನೆಯಲ್ಲಿತ್ತು" ಎಂದು ಹೇಳುವರು. ಇದಕ್ಕೆ ಪೂರಕವಾಗಿ ಗಾಂಧೀಜಿ ಅವರ ಧಾರ್ಮಿಕ ನೀತಿ, ವಿಚಾರಧಾರೆಗಳು ಮತ್ತು ಹೋರಾಟದೊಳಗೆ ಅಡಕವಾಗಿದ್ದ ಚಿಂತನೆಗಳಲ್ಲಿ 'ಭಗವದ್ಗೀತೆಗಿಂತ ಬೈಬಲ್‌ನ ಹೊಸ ಒಡಂಬಡಿಕೆ' ಪ್ರಭಾವವನ್ನು ಗುರುತಿಸುವರು. ಇದರ ಬೆಳವಣಿಗೆ ಇಂಗ್ಲೆಂಡ್ ಭೇಟಿಯ ನಂತರವೇ ಕಂಡುಬರುವುದು. ಭಗವದ್ಗೀತೆಗೆ ಹೊಸ ವ್ಯಾಖ್ಯಾನ ಹಾಗೂ ಇಂದು ಕಂಡುಬರುವ ಹಿಂದೂ ಧರ್ಮ ಆದರ್ಶ ಮಾದರಿಯ ಪರಿಕಲ್ಪನೆಗಳನ್ನು ಪುನರ್ ವ್ಯಾಖ್ಯಾನಿಸುತ್ತಾ ಸ್ಪಷ್ಟೀಕರಿಸುವ ಕೆಲಸವನ್ನು ಗಾಂಧೀಜಿ ಜೊತೆಗೆ ಗುರುತಿಸಲಾಗಿದೆ. ಸಮಾಜೋ-ಧಾರ್ಮಿಕ ಚಳವಳಿಗಳು ಸಹ ಈ ನೆಲೆಯಲ್ಲಿ ರಾಜಕೀಯ ಮತ್ತು ಇಂದಿನ ಹಿಂದೂ ಧರ್ಮದ ಚೌಕಟ್ಟನ್ನು ರೂಪಿಸಲು ಮುಖ್ಯವಾದ ಆಧಾರಸ್ತಂಭಗಳಾಗಿವೆ. ಧರ್ಮದೊಡನೆಯೆ ಬೆಳೆದುಬಂದ ರಾಷ್ಟ್ರೀಯತೆಯ ವಿವಿಧ ಹಂತಗಳನ್ನು ಗುರುತಿಸುತ್ತಾ, ಗಾಂಧೀ ಅವರ 'ಸರ್ವೋದಯ ತತ್ವ'ಗಳು ಹೇಗೆ ಎಡಪಂಥೀಯ ಮತ್ತು ಬಲಪಂಥೀಯ ವಿಚಾರಗಳೆರಡನ್ನೂ ಬೆಳಸಲು ಅವಕಾಶ ಒದಗಿಸಿತು ಎಂಬ ವಿಶ್ಲೇಷಣೆಯನ್ನು ಕಾಣಬಹುದು. ಇದರೊಂದಿಗೆ ಭಾಷೆಯ ಆರಂಭಿಕ ಹಂತದ ವಿಚಾರಗಳು ಸಹ ಕೋಮುವಾದದ ಬೆಳವಣಿಗೆಗೆ ಇಂಬು ನೀಡಿದವು. ಆದರೆ ಗಾಂಧೀಜಿ ಅವರ ಜೀವನದ ಕಡೆಯ ಹಂತದವರೆಗೂ ಕೋಮುಗಲಭೆಗಳಿಂದ ಜನರನ್ನು ರಕ್ಷಿಸಲು ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಉತ್ತಮವಾಗಿ ನಿರ್ವಹಿಸಿದರು. ಈ ಪ್ರಬಂಧದಲ್ಲಿ ಗಾಂಧೀಜಿ ರೈತ ಹೋರಾಟಗಳು ಮತ್ತು ಭೂ ಮಾಲೀಕ ಹಾಗೂ ಊಳಿಗಮಾನ್ಯ ಶಕ್ತಿಯ ಪ್ರಭಾವ, ಕಾರ್ಮಿಕ ಚಳವಳಿಗಳು ಅಸ್ಪೃಶ್ಯತೆಯ ಹೋರಾಟಗಳು, ಕಾಯ್ದೆ ಭಂಗ ಚಳುವಳಿಯ ನಂತರದಲ್ಲಿ ದಲಿತರು ಮತ್ತು ಸ್ತ್ರೀಯರ ಸಮಾನತೆಗಾಗಿ ಹೋರಾಟಗಳು ಹೆಚ್ಚಿರುವುದನ್ನು ಕಾಣಬಹುದು. ಊಳಿಗಮಾನ್ಯ ಶಕ್ತಿ, ಬಂಡವಾಳಶಾಹಿಗಳೊಡನೆ ಗಾಂಧೀಜಿ ಅವರ ಸಂಬಂಧ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆ (ಪೂರ್ಣ ಸ್ವರಾಜ್ಯ ಘೋಷಣೆ) ಬೆಳವಣಿಗೆಯ ವಿವಿಧ ಹಂತಗಳು, ಗಾಂಧೀಜಿ ಕಾರ್ಯಚಟುವಟಿಕೆಯಲ್ಲಿ ರೂಪುಗೊಂಡ ಬಗೆ ವಿಮರ್ಶೆಗೊಳಗಾಗಿದೆ. ಒಟ್ಟಾರೆ ನೋಡುವುದಾದರೆ ಇಡೀ ಪ್ರಬಂಧದಲ್ಲಿ ಸಾಮಾಜಿಕ ಸಮಾನತೆಯ ಸಾಧನೆಯನ್ನು, ಅವರು ರಾಷ್ಟ್ರೀಯ ಆಂದೋಲನದ ಮೂಲ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡುವ ಮೂಲಕ ಸ್ವಾತಂತ್ರ್ಯದ ವ್ಯಾಖ್ಯಾನವನ್ನು ರೂಪಿಸತೊಡಗಿದರು.

ಎರಡನೇ ಪ್ರಬಂಧದಲ್ಲಿ ಲೇಖಕರು ಗಾಂಧೀಜಿ ಅವರು ಸಾಧಿಸಿದ ನಿರ್ಣಾಯಕ ಸಾಧನೆಗಳನ್ನು ಎಳೆಎಳೆಯಾಗಿ ಚರ್ಚಿಸುವರು. ರಾಷ್ಟ್ರೀಯ ಚಳವಳಿಯನ್ನು 'ಗಣ್ಯರ ಚಳವಳಿ' ಎಂದು ಕರೆಯುವುದಿಲ್ಲ. ಇದರಲ್ಲಿ ಮುಖ್ಯವಾಗಿ ಮೂರು ಪಕ್ಷಗಳನ್ನು ಗುರುತಿಸುವರು. ಅವುಗಳೆಂದರೆ, ಸಾಮ್ರಾಜ್ಯಶಾಹಿ, ಊಳಿಗಮಾನ್ಯಶಾಹಿ ರಾಷ್ಟ್ರೀಯತೆ ಮತ್ತು ಕಾರ್ಮಿಕ ಚಳುವಳಿಗಳು. ಗಾಂಧೀಜಿಯವರನ್ನು ಸಮಕಾಲೀನ ಕಮ್ಯುನಿಸ್ಟರು ನೋಡುತ್ತಿದ್ದ ಬಗೆಯ ವಿಶ್ಲೇಷಣೆಯೊಂದಿಗೆ ಪ್ರಬಂಧ ಆರಂಭಗೊಳ್ಳುವುದು. ಇದರೊಂದಿಗೆ ಸಮಕಾಲೀನ ಎಡಪಂಥೀಯ ವಿಚಾರಗಳು ಮತ್ತು ಬಂಡವಾಳಶಾಹಿಗಳ ಚಿಂತನೆಯ ಸೈದ್ಧಾಂತಿಕ ಚರ್ಚೆಗಳೂ ಇವೆ. ಜೊತೆ ಜೊತೆಗೆ ಚರಿತ್ರೆ ಲೇಖನಶಾಸ್ತ್ರದ ವಿವಿಧ ಪ್ರಕಾರಗಳಾದ ಸಬ್‌ಆಲ್ಟರ್ನ್, ಕೇಂಬ್ರಿಡ್ಜ್, ರಾಷ್ಟ್ರೀಯವಾದಿಗಳು, ಮಾರ್ಕ್ಸಿಸ್ಟರ ನೆಲೆಯಲ್ಲಿ ವಿಚಾರಗಳ ವಿಶ್ಲೇಷಣೆಗೊಂಡಿವೆ. ಗಾಂಧೀಜಿಯ ವಿವರಣೆ, ವಿಸ್ತರಣೆಯನ್ನು ಮತ್ತು ರಾಷ್ಟ್ರೀಯ ಚಳವಳಿಯಲ್ಲಿ ಅವರ ವ್ಯಾಪ್ತಿಯನ್ನು ಗುರುತಿಸುವ ಲೇಖಕರು ಆ ಚಿಂತನೆಗಳೊಂದಿಗೆ ಸುದೀರ್ಘ ಸಂವಾದದಲ್ಲಿ ತೊಡಗುವರು. ಅವರದೇ ಸಾಲುಗಳಲ್ಲಿ ಹೇಳಬೇಕೆಂದರೆ "ಒಂದು ಅರ್ಥದಲ್ಲಿ ಬ್ರಿಟಿಷರು, ಸಂವಿಧಾನಾತ್ಮಕವಾಗಿ ಮತ್ತು ರಾಜಕೀಯವಾಗಿ, ತಮ್ಮ ಕೃತ್ಯಗಳ ಪರಿಣಾಮವಾಗಿಯೇ ಗಾಂಧೀಜಿ 'ಮಿಥ್' ಅನ್ನು ಸೃಷ್ಟಿಸಿದರು". ಚರಿತ್ರೆಯ ಶಿಸ್ತಿನಲ್ಲಿ ಇಲ್ಲಿಯರವೆಗಿನ ಗಾಂಧೀಜಿ ಅವರ ಅಧ್ಯಯನಗಳ ವಿಶ್ಲೇಷಣೆಯೊಂದಿಗೆ ರಾಷ್ಟ್ರೀಯ ಆಂದೋಲನ ಹಾಗೂ ಗಾಂಧೀಜಿಯನ್ನು ಪುನರ್ರಚಿಸುವ ಪ್ರಯತ್ನವಿದು. ಗಾಂಧೀಜಿಯ ಬರವಣಿಗೆಗಳನ್ನು ಅವರ ವಿಚಾರಗಳನ್ನು ಗ್ರಹಿಸಲು ಮುಖ್ಯ ಸಾಧನವಾಗಿ ಲೇಖಕರು ಬಳಸಿರುವರು. ಆದರೂ ಗಾಂಧೀಜಿಯ ಬರವಣಿಗೆಗಳಿಂದಲೇ ಅವರನ್ನು ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ ಎನ್ನುವರು.

ರಾಷ್ಟ್ರೀಯ ಹೋರಾಟದಲ್ಲಿ ಗಾಂಧೀಜಿಯವರ ಕುರಿತ ಅಧ್ಯಯನಗಳಲ್ಲಿ ಲೇಖಕರ ಗಮನ ಎಷ್ಟೊಂದು ಕೇಂದ್ರಿಕೃತವಾಗಿದೆಯೆಂದರೆ "ಅವರು (ಗಾಂಧಿ) ಯಾವ ಜನರಿಗಾಗಿ ದುಡಿದರೋ ಯಾವ ಜನರಿಗಾಗಿ ಮಡಿದರೋ ಅಂಥ ಜನಸಾಮಾನ್ಯರನ್ನು ಈ ಸಾಹಿತ್ಯವು ಕೇವಲ ವಿಧೇಯ ಆರಾಧಕರನ್ನಾಗಿ ನೋಡುತ್ತದೆ" ಎಂಬ ವಿಶ್ಲೇಷಣೆಯು ಗಮನಾರ್ಹವಾಗಿದೆ. ಸಮಕಾಲೀನವಾಗಿ ಕಂಡುಬರುವ ಎಲ್ಲ ಚಳವಳಿಗಳು ಒಂದಕ್ಕೊಂದು ಪೂರಕವಾಗಿದ್ದವು ಎಂದು ಗುರುತಿಸುವರು. ಭೂಸ್ವಾಮ್ಯ, ಗೇಣಿ ಸುಧಾರಣೆ, ಕಾರ್ಮಿಕ ಚಳವಳಿ, ಅಸ್ಪೃಶ್ಯತಾ ನಿವಾರಣೆ ಮತ್ತು ಸ್ವತಂತ್ರ ಹೋರಾಟಗಳು. ಇವೆಲ್ಲವೂ ದೇಶ ಕಟ್ಟುವ ಪ್ರಕ್ರಿಯೆಯ ವಿವಿಧ ಹಂತಗಳಾಗಿ ಗಮನಿಸಲಾಗಿದೆ. ಸಮಕಾಲೀನವಾಗಿ ರಾಷ್ಟ್ರೀಯ ಹೋರಾಟದಲ್ಲಿ ಎಡಪಕ್ಷವು ಸಹ ಗೌಣವಾಗಿದ್ದು, ಯಶಸ್ವಿಯಾಗಿದ್ದು 'ಗಾಂಧಿ ಮಾರ್ಗ' ಮಾತ್ರ ಎಂದು ಒಪ್ಪಿಕೊಳ್ಳುವರು. ಇದರೊಂದಿಗೆ ಮುಂದಿನ ಹಂತದಲ್ಲಿ ಎಡಪಕ್ಷಗಳ ಪಾತ್ರದ ನಿರ್ಲಕ್ಷಕ್ಕೆ 1940ರ ದಶಕದಲ್ಲಾದ ಬದಲಾವಣೆಗಳ ಚರ್ಚೆ ಇದೆ. ರಾಷ್ಟ್ರೀಯ ಆಂದೋಲನದಲ್ಲಿ ಧರ್ಮ ಮತ್ತು ಕೋಮುವಾದದ ಪಾತ್ರ ಇಲ್ಲಿಯೂ ಚರ್ಚೆಗೊಳಗಾಗಿದೆ. ಪ್ರಸ್ತುತ ಭಾರತದ ಜಾತ್ಯತೀತ ಸಂವಿಧಾನ ಮತ್ತು ಕೋಮು ರಾಜಕಾರಣದ ಸಂದರ್ಭಗಳು ಮತ್ತೆ ಮತ್ತೆ ರಾಷ್ಟ್ರೀಯ ಚಳುವಳಿಯನ್ನು ಪುನರ್ ಅವಲೋಕಿಸಲು ಪ್ರೇರೇಪಿಸುವುದು. ಲೇಖಕರು ಈ ಪ್ರಬಂಧಗಳನ್ನು ರಚಿಸಿದ ಸಂದರ್ಭದಲ್ಲಿ ಬಾಬ್ರಿ ಮಸೀದಿ ಮತ್ತು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಹೆಸರಿನಲ್ಲಿ ದೇಶದಾದ್ಯಂತ ಕೋಮುಗಲಭೆಗಳು ಹೊತ್ತು ಉರಿದಿದ್ದವು. ಈ ಎರಡು ಪ್ರಬಂಧಗಳು ಒಟ್ಟಾಗಿ ರಾಷ್ಟ್ರೀಯ ಹೋರಾಟದ ಸಂಕ್ಷಿಪ್ತ ವಿಮರ್ಶೆಗಳಾಗಿವೆ. ಆದರೆ ವಿಶಾಲವಾಗಿ ಗಾಂಧೀಜಿಯವರ ಬೌದ್ಧಿಕ ಜೀವನ ಚರಿತ್ರೆಯೆಡೆಗೆ ಸಹಾನುಭೂತಿ ಹೊಂದಿದೆ.

ಮೂರನೇ ಅಧ್ಯಾಯ ನೆಹರು ಅವರ ಐತಿಹಾಸಿಕ ಅಂತರ್ದೃಷ್ಟಿಯು ನೆಹರು ಅವರ ವಿಚಾರದಲ್ಲಿ ರಾಷ್ಟ್ರೀಯತೆ ಮತ್ತು ಅಂತರ್ ರಾಷ್ಟ್ರೀಯತೆ ಜೊತೆಗಿನ ಸಂಬಂಧಗಳಲ್ಲಿನ ಆದ್ಯತೆಯನ್ನು ವಿಶೇಷವಾಗಿ ಗಮನಿಸಬಹುದು. ನೆಹರು ವ್ಯಕ್ತಿತ್ವ ಹೊರಾಟದ ಮಾರ್ಗಗಳ ಮೇಲಿನ ಪ್ರಭಾವವನ್ನು ಗ್ರಹಿಸಲು ಇಲ್ಲಿಯೂ ಅವರ ಕೃತಿಗಳನ್ನು ಸಾಧನಗಳನ್ನಾಗಿ ಬಳಸಲಾಗಿದೆ. *ಆ್ಯನ್ ಆಟೋಬಯಾಗ್ರಫಿ, ದಿ ಡಿಸ್ಕವರಿ ಆಫ್ ಇಂಡಿಯಾ* ಮತ್ತು *ಗ್ಲಿಮ್ಸಸ್ ಆಫ್ ವರ್ಲ್ಡ್ ಹಿಸ್ಟರಿ* ಮೂಲಕ ನೆಹರು ಚಿಂತನೆಗಳು, ಅದರಲ್ಲಿನ ಬದಲಾವಣೆಗಳನ್ನು ವಿಶ್ಲೇಷಿಸಲಾಗಿದೆ. ನೆಹರು ಒಬ್ಬ ವೃತ್ತಿಪರ ಇತಿಹಾಸಕಾರರಲ್ಲ. ಆದರೆ ಇತಿಹಾಸದ ಬೆಳವಣಿಗೆಯಲ್ಲಿ ಎಲ್ಲ ಜನರ ಕೊಡುಗೆ ಇದೆ. ಅವರೆಲ್ಲರಿಗೂ ಇತಿಹಾಸದಲ್ಲಿ ಒಂದು ವಿಶಿಷ್ಠ ಸ್ಥಾನವಿದೆ ಎಂಬ ನಿಲುವನ್ನು ಹೊಂದಿದ್ದರು. ಲೇಖಕರು ನೆಹರುರವರ ಸೆರೆಮನೆ ಕೃತಿಗಳನ್ನು ಆಂಟೋನಿಯೋ ಗ್ರಾಮ್ಸಿ ಕೃತಿಗಳೊಂದಿಗೆ ಹೋಲಿಸಬಹುದಾಗಿದೆ ಎಂದಿರುವುದು ಗಮನಾರ್ಹ. ಕಾರ್ಯನಿಷ್ಠ ವ್ಯಕ್ತಿಯೊಬ್ಬನ ಮನಸ್ಸಿಗೆ ಎದ್ದಿರುವ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಾ ಇತಿಹಾಸವನ್ನು ಹೊಕ್ಕರು ಎನ್ನುವ ಮಟ್ಟಿಗೆ ಗ್ರಾಮ್ಸಿ ಮತ್ತು ನೆಹರುರವರ ನಡುವೆ ತುಂಬ ಗಟ್ಟಿಯಾದ ಸಾಮ್ಯವಿದೆ ಎಂದು ಸಮರ್ಥಿಸುವರು. ಚರಿತ್ರೆಯಲ್ಲಿ ಜನಸಾಮಾನ್ಯರಿಗೆ ನೀಡುತ್ತಿದ್ದ ಸ್ಥಾನ, ಸ್ವಾತಂತ್ರ್ಯದ ಪರಿಕಲ್ಪನೆ, ಮಹಿಳೆಯರ ಸಮಾನತೆ ಕುರಿತ ನಿಲುವುಗಳನ್ನು ಅವರ ರಾಷ್ಟ್ರೀಯ ಹೋರಾಟದ ನೆಲೆಯಲ್ಲಿ ಚರ್ಚಿಸಲಾಗಿದೆ. ಜೊತೆಗೆ *ಗ್ಲಿಮ್ಸ್‌ಸ್ ಆಫ್ ವರ್ಲ್ಡ್ ಹಿಸ್ಟರಿ* ಕೃತಿ ರಾಷ್ಟ್ರೀಯತೆಯು ಅಂತರ್ ರಾಷ್ಟ್ರೀಯತೆಯ ಮೇಲೆ ವಿಜಯ ಸಾಧಿಸುವುದನ್ನು ತೋರಿಸುವುದು. ಇದು ನೆಹರು ಅವರ ಹಿಂಚಲನೆಯಾಗಿತ್ತು ಎಂದು ಗುರುತಿಸುವರು. ಗಾಂಧೀಜಿ ಮತ್ತು ನೆಹರು ಚಿಂತನೆಗಳಲ್ಲಿರುವ ಮೂಲಭೂತ ವ್ಯತ್ಯಾಸಗಳನ್ನು ಮತ್ತು ಕಾಂಗ್ರೆಸ್‌ನೊಳಗೆ ಎಡಪಂಥೀಯ ವಿಚಾರಗಳ ಪ್ರಭಾವಗಳನ್ನು ವಿಶ್ಲೇಷಿಸುತ್ತಾ ಸಾಗುವರು. ನೆಹರು ಅವರ ಅತೃಪ್ತಿಯ ಮೂಲ ಸ್ವಾತಂತ್ರ್ಯ ದೊರೆತ ನಂತರ ಮುಂದೇನು ಎಂಬುದಾಗಿತ್ತು, ಹಾಗಾಗಿ ನೆಹರು ಭಾರತ ಕಂಡುಬರುವುದು ಎನ್ನುವರು. ಈ ಪ್ರಬಂಧದಲ್ಲಿನ ವಿಚಾರಗಳು ಅಂದು ರಾಷ್ಟ್ರೀಯತ್ವದ ಸೈದ್ಧಾಂತಿಕ ತಿರುಳಾಗಿ ಕಾರ್ಯ ನಿರ್ವಹಿಸಿರುವಂತೆ ಕಂಡುಬರುವುದು. ನೆಹರು ಅವರ ಬಂಡವಾಳಶಾಹಿ ಮತ್ತು ಸರ್ಕಾರದ ಚಿಂತನೆಗಳ ಕುರಿತ ವಿಚಾರಗಳು, ಭೂ ಸ್ವಾಮ್ಯದ ಚಿಂತನೆಗಳಲ್ಲಿ 1940ರ ನಂತರ ಉಂಟಾಗುವ ಬದಲಾವಣೆಯನ್ನು ಗುರುತಿಸುವರು. ಆದರೆ ಅದಕ್ಕೆ ಕಾರಣವನ್ನು ಹುಡುಕುವುದಿಲ್ಲ. ಪ್ರಬಂಧ ಅಲ್ಲಿಗೆ ಕೊನೆಗೊಳ್ಳುವುದು. ಹಾಗೆ ಸ್ವಾತಂತ್ರ್ಯದ ತರುವಾಯ ಪ್ರಧಾನಿ ನೆಹರು ಚಿಂತನೆಗಳಲ್ಲಿ ಕಂಡುಬಂದ ಬದಲಾವಣೆಗಳು ಮತ್ತು ಅವರ ಕಾರ್ಯನೀತಿಯನ್ನು ಸಹ ಇಲ್ಲಿ ಪರೀಕ್ಷಿಸಲು ಹೋಗುವುದಿಲ್ಲ. ಮುಖ್ಯವಾಗಿ ಇಲ್ಲಿ ಲೇಖಕರು ಮಾರ್ಕ್ಸಿಸ್ಟ್ ಸಮಾಜವಾದಿ ವಿಧಾನವನ್ನು ರಾಷ್ಟ್ರೀಯ ಹೋರಾಟ ಗ್ರಹಿಸಲು ಮತ್ತು ಕೋಮುವಾದದ ವಿರುದ್ಧ ಗಟ್ಟಿಯಾಗಿ ಹೋರಾಡಲು ಬಳಸಿಕೊಂಡಿದ್ದಾರೆ ಎನ್ನುವುದನ್ನು ತೋರಿಸುವುದು.

ನಾಲ್ಕನೇ ಅಧ್ಯಾಯವು ರಾಷ್ಟ್ರೀಯ ಹೋರಾಟದ ಮತ್ತು ಸ್ವತಂತ್ರ ಭಾರತದ ಮೇಲೆ ಪರಿಣಾಮ ಬೀರಿದ ನಿರ್ಣಾಯಕ ಹಂತವನ್ನು ವಿಶ್ಲೇಷಿಸುವುದು. ಕಾಯ್ದೆಭಂಗ ಚಳವಳಿಯ ಚೌಕಟ್ಟಿನಲ್ಲಿ ಅನೇಕ ವಿಚಾರಗಳು ಐದು ಹಂತಗಳಲ್ಲಿ ಚರ್ಚೆಗೊಳಪಡುವುದು. 1922ರ ಅಸಹಕಾರ ಚಳವಳಿ ಕೊನೆಗೊಂಡ ನಂತರ ರಾಷ್ಟ್ರೀಯ ಹೋರಾಟದ ಹಿಂಚಲನೆ, ಎಡಪಂಥೀಯ ಪಕ್ಷಗಳ ಬೆಳವಣಿಗೆ ಮತ್ತು ಕಾಂಗ್ರೆಸ್ ಮೇಲೆ ಅದರ ಪ್ರಭಾವ ಹಾಗೂ ಕೋಮುವಾದಿ ಶಕ್ತಿಗಳ ಸಂಕೀರ್ಣ ಬೆಳವಣಿಗೆಯ ಪ್ರಕ್ರಿಯೆಗಳ ಸಂಕ್ಷಿಪ್ತ ಚಿತ್ರಣವನ್ನು

ಕಟ್ಟಿಕೊಡುವರು. ಜೊತೆಗೆ ಚಳವಳಿಗೂ ಮುನ್ನ ಭಾರತ ಮತ್ತು ಬ್ರಿಟನ್ ರಾಜಕೀಯರಂಗ, ಜಾಗತಿಕ ವಲಯದಲ್ಲಿ ಬದಲಾದ ಶಕ್ತಿಸಂಬಂಧಗಳನ್ನು ವಿಶ್ಲೇಷಿಸಲಾಗಿದೆ. ಎರಡನೇ ಹಂತದಲ್ಲಿ ಸೈಮನ್ ಆಯೋಗವು ಜಡವಾಗಿದ್ದಂತೆ ಕಂಡಬರುತ್ತಿದ್ದ ರಾಷ್ಟ್ರೀಯತೆಯ ಪುನಃಶ್ಚೇತನಕ್ಕೆ, ಎಡಪಂಥೀಯ ವಿಚಾರಗಳು ಡೊಮಿನಿಯನ್ ಸ್ಥಾನಮಾನದಿಂದ ಪೂರ್ಣ ಸ್ವರಾಜ್ಯದೆಡೆಗೆ ಬೇಡಿಕೆಯಲ್ಲಿನ ಬದಲಾವಣೆಯು ವೇಗವಾಗಿ ಉಂಟಾಗುವ ಪ್ರಕ್ರಿಯೆಗಳನ್ನು ಸ್ಪಷ್ಟಪಡಿಸುವರು. ಮೂರನೇ ಹಂತ ರಾಷ್ಟ್ರೀಯ ಹೋರಾಟದಲ್ಲಿ ಪೂರ್ಣ ಸ್ವರಾಜ್ಯದೆಡಗಿನ ಪಯಣ, ಕಾಂಗ್ರೆಸ್‌ನೊಳಗೆ ನಾಯಕತ್ವದಲ್ಲಾದ ಬದಲಾವಣೆಗಳು ಮತ್ತು ಅಷ್ಟೇ ವೇಗವಾಗಿ ಕೋಮುವಾದ ಮತ್ತು ತಡೆಯಲು ಪ್ರತಿತಂತ್ರಗಳ ಬೆಳವಣಿಗೆಯನ್ನು ತೆರೆದಿಡುವರು. ನಾಲ್ಕು ಮತ್ತು ಐದನೇ ಹಂತಗಳು ಭಾರತದಲ್ಲಿ ಬ್ರಿಟನ್ ಶಕ್ತಿ ಕುಂದುವಿಕೆ, ಹೋರಾಟಗಾರರ ನಡುವೆ ಒಡಕುಂಟು ಮಾಡುವ ಪ್ರಯತ್ನಗಳು, ಪ್ರಮುಖ ರಾಷ್ಟ್ರೀಯ ಹೋರಾಟಗಾರರು ನೀಡಿದ ವಾಗ್ದಾನಗಳು, ರೈತ ಹೋರಾಟಗಳು, ಗೇಣಿ ನಿರಾಕರಣೆ ಹೋರಾಟ, ಭೂ ಸ್ವಾಮ್ಯ ಪ್ರಶ್ನಿಸುವ ಹೋರಾಟಗಳು ಹೆಚ್ಚಾಗುತ್ತಿದ್ದದ್ದನ್ನು ಗುರುತಿಸಬಹುದು. ಕೆಲವು ಮಾದರಿ ನೀತಿಗಳ ಬೆಳವಣಿಗೆ, ಅದರಲ್ಲಿಯೂ ಮುಖ್ಯವಾಗಿ ಗಾಂಧೀಜಿ ಅವರ ಚಿಂತನೆಗಳಲ್ಲಿ ಉಂಟಾದ ಬದಲಾವಣೆಗೆ ಎಡಪಂಥೀಯ ಚಳವಳಿಗಳು ಮುಖ್ಯ ಕೊಡುಗೆ ನೀಡಿದ್ದವು ಎಂದು ಗುರುತಿಸುವರು. ಪರಿಣಾಮವಾಗಿ ರೈತ ಮತ್ತು ಕಾರ್ಮಿಕರಿಗೆ ರಾಷ್ಟ್ರೀಯ ಹೋರಾಟದ ಲಾಭದ ಪಾಲು ದೊರೆಯದಿದ್ದಲ್ಲಿ ಅವರನ್ನು ಸೆಳೆಯಲು ಸಾಧ್ಯವಿಲ್ಲ ಎಂಬ ಅರಿವು ಉಂಟಾಗಿತ್ತು ಎಂದು ಪ್ರತಿಪಾದಿಸುವರು. ಈ ಸಂದರ್ಭದ ಅತಿ ಪ್ರಮುಖ ಹಂತವಾಗಿ 1929ರ ಕರಾಚಿ ಗೊತ್ತುವಳಿಯನ್ನು ಸ್ವತಂತ್ರ ಭಾರತದ ನೀಲಿ ನಕ್ಷೆಯಾಗಿ ಗುರುತಿಸಿರುವುದು ಗಮನಾರ್ಹ. ಕಾಯ್ದೆಭಂಗ ಚಳವಳಿ ಮತ್ತು ಇತರ ಹೋರಾಟಗಳು ಸೂಕ್ಷ್ಮ ಅಧ್ಯಯನದ ಜೊತೆಗೆ ಸಮಗ್ರವಾಗಿ ನೋಡುವ ಬಗ್ಗೆ ಹೊಸ ಆಯಾಮಗಳನ್ನು ಇಲ್ಲಿ ತೆರೆದಿಟ್ಟಿದೆ. ಇದರ ಪರಿಣಾಮವು 1942ರ ಭಾರತ ಬಿಟ್ಟು ತೊಲಗಿ ಸಂದರ್ಭದ ಹೊತ್ತಿಗೆ ಇನ್ನೂ ಹೆಚ್ಚಾಗಿದ್ದದ್ದನ್ನು ಹೇಳುತ್ತಲೇ ಸ್ವಾತಂತ್ರ್ಯ ನಂತರ ಈ ವಾಗ್ದಾನಗಳು ಈಡೇರಿವೆಯೇ, ಅದರ ಪರೀಕ್ಷೆ ಅಗತ್ಯವೆನ್ನುತ್ತಾ ಪ್ರಸ್ತುತ ರಾಜಕಾರಣದೊಡನೆ ಸಂಬಂಧ ಕಲ್ಪಿಸುವುದರೊಂದಿಗೆ ಪ್ರಬಂಧ ಕೊನೆಗೊಳ್ಳುವುದು.

ಐದನೇ ಅಧ್ಯಾಯ ಎಡಪಂಥ ಮತ್ತು ರಾಷ್ಟ್ರೀಯ ಹೋರಾಟ ಈ ಕೃತಿಯ ಮೂಲ ಜೀವಾಳ. ಉಳಿದ ಪಠ್ಯಗಳಲ್ಲಿ ಎಡಪಂಥೀಯ ವಿಚಾರಧಾರೆ, ಹೋರಾಟಗಳು ಪೂರಕವಾಗಿ ಸಮಕಾಲೀನ ಹೋರಾಟಗಳ ವಿಹಂಗಮ ನೋಟದ ರೂಪದಲ್ಲಿ ಚರ್ಚೆಯಾದರೆ, ಇಲ್ಲಿ ನೇರವಾಗಿ ಅದರ ಕೊಡುಗೆಗಳೇ ಚರ್ಚಿತವಾಗುವುದು. ಹನ್ನೊಂದು ಹಂತಗಳಲ್ಲಿ ಭಾರತದಲ್ಲಿ ಎಡಪಂಥೀಯ ಪಕ್ಷಗಳ ಬೆಳವಣಿಗೆ, ರಾಷ್ಟ್ರೀಯ ಹೋರಾಟದಲ್ಲಿ ಅದರ ಪ್ರಭಾವ ಮತ್ತು ಜಾಗತಿಕ ವಲಯದಲ್ಲಿ ಉಂಟಾಗುತ್ತಿದ್ದ ಬದಲಾವಣೆಗಳು, ಅದರಲ್ಲಿಯೂ ವಿಶೇಷವಾಗಿ ರಷ್ಯ ಮತ್ತು ಕಮಿನ್‌ಟರ್ನ್‌ಗಳೊಂದಿಗೆ ಹೊಂದಿರುವ ಎಲ್ಲ ಅಂಶಗಳ ಒಂದು ಸಮಷ್ಟಿ ರೂಪವಿದು. ಕಮ್ಯುನಿಸ್ಟರು ಸಂಘಟಿಸಿದ ಚಳವಳಿಗಳು, ಕೋಮುವಾದ ಮತ್ತು ಕೋಮು ಸಮಸ್ಯೆ ಕುರಿತ ವಿಚಾರಗಳ ವಿಹಂಗಮ ನೋಟವಿದೆ. ಸ್ವತಂತ್ರ ನಂತರ ಸಾಮ್ರಾಜ್ಯಶಾಹಿ ನೀತಿ ಕೊನೆಗೊಳ್ಳುವ ಬದಲು ಬಹುಪಾಲು ಬೇರೆ ರೂಪದಲ್ಲಿ ಆಸ್ತಿವಂತರ ಕೈಸೇರಿರುವ ವಿಪರ್ಯಾಸ ಮತ್ತು ಅದರ ವಿರುದ್ಧ ಹೋರಾಟದ ಪಣ ಮುಂದುವರೆಯಬೇಕಾದ ಅಗತ್ಯದ ಕುರಿತು ಗಮನಸೆಳೆಯುವರು. ಪ್ರಬಂಧವು ಈ ಮಹಾ ಆಂದೋಲನದಲ್ಲಿ ಕಮ್ಯುನಿಸ್ಟರ ಬಲಿ, ತ್ಯಾಗ ಗಮನಿಸಬೇಕೆಂದು

ಕೊನೆಗೊಳ್ಳುವುದು. ಹೀಗೆ ಈ ಅಧ್ಯಾಯವು ಚರಿತ್ರೆ ರಚನೆಯಲ್ಲಿ ಆಗಿರುವ ಮತ್ತೊಂದು ಬಗೆಯ ರಾಜಕಾರಣದೆಡೆಗೆ ಮುಖಮಾಡಿಸುವುದು.

ಈ ಐದು ಲೇಖನಗಳಲ್ಲಿ ಅತ್ಯಂತ ಹೆಚ್ಚು ಸ್ಪಷ್ಟತೆಯನ್ನು ಹೊಂದಿರುವ, ಓದುಗರನ್ನು ಅತಿ ಹೆಚ್ಚಾಗಿ ಸೆಳೆದಿಡುವ ಲೇಖನ ನೆಹರು ಅವರ ಐತಿಹಾಸಿಕ ಅಂತರ್ದೃಷ್ಟಿಯಾಗಿದೆ. ನೆಹರು ಅವರೇ ಬರೆದ ಕೃತಿಗಳನ್ನು, ಆಯಾ ಕಾಲಘಟ್ಟದ ಸಂದರ್ಭದ ಚೌಕಟ್ಟಿನಲ್ಲಿ ವಿಶ್ಲೇಷಿಸುವ ವಿಮರ್ಶೆ ಸಹ. ಇದಕ್ಕೆ ಪೂರಕವಾಗಿ 1995ರಲ್ಲಿ ಬರೆದ 'ಗಾಂಧೀಜಿ: ಬದುಕು' ಲೇಖನದಲ್ಲಿ ಈ ಶೈಲಿಯ ಆರಂಭವನ್ನು ಕಾಣಬಹುದು. ಇದರಲ್ಲಿಯೂ ಗಾಂಧೀಜಿ ಅವರ ಹಿಂದ್ ಸ್ವರಾಜ್, ಆತ್ಮ ಚರಿತ್ರೆ/ಆತ್ಮಕಥೆ ಮತ್ತು ಪತ್ರಿಕೆಯಲ್ಲಿ ಪ್ರಕಟಿತ ಅನೇಕ ಲೇಖನಗಳನ್ನು ಪೂರಕವಾಗಿ ಬಳಸಲಾಗಿದೆ. ಆದರೆ ನೆಹರು ಕುರಿತ ಪ್ರಬಂಧವು ಹೆಚ್ಚು ಪರಿಪಕ್ವವಾಗಿದೆ. ಚರಿತ್ರೆ ಮತ್ತು ಚರಿತ್ರೆ ಲೇಖನಶಾಸ್ತ್ರದ ನೆಲೆಯಲ್ಲಿ ರಾಷ್ಟ್ರೀಯ ಹೋರಾಟದ ವಿಭಿನ್ನ ನೆಲೆಗಳನ್ನು ವಿಶ್ಲೇಷಿಸುವ ಸಮಗ್ರ ಕೃತಿ ಇದಾಗಿದೆ.

ಕೊನೆಯದಾಗಿ, ಕೃತಿಯ ಕನ್ನಡ ಅನುವಾದವು ಯಾವುದೇ ಅಡೆತಡೆಗಳಿಲ್ಲದೆ, ಅನುವಾದಿತ ಕೃತಿ ಎಂಬ ಅನುಮಾನವೂ ಬಾರದಂತೆ ಸರಾಗವಾಗಿ ಓದಿಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ. ಅನುವಾದಕ ಎಂ. ಅಬ್ದುಲ್ ರೆಹಮಾನ್ ಪಾಷ ಅವರು ಕನ್ನಡ ಸಾಹಿತ್ಯ ಕೃಷಿಯ ಮೂಲಕ ಕನ್ನಡದ ಓದುಗರಿಗೆ ಪರಿಚಿತರಾಗಿರುವವರು. ಅವರೇ ಅನುವಾದಕರ ನುಡಿಯಲ್ಲಿ ಹೇಳಿರುವಂತೆ "ಒಂದು ಕೃತಿಯನ್ನು ಮತ್ತು ಅದರ ಲೇಖಕರನ್ನು ಆಳವಾಗಿ ತಿಳಿಯಲು ಇರುವ ಒಂದು ಅತ್ಯುತ್ತಮ ಮಾರ್ಗವೆಂದರೆ ಆ ಕೃತಿಯನ್ನು ಅನುವಾದಿಸುವುದು ಎಂದು ಕಾಣುತ್ತದೆ. ಬರೀ ಕೃತಿಯ ಅಂತರಾಳವನ್ನಷ್ಟೇ ಜಾಲಾಡಿದರೆ ಸಾಕಾಗುವುದಿಲ್ಲ; ಜೊತೆಗೆ ಅದರ ಕೃತಿಕಾರರ ಮನಸ್ಸು, ಮನೋಭಾವಗಳನ್ನು ಗಾಢವಾಗಿ ಅರಿತಾಗಲೇ ಆ ಕೃತಿಯ ಪರಿಪೂರ್ಣ ಅನುವಾದ ಸಾಧ್ಯವಾಗುವುದು" ಎಂಬುದು ಅನುವಾದದಲ್ಲಿ ಗುರುತಿಸಬಹುದಾಗಿದೆ. ಅನುವಾದದಲ್ಲಿ ಮೂಲ ಲೇಖಕರ ವಿಚಾರಗಳಿಗೆ ದಕ್ಕೆ ಬಾರದಂತೆ ಅನುವಾದಿಸುವುದು ದೊಡ್ಡ ಸಾಹಸವೇ. ಅದರೊಡನೆ ಅನುವಾದಕರ ಸ್ವಂತಿಕೆಯ ಛಾಪನ್ನು ಮೂಡಿಸುವುದು ನಿಜವಾಗಲೂ ಶ್ಲಾಘನೀಯವಾದುದು. ಇರ್ಫಾನ್ ಹಬೀಬ್ ಅವರ ಗಂಭೀರ ಪ್ರಬಂಧಗಳನ್ನು ಎಲ್ಲ ಬಗೆಯ ಓದುಗರಿಗೂ ತಲುಪಿಸುವ ಉದ್ದೇಶದಿಂದ ಅಬ್ದುಲ್ ರೆಹಮಾನ್ ಪಾಷಾ ಅವರು ಅನೇಕ ಕಡೆಗಳಲ್ಲಿ ಅವುಗಳಿಗೆ ಅಡಿ ಟಿಪ್ಪಣಿಗಳನ್ನು ನೀಡಿದ್ದಾರೆ. ಇದೆಲ್ಲದರ ನಡುವೆಯೂ ಕೃತಿಯಲ್ಲಿ ಮುದ್ರರಾಕ್ಷಸನ ಹಾವಳಿ ಓದುಗರ ತಾಳ್ಮೆಯನ್ನು ಪದೇ ಪದೇ ಪರಿಶೀಲಿಸುತ್ತದೆ. ಉದಾಹರಣೆಗೆ, ಮೊದಲ ಅಧ್ಯಾಯದ ಪುಟ 20ರಲ್ಲಿ 1824 ಎಂದಿದೆ ಅದು 1924, ಪುಟ 22ರಲ್ಲಿ 1828 ಬದಲಿಗೆ 1928 ಆಗಬೇಕಿತ್ತು, ಪುಟ 27ರಲ್ಲಿರುವ 1949 ಬದಲು 1940 ಹಾಗೂ ಅದೇ ಪುಟದಲ್ಲಿ 1914ರ ಕೊನೆಯಲ್ಲಿ ಜಪಾನ್ ಯುದ್ಧ ಪ್ರವೇಶ ಎಂದಿರುವುದು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅದು 1941 ಎಂದಾಗ ಬೇಕಿತ್ತು. ಎರಡನೇ ಅಧ್ಯಾಯದಲ್ಲಿಯೂ ಇದೇ ರೀತಿ ಹಲವೆಡೆ ಇಸವಿಗಳು ದೋಷಪೂರಿತವಾಗಿದ್ದು ಓದುಗರಲ್ಲಿ ಗೊಂದಲ ಮೂಡಿಸುತ್ತವೆ. ಆದರೆ, ಕನೆಯ ಎರಡು ಅಧ್ಯಾಯದಲ್ಲಿ ಇಂತಹ ಯಾವ ದೋಷಗಳು ನುಸುಳಿಲ್ಲದಿರುವುದು ವಿಶೇಷ. ಇವುಗಳನ್ನು ಹೊರತು ಪಡಿಸಿದರೆ ಕನ್ನಡದ ಓದುಗರಿಗೆ ಅನುವಾದದ ಮೂಲಕ ದೊರೆತಿರುವ ಅತ್ಯುತ್ತಮ ಕೃತಿಗಳಲ್ಲಿ ಇದೂ ಒಂದು.

■

ಶಾಸನತಜ್ಞ ಎಂ. ಹನುಮಂತರಾಯರ ಸಂಗ್ರಹದಲ್ಲಿದ್ದ ಕೆಳದಿ ಅರಸರ ಕಾಲದ ಕೆಲವು ಶಾಸನಗಳು

❑ ಎಸ್. ಕಾರ್ತಿಕ್
65, 3 ನೆಯ ಅಡ್ಡರಸ್ತೆ, ಶಿಕ್ಷಕರ ಬಡಾವಣೆ, 1 ನೆಯ ಹಂತ,
ಕುಮಾರಸ್ವಾಮಿ ಬಡಾವಣೆ ಅಂಚೆ,
ಬೆಂಗಳೂರು-560111
saigottan@gmail.com

ಕರ್ನಾಟಕದಲ್ಲಿ ಕೆಳದಿ ಅರಸರ ಆಳ್ವಿಕೆಯ ಕಾಲವು ಸುವರ್ಣಯುಗವೆಂದು ಕರೆಯುವುದಕ್ಕೆ ಯೋಗ್ಯವಾದುದಾಗಿದೆ. ಈ ಅರಸರು ಸಾಹಿತ್ಯ, ಸಂಸ್ಕೃತಿಗೆ ನೀಡಿರುವ ಕೊಡುಗೆಯು ಗಮನಾರ್ಹವಾದುದು. ಈ ಮನೆತನದ ಬಸವಪ್ಪನಾಯಕನು ಸ್ವತಃ ವಿದ್ವಾಂಸನಾಗಿದ್ದು *ಶಿವತತ್ತ್ವ ರತ್ನಾಕರ* (ಕ್ರಿ.ಶ. 1697-1714) ಎಂಬ ವಿಶ್ವಕೋಶಾತ್ಮಕ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಕೆಳದಿ ಅರಸರ ಕಾಲದಲ್ಲಿ ಬರೆಯಲಾದ ಶಿಲಾಶಾಸನ, ತಾಮ್ರಶಾಸನ, ನಿರೂಪಗಳು ಬಹಳವಾಗಿ ದೊರೆತಿವೆ. ಇವೆಲ್ಲವೂ ಬಲುಮಟ್ಟಿಗೆ ಮೂರು ನಾಲ್ಕು ಬೇರೆ ಬೇರೆ ಸಂಪುಟಗಳಲ್ಲಿ ಪ್ರಕಟವಾಗಿವೆ[1]. ಇಷ್ಟಾದರೂ ಇನ್ನೂ ಅನೇಕವು ಬೆಳಕು ಕಂಡಿಲ್ಲ. ಪತ್ರಿಕೆಗಳು, ಅಭಿನಂದನ ಗ್ರಂಥಗಳು, ಸಂಶೋಧನ ಕೃತಿಗಳು ಹಾಗೂ ಇತರ ಸಂಬಂಧಿತ ಗ್ರಂಥಗಳಲ್ಲಿ ಪ್ರಕಟವಾಗಿರುವ ಶಾಸನಗಳು ಒಂದೆಡೆ ಸಂಕಲಿತವಾಗಿಲ್ಲ[2]. ಹೊಸ ಶಾಸನಗಳು ಕೂಡ ಲಭಿಸುತ್ತಲೇ ಇವೆ. ಪ್ರಕೃತ ಲೇಖನದಲ್ಲಿ ಕೆಳದಿಯ ಅರಸರ ಕಾಲಕ್ಕೆ ಸೇರುವ ಕೆಲವು ಶಿಲಾಶಾಸನಗಳನ್ನು ಪ್ರಕಟಿಸಲಾಗಿದೆ. ಈಗ ಪ್ರಕಟವಾಗುತ್ತಿರುವ ಈ ಶಿಲಾಶಾಸನಗಳ ಪಾಠವು ಭಾರತದ ಖ್ಯಾತ ಪುರಾತತ್ತ್ವ ವಿದ್ವಾಂಸರಾದ ಎಸ್. ನಾಗರಾಜು ಅವರ ಕೈಬರಹದಲ್ಲಿದ್ದು, ಮೈಸೂರು ಪುರಾತತ್ತ್ವ ಇಲಾಖೆಯಲ್ಲಿ ಶಾಸನ ತಜ್ಞರಾಗಿ, ಇಲಾಖೆಯ ಉಪನಿರ್ದೇಶಕರಾಗಿ ಸೇವೆಸಲ್ಲಿಸಿದ್ದ ಹಿರಿಯ ವಿದ್ವಾಂಸರಾದ ಎಂ. ಹನುಮಂತರಾಯರ ಸಂಗ್ರಹದಲ್ಲಿದ್ದ ಹಸ್ತಪ್ರತಿಯಲ್ಲಿದೆ. ಈ ಕಾಗದದ ಹಸ್ತಪ್ರತಿಯು ಕಂದುಬಣ್ಣದಾಗಿದ್ದು ಮುಟ್ಟಿದರೆ ಪುಡಿಪುಡಿಯಾಗುತ್ತದೆ. ಈ ಶಾಸನಗಳ

ಪಾಠವನ್ನು 1958–1964 ರ ಸುಮಾರಿನಲ್ಲಿ ಸಿದ್ಧಪಡಿಸಲಾಗಿದೆ. ಇವುಗಳಲ್ಲಿ ಎರಡು ಶಾಸನಗಳು ಮಾತ್ರ ನಾಗರೀ ಲಿಪಿಯಲ್ಲಿದ್ದು, ಉಳಿದವು ಕನ್ನಡ ಲಿಪಿಯಲ್ಲಿವೆ. ಈ ಶಾಸನಗಳ ಭಾಷೆ ಸಂಸ್ಕೃತ, ಕನ್ನಡವಾಗಿದೆ. ಆಗ ಎಸ್. ನಾಗರಾಜು ಅವರು ಮೈಸೂರು ಪುರಾತತ್ತ್ವ ಇಲಾಖೆಯಲ್ಲಿ ಹನುಮಂತರಾಯರ ನೇತೃತ್ತ್ವದಲ್ಲಿ ಶಾಸನ ಸಹಾಯಕರಾಗಿ, ಸಂಶೋಧನ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಎಂ. ಹನುಮಂತರಾಯರು[3] ಮೈಸೂರು ಪುರಾತತ್ತ್ವ ಇಲಾಖೆಯಲ್ಲಿ ಶಾಸನತಜ್ಞರಾಗಿ ನಂತರ ಉಪನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿಯ ನಂತರ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಯೋಜನೆಯಾದ *ಎಪಿಗ್ರಾಫಿಯಾ ಕರ್ನಾಟಿಕ* ಪರಿಷ್ಕೃತ 1 ರಿಂದ 8 ವರೆಗಿನ ಶಾಸನ ಸಂಪುಟಗಳ ಸಂಬಂಧದಲ್ಲಿ ಉಪಶಾಸನ ತಜ್ಞರಾಗಿ ಸೇವೆಸಲ್ಲಿಸಿದರು (ಕ್ರಿ.ಶ. 17–12–1971 ರಿಂದ 30–11–1980 ರ ವರೆಗೆ). ಹನುಮಂತರಾಯರು ನಿಧನರಾಗುವ (ಕ್ರಿ.ಶ. 20–5–2007) ಮೊದಲು ತಮ್ಮಲ್ಲಿದ್ದ ಕೆಲವು ಶಾಸನಪಾಠಗಳನ್ನು *ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕೃತ ಸಂಪುಟ*ಗಳ ಯೋಜನೆಯಲ್ಲಿಯೇ ಶಾಸನ ತಜ್ಞರಾಗಿ ಕಾರ್ಯನಿರ್ವಹಿಸಿ ಈಗ ನಿವೃತ್ತರಾಗಿರುವ ಎಚ್.ಎಂ. ನಾಗರಾಜರಾಯರಿಗೆ ಕೊಟ್ಟರು. ಈ ಸಂಗ್ರಹದಲ್ಲಿದ್ದ ಪ್ರಕೃತ ಶಾಸನಗಳ ಪಾಠ ವನ್ನೊಳಕೊಂಡ ಹಸ್ತಪ್ರತಿಯನ್ನು ಎಚ್. ಎಂ. ನಾಗರಾಜರಾಯರು ಪ್ರಕೃತ ಲೇಖಕನಿಗೆ ಪ್ರಕಟನೆಗಾಗಿ ವಿಶ್ವಾಸದಿಂದ ಕೊಟ್ಟಿರುತ್ತಾರೆ. ಇದಕ್ಕಾಗಿ ನಾಗರಾಜ ರಾಯರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಶಾಸನಪಾಠವನ್ನು ಹಸ್ತಪ್ರತಿಯಲ್ಲಿರು ವಂತೆಯೇ ಯಥಾವತ್ತಾಗಿ ದಾಖಲಿಸಲಾಗಿದ್ದು ಅಗತ್ಯವಿರುವಡೆ ಮಾತ್ರ ಪುಷ್ಪಾವರಣದಲ್ಲಿ ಕೆಲವು ಟಿಪ್ಪಣಿಗಳನ್ನು ನೀಡಲಾಗಿದೆ. ಈ ಟಿಪ್ಪಣಿಗಳ ಭಾಗ ಮಾತ್ರ ಪ್ರಕೃತ ಲೇಖಕನದ್ದಾಗಿದೆ.

ಶಾಸನಗಳು ಲಭ್ಯವಾದ ಸ್ಥಳ : ಈ ಶಾಸನಗಳು ಲಭ್ಯವಾದ ಸ್ಥಳದ ವಿವರ ಹನುಮಂತರಾಯರ ಸಂಗ್ರಹದ ಹಸ್ತಪ್ರತಿಯಲ್ಲಿ ದಾಖಲಾಗಿಲ್ಲ. ಆದರೂ ಈ ಶಾಸನಗಳು ಎಲ್ಲಿವೆ ಎಂಬುದನ್ನು ತಿಳಿಯಬಹುದಾಗಿದೆ. *ಇತಿಹಾಸ ದರ್ಶನ*ದಲ್ಲಿ ಜಿ. ಕೆ. ದೇವರಾಜಸ್ವಾಮಿ ಅವರು 'ತೀರ್ಥಹಳ್ಳಿ ರಾಮ ಮಂಟಪದ ಸುತ್ತಮುತ್ತಲಿನ ಅಪ್ರಕಟಿತ ಶಾಸನಗಳು' ಎಂಬ ಲೇಖನವನ್ನು ಛಾಯಾಚಿತ್ರಗಳ ಸಹಿತ ಪ್ರಕಟಿಸಿದ್ದಾರೆ[4]. ಈ ರಾಮಮಂಟಪವು ಇಂದಿನ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿದೆ. ಇಲ್ಲಿ ತುಂಗಾನದಿ ಹರಿಯುತ್ತದೆ. ಇಲ್ಲಿ ನೈಸರ್ಗಿಕವಾಗಿ ನಿರ್ಮಿತವಾದ ಕುಳಿಯಲ್ಲಿ ನೀರು ಹರಿಯುತ್ತಿದ್ದು ತೀರ್ಥವೆನಿಸಿಕೊಂಡಿದೆ. ಇದರ ಮೇಲ್ಭಾಗದ ಬಂಡೆಯ ಮೇಲೆ ಕಲ್ಲಿನ ಮಂಟಪವಿದೆ. ಈ ಬಂಡೆಯಲ್ಲಿ ಆಂಜನೇಯನ ಉಬ್ಬು ಶಿಲ್ಪವಿದ್ದು ಭಕ್ತರ ರೇಖಾಚಿತ್ರಗಳ ಸಹಿತ ನೂರಾರು ಶಾಸನಗಳಿವೆ. ಇವು ಕೆಳದಿಯ ಅರಸರು, ರಾಣಿ ಚೆನ್ನಮ್ಮ ಮತ್ತು ಕೆಳದಿ ಅರಸರ ಪರಿವಾರದವರ ಶಾಸನಗಳೇ ಬಲುಮಟ್ಟಿಗೆ ಆಗಿವೆ. ಈ ಶಾಸನಗಳನ್ನು ಹರಕೆಯ ಶಾಸನಗಳು, ಭಕ್ತ ಶಾಸನಗಳು ಎಂಬುದಾಗಿ ಕರೆಯುವ ರೂಢಿಯುಂಟು. ಇಲ್ಲಿ ದಾಖಲಾಗಿರುವ ಅನೇಕ ವ್ಯಕ್ತಿಗಳ ಹೆಸರುಗಳು ಬೇರೆ ಬೇರೆ ಶಾಸನಗಳು, ನಿರೂಪಗಳಲ್ಲಿಯೂ ಕಂಡುಬರುತ್ತಿ ರುವುದು ಗಮನಾರ್ಹ ಅಂಶವಾಗಿದೆ. ಈ ಶಾಸನಗಳಲ್ಲಿ ಓದಲು ಸಾಧ್ಯವಾದವುಗಳನ್ನು ಮಾತ್ರ ಶ್ರಮವಹಿಸಿ ಜಿ. ಕೆ. ದೇವರಾಜಸ್ವಾಮಿ ಅವರು

ಪ್ರಕಟಿಸಿದ್ದಾರೆ. ಹನುಮಂತರಾಯರ ಸಂಗ್ರಹದ ಹಸ್ತಪ್ರತಿಯಲ್ಲಿನ ಶಾಸನಗಳೂ ದೇವರಾಜಸ್ವಾಮಿ ಅವರು ಪ್ರಕಟಿಸಿರುವ ಶಾಸನಗಳೂ ಒಂದೇ ಆಗಿರುವ ಕಾರಣ ಹನುಮಂತರಾಯರ ಹಸ್ತಪ್ರತಿಯಲ್ಲಿನ ಶಾಸನಗಳು ತೀರ್ಥಹಳ್ಳಿ ರಾಮಮಂಟಪದ ಬಳಿಯಿರುವ ಶಾಸನಗಳೆಂದು ಖಚಿತವಾಗಿ ಹೇಳಬಹುದು. ಬಹಳ ಹಿಂದೆಯೇ ಈ ಶಾಸನಗಳ ಪಾಠವನ್ನು ಹನುಮಂತರಾಯರು ಸಿದ್ಧಪಡಿಸಿದ್ದರೂ ಪ್ರಕಟಿಸಲು ಸಾಧ್ಯವಾಗಿರಲಿಲ್ಲವೆಂದು ಕಾಣುತ್ತದೆ. ಈ ಕಾರಣದಿಂದ ಇವುಗಳನ್ನು ಮೊದಲು ಪ್ರಕಟಿಸಿದ ಶ್ರೇಯಸ್ಸು ಜಿ. ಕೆ. ದೇವರಾಜಸ್ವಾಮಿಯವರದ್ದಾಗಿದೆ. ಹನುಮಂತರಾಯರ ಸಂಗ್ರಹದ ಪಾಠಕ್ಕೂ ಜಿ. ಕೆ. ದೇವರಾಜಸ್ವಾಮಿ ಅವರ ಪಾಠಕ್ಕೂ ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳಿಗೆ ಪ್ರಧಾನ ಕಾರಣವೆಂದರೆ ಶಾಸನಗಳನ್ನು ಬಂಡೆಯ ಮೇಲೆ ಕೆತ್ತಿರುವ ರೀತಿ ಮತ್ತು ಅವುಗಳನ್ನು ಇಬ್ಬರು ವಿದ್ವಾಂಸರು ಓದಿರುವ ರೀತಿ ಎಂದು ಹೇಳಬಹುದಾಗಿದೆ. ಇದರಿಂದ ಎರಡೂ ಆಕರಗಳಲ್ಲಿನ ಶಾಸನಗಳ ಸಂಖ್ಯೆಯಲ್ಲಿ ಖಚಿತತೆ ಇಲ್ಲವಾಗಿದೆ. ಹನುಮಂತರಾಯರ ಹಸ್ತಪ್ರತಿಯಲ್ಲಿ ದೇವರಾಜಸ್ವಾಮಿ ಅವರು ಪ್ರಕಟಿಸಿರುವ ಎಲ್ಲ ಶಾಸನಗಳೂ ಇರುವಂತೆ ತೋರುವುದಿಲ್ಲ. ಕೆಲವು ಶಾಸನಗಳ ಪುನಾರಾವೃತ್ತಿಯೂ ಆಗಿದೆ. ಈ ಶಾಸನಗಳ ಭಾಷೆ ವಿಪರೀತ ಸ್ಖಾಲಿತ್ಯಗಳಿಂದ ಕೂಡಿದೆ. ಎಷ್ಟೋ ಕಡೆ ಆಶಯವೇ ಸ್ಪಷ್ಟವಾಗುವುದಿಲ್ಲ. ಹನುಮಂತರಾಯರ ಸಂಗ್ರಹದ ಪಾಠ ಇರುವುದರಲ್ಲಿ ಉತ್ತಮವಾಗಿದೆ. ಆದ ಕಾರಣ ಹನುಮಂತರಾಯರ ಸಂಗ್ರಹದ ಪಾಠಗಳನ್ನು, ದೇವರಾಜಸ್ವಾಮಿ ಅವರು ಪ್ರಕಟಿಸಿರುವ ಪಾಠಗಳನ್ನು ಇಟ್ಟುಕೊಂಡು ಮತ್ತೊಮ್ಮೆ ಮೂಲ ಶಾಸನಗಳನ್ನೇ ನೇರವಾಗಿ ಪರೀಕ್ಷಿಸಿದರೆ ಈ ಶಾಸನಗಳ ತೃಪ್ತಿಕರವಾದ ಪಾಠವನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಈ ಆಶಯದಿಂದಲೇ ಹನುಮಂತರಾಯರ ಹಸ್ತಪ್ರತಿಯ ಪಾಠವನ್ನು ಇಲ್ಲಿ ಪ್ರಕಟಿಸಲಾಗಿದ್ದು, ಇದು ಸಾಧ್ಯವಾದಷ್ಟು ಬೇಗ ಆಗಬೇಕಾದ ಕಾರ್ಯವೆಂದು ಒತ್ತಿ ಹೇಳಬೇಕಾಗಿದೆ.

ಶಾಸನ – 1

ಶ್ರೀ ಕೆಳದಿ ಚೆಂನಂಮಾಜಿಯವರ ಪಾದವೆ ಗತ್ತಿ

ಶಾಸನ – 2

ಮಲೆಬಸವಂಮನವರು
ಕೆಂಚಂಮನವರು ಭದ್ರಪ್ಪ
ರಾಯಸ್ತ ವೆಂಕೈಯ್ಯನ ಬಿಂನಹಾ
ಬಯಲೂರ ಸೀನಪ್ಪನ ಬಿಂನಹಾ
ಯಿದ ಬರಸಿದಾತ್ತ ಹಿರಿಯಂಣ್ಣೆಯ ತಂಮ
(ಸಿಂಗಾರಾಯ)

ಶಾಸನ – 3

ಸೂರ್ರೈಯ । ರಾಯಸ್ತ ಶಂಕರ ನಾ
ರಾಣ್ಣೈಯ ಮಗ ಚಂನಪ

ಶಾಸನ – 4

ಊಳಿಗದ ಸೀನಪ್ಪನ
ಬೋವ ಗಿರಿಯಪ್ಪನ
ನಮಸ್ಕಾರಾ

ಶಾಸನ – 5

ತಿರುಮಲೈಯನ ಬಿಂನಹ ॥
ಮಗ ಸೂರಂಣನ ಬಿನಂಹ ।
ನಾಗಪ್ಪನ ಬಿಂನಹಾ

ಶಾಸನ – 6

ಕರ ˌ . . . ನವರ ಮಗ ವೆಂಕಪ್ಪಯಂನನ ಬಿಂನಹಾ

ಶಾಸನ – 7

ಸಿಧಾರ್ತಿ ಸಂ ಚೈ ಬ 5 ಲು
ನಂಜುಂಡಯ ತಾಇ ಮಹಾಲಕ್ಷಮಂಮ ಶರಜಾ ಲಿಂಗಯನ ಬಿಂನಹಾ

{ಸಿದ್ಧಾರ್ಥಿ ಸಂವತ್ಸರ ಚೈತ್ರ ಬಹುಳ 5 (=ಪಂಚಮಿ) ಚಾಂದ್ರಮಾನ ಅಥವಾ ಜೂಲಿಯನ್ ಪಂಚಾಂಗದಂತೆ ಕೆಳಗಿನ ತೇದಿಗಳಿಗೆ ಸರಿಹೊಂದುತ್ತದೆ. ವಾರವನ್ನು ಹೇಳದೆ ಇರುವುದರಿಂದ ಈ ತೇದಿಗಳಲ್ಲಿ ಯಾವುದು ಸರಿ ಎಂದು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಈ ಶಾಸನಗಳ ಲಿಪಿ ಕ್ರಿ.ಶ. ಸು 17 ಶತಮಾನ ಎಂದು ತಿಳಿಯಲು ಸಾಧ್ಯವಿದೆ.

ಕ್ರಿ.ಶ. 25–3–1619, ಬುಧವಾರ
ಕ್ರಿ.ಶ. 22–3–1679, ಶುಕ್ರವಾರ }

ಶಾಸನ – 8

ನಾರಣಪನ ಬಿಂನಹ

ಶಾಸನ – 9

ರಾಯಸ್ತ ವೆಂಕಟನರಸಪ್ಪಯ್ಯನ ಮೊಂಮಗ ಹರಿ
ಹರಿಯಮ್ಮಯ್ಯನ ಬಿಂನಹ

ಶಾಸನ – 10

ಕೆಳಧಿ ಚಂನಮ್ಮಾಜಿಗೆ
ಪ್ರಭವ ಸಂವತ್ಸರದ ಪುಷ್ಯ ಬ 30 ಭಾನುವಾರ
ಶರಜರಾಯರ ಮಗ ಸುಬ್ಬುನಿಸಾ ಶರಜಾ ಶಂ
ಕರನಾರಾಯಣಯನವರ
ತಂಮ ತಿರುಮಮಲೈಯನ ಮಗ ಶಂಕರನಾರಾಯಣ
ಶರಜಾರಾಯನು ತುಂಗಭದ್ರೆಗೆ ಮಾಡುವ ನಮಸ್ಕಾರ
ಶರಜಾ ನರಸಂಮನ ನಮಸ್ಕಾರ . ಸಂಕಮನ
ನಮಸಾರ

{ಪ್ರಭವ ಸಂವತ್ಸರದ ಪುಷ್ಯ ಬಹುಳ 30 (= ಅಮಾವಾಸ್ಯೆ) ಭಾನುವಾರವು ಚಾಂದ್ರಮಾನ ಅಥವಾ ಜೂಲಿಯನ್ ಪಂಚಾಂಗದಂತೆ ಕ್ರಿ.ಶ. 23–1–1688, ಭಾನುವಾರಕ್ಕೆ ಸರಿಹೊಂದುತ್ತದೆ}

ಶಾಸನ – 11

ಹುಲಿಕಲ್ಲ ರಾಮಪ್ಪನ
ಹೆಂಡತಿ ಮಾಹಾಲಕ್ಷ್ಮಿ
ಮಗ ಶಂಕರನಾರಾಯಣನ ನಮಸ್ಕಾರ

ಶಾಸನ – 12

ರಂಗಮ್ಮ ಸದಾಶಿವ
ಮಗ ಐಗಳ ಕೃಷ್ಣಯನ ನಮಸ್ಕಾರ

ಶಾಸನ – 13

ಅ . . ರ್ತ್ಥಿ ಗಂಗಾಧರ
ಕಾಮನದುರ್ಗ
ದ ಗಂಗಧರ
ನಮಸ್ಕಾರ

ಶಾಸನ – 14

ಕಾಮನದುರ್ಗ
ದ ಗಂಗಾಧರ
ನಮಸ್ಕಾರ

ಶಾಸನ – 15

ಪಂಲಿದ ತಿಮಪ್ಪ
ಮಗ ಶ್ರೀನಿವಾಸೈಯ

ಶಾಸನ – 16

. . ಭವ
ಮಗ ಕೃಷ್ಣಣನ
ಬಿಂನಹ

ಶಾಸನ – 17

ಶರಜಾ ಹ
ರಿಯಯನ
ಬಿಂನಹ

ಶಾಸನ – 18

ದಾದಾಜೀ
ವೀಸ್ಲುಯೀ
ಪಕ್ರ . . ಪ್ಪಾ
ನಮಸ್ಕಾರ

ಶಾಸನ – 19

ದೇವಗಳ ರಾಮಯನ ಬಿಂನಹ

ಶಾಸನ – 20

ಲಕ್ಷ್ಮಿಪತಿ ಬಿಂನ[ಹ]

ಶಾಸನ – 21

ಪರಮಕಿಲು ಕ್ರುಷ್ಣಯ ಬಿಂನಹಾ

ಶಾಸನ – 22

. ದು ವೆಂಕಟ
ಯ

ಶಾಸನ – 23

ಸುನೆರ್ಲ
ಪುಟ್ಟಪ್ಪ

ಶಾಸನ – 24

ಲಕ್ಷ್ಮೀ ಗೋಪಾಲ ದಾಸ
ಗೋದಾವರಿ ರಾಮ
ಸದಾಧ್ಯಾನಿ

{ಈ ಶಾಸನವು ನಾಗರೀ ಲಿಪಿಯಲ್ಲಿದೆ}

ಶಾಸನ – 25

ಸಂವತ್ಸರ
. . ಂಗಾರದ
. . ತಿಮರ. .
. . . .
. . .
ಚೆಂನಂಮ
ನಂಜ್ಜೈಯ .
ಯರ ನಂಜ್ಜೈಯ
ಶಿವಪ್ಪ . . . . .
. .
ರಾಯಸ್ತ ವೆಂಕಟನರಸಪ್ಪೈಯನ ಮೊಂಮಗ ಹರಿ
ಯಪ್ಪೆಯನ ಬಿಂನಹ .

ಶಾಸನ – 26

ನಾರಣಪನ ಬಿಂನಹ

ಶಾಸನ – 27

ಅಂಬಿಕಾಶರಣಂ ಗತಾ
ಸಸ್ತ್ರೀಗೋಪಾಲೋಹಂ ವಂದೇ

{ಈ ಶಾಸನವು ನಾಗರೀ ಲಿಪಿಯಲ್ಲಿದೆ}

ಶಾಸನ – 28

ಅಂಬಿಕಾಶರಣಂ ಗತಾ
ಸಸ್ತ್ರೀಗೋಪಾಲೋಹಂ ವಂದೇ

ಶಾಸನ – 29

ಬಿದುರೂರ ಸೂರಂಣ

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಕೆಳದಿ ಅರಸರ ಶಾಸನಗಳು, ನಿರೂಪಗಳು ಪ್ರಕಟವಾಗಿರುವ ಪ್ರಮುಖ ಸಂಪುಟಗಳ ವಿವರವನ್ನು ಕೆಳಗೆ ನೀಡಲಾಗಿದೆ.

   (ಅ) *ಕೆಳದಿ ಅರಸರ ಶಾಸನಸಂಪುಟ* – (ಸಂ) ಕೆಳದಿ ವೆಂಕಟೇಶ ಜೋಯಿಸ್, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ–1991 ; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2011

   (ಆ) *ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು {ಸಂಪುಟ–1}* – (ಸಂ) ಕೆಳದಿ ವೆಂಕಟೇಶ ಜೋಯಿಸ್, ಜಿ.ವಿ. ಕಲ್ಲಾಪುರ, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು–2004

   (ಇ) *ಕೆಳದಿ ಕಾಲದ ಐತಿಹಾಸಿಕ ದಾಖಲೆಗಳು {ಸಂಪುಟ–2}* – (ಸಂ) ಕೆಳದಿ ವೆಂಕಟೇಶ ಜೋಯಿಸ್, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು–2006

   (ಈ) *The Records of the Sringeri Matha Relating to Keladi* - (Ed) A.K. Shastry, Keladi Museum Historical Research Bureau, Keladi- 2001

   (ಉ) *ಕೆಳದಿ ಅರಸರ ಮುಖ್ಯ ಶಾಸನಗಳ ಸಾರಾಂಶ* – ಅ. ಸುಂದರ, ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ, ಸಂಪುಟ–1, {ಅನುಬಂಧ–5} ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1986, ಪುಟ 59–128

   (ಋ) *ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–7,* ಭಾಗ–1 (ಶಿವಮೊಗ್ಗ), (ಸಂ) ಬಿ.ಎಲ್.ರೈಸ್, ಮೈಸೂರು ಪುರಾತತ್ತ್ವ ಇಲಾಖೆ, ಬೆಂಗಳೂರು–1902

   (ಎ) *ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–8,* ಭಾಗ–2 (ಶಿವಮೊಗ್ಗ), (ಸಂ) ಬಿ.ಎಲ್.ರೈಸ್, ಮೈಸೂರು ಪುರಾತತ್ತ್ವ ಇಲಾಖೆ, ಬೆಂಗಳೂರು–1904

   (ಏ) *ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–13* (ಶಿವಮೊಗ್ಗ ಜಿಲ್ಲೆ. ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ ತಾಲ್ಲೂಕುಗಳು), (ಸಂ) ಎಚ್.ಎಮ್. ನಾಗರಾಜರಾಯರು ಮತ್ತು ಸಂಪಾದಕ ವರ್ಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2006

   (ಐ) *ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–15* (ಶಿವಮೊಗ್ಗ ಜಿಲ್ಲೆ. ಸಾಗರ, ಹೊಸನಗರ ತಾಲ್ಲೂಕುಗಳು), (ಸಂ) ಕೆ. ಮೊಹಮ್ಮದ್ ಶರೀಫ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2009

   (ಒ) *ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ*ಗಳು {1885–1956}

2. ಕೆಳದಿ ಅರಸರ ಅಸಂಕಲಿತವಾಗಿರುವ ಶಾಸನಗಳು, ನಿರೂಪಗಳು ಇತ್ಯಾದಿಗಳು ಬಲುಮಟ್ಟಿಗೆ ಕೆಳಗೆ ನೀಡಿರುವ ಆಕರಗಳಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಕೆಲವು ಶಾಸನಗಳು, ನಿರೂಪಗಳ ಪ್ರಕಟನೆ ಪುನರಾವರ್ತನೆಯಾಗಿದೆ. ಇವುಗಳಲ್ಲದೆ ಇನ್ನೂ ಕೆಲವೆಡೆ ಪ್ರಕಟವಾಗಿರುವ ಸಾಧ್ಯತೆಯೂ ಉಂಟು.

   (ಅ) *ಇತಿಹಾಸ ದರ್ಶನ* {1–30 ಸಂಪುಟಗಳು}–(ಪ್ರಕಟನೆ) ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

   (ಆ) *ವಿಜಯನಗರ ಅಧ್ಯಯನ* {1–20 ಸಂಪುಟಗಳು}–(ಪ್ರಕಟನೆ) ಪ್ರಾಚ್ಯವಸ್ತು, ಪರಂಪರೆ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

(ಇ) *ಶೃಂಗೇರಿಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು* – ಎ.ಕೆ. ಶಾಸ್ತ್ರಿ, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು–2003

(ಈ) *ಶೃಂಗೇರಿಮಠದ ಕಡತಗಳಲ್ಲಿಯ ಆಯ್ದ ಚಾರಿತ್ರಿಕ ದಾಖಲೆಗಳು {ಸಂಪುಟ–2}* – ಎ.ಕೆ. ಶಾಸ್ತ್ರಿ, ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯ, ಬೆಂಗಳೂರು–2006

(ಉ) *The Records of the Sringeri Dharmasamsthana* - (Ed) A.K. Shastry, Sringeri Matha, Sringeri-2009

(ಊ) *ಶೃಂಗೇರಿ ಮಠದ ಕಡತಗಳ ವಿಷಯ ಸೂಚಿ* – ಎ.ಕೆ. ಶಾಸ್ತ್ರಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು–2009

(ಋ) *Sringeri Mutt, Selections from the Records of Sringeri Mutt {Volume-1}*- Compailer : V. Subramanya Ayyar, Mysore Government Branch Press, 1927

(ಎ) ಕೆಳದಿ ಸೋಮಶೇಖರನಾಯಕನ ಕ್ರಿ.ಶ. 1670ರ ಅಪ್ರಕಟಿತ ಶಾಸನ–ಎಸ್. ಕಾರ್ತಿಕ್, *ಪದಾರ್ಥ ಸಂಪದ* [ಸಂಶೋಧನ ಲೇಖನಗಳು], ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–2011, ಪುಟ 170–173 {ಇದೇ ಶಾಸನವನ್ನೇ ಬೇರೊಬ್ಬರು *ಇತಿಹಾಸ ದರ್ಶನ*, ಸಂಪುಟ–26, 2011 ರಲ್ಲಿ 'ಶಿವಮೊಗ್ಗ ನಗರದ ಅಪ್ರಕಟಿತ ತಾಮ್ರಶಾಸನ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ}

(ಐ) 'ಸೋಮಶೇಖರಪುರ ಅಗ್ರಹಾರದ ತಾಮ್ರಶಾಸನ' –ಎಚ್.ಎಂ. ನಾಗರಾಜರಾವ್, *ಶಾಸನ ಸಂಪದ*, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–2011, ಪುಟ 46–50

(ಒ) *ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ದಾಖಲು ಸಾಹಿತ್ಯ {ಸಂಪುಟ–1}* –(ಸಂ) ಎಂ. ಎಂ. ಕಲಬುರ್ಗಿ, ಪಿ. ಕೆ. ರಾಠೋಡ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು–2008

(ಓ) *ಇಡಗುಂಜಿಯ ಶ್ರೀಮಹಾಗಣಪತಿ ಮತ್ತು ಸಭಾಹಿತರು* –ಎ.ಕೆ. ಶಾಸ್ತ್ರಿ, ಲೀಲಾಗಣಪತಿ ಚ್ಯಾರಿಟೇಬಲ್ ಟ್ರಸ್ಟ್, ಹಳದೀಪುರ, ಹೊನ್ನಾವರ–2004

3. ಎಂ. ಹನುಮಂತರಾಯರ ಬಗೆಗೆ ಹೆಚ್ಚಿನ ವಿವರಗಳಿಗೆ ನೋಡಿ :

(ಅ) *ಸರಳ ಹಿರಿಯ ಎಂ. ಹನುಮಂತರಾವ್* – ಎಚ್. ಎಂ. ನಾಗರಾಜರಾವ್, ಚಿತ್ರ–ಚೌಕಟ್ಟು (ವ್ಯಕ್ತಿಚಿತ್ರ ಮಾಲೆ), ರಚನಾ ಪ್ರಕಾಶನ, ಮೈಸೂರು–2013, ಪುಟ 24–29

(ಆ) *ಇತಿಹಾಸ ದರ್ಶನ*, ಸಂಪುಟ–27, 2012, ಪುಟ 81–83 : Plate vii

■

ಇತಿಹಾಸ ದರ್ಪಣ ಲೇಖನ – ಲೇಖಕ ಸೂಚಿ

□ ಸುಂಕಂ ಗೋವರ್ಧನ
ನಂ.3336, 3ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಹಂಪಿನಗರ,
ವಿಜಯನಗರ 2ನೇ ಹಂತ, ಬೆಂಗಳೂರು–560 104.
sunkamgovardhan@gmail.com

ಅ

- ಅಂದಿನ ಬೆಂಗಳೂರು – ದೊರೆಸ್ವಾಮಿ. ಹೆಚ್. ಎಸ್ – ಪುಸ್ತಕ 8 – ಪುಟ 9.
- ಅಂಬೇಡ್ಕರ್ ಟೀಕಾಕಾರರ ಸಮಸ್ಯೆಗಳು – ಪ್ರದೀಪ್ ಕುಮಾರ್ ಶೆಟ್ಟಿ ಕೆಂಚನೂರ – ಪುಸ್ತಕ 14 – ಪುಟ 35.
- ಅಧ್ಯಯನಶೀಲ ಕೃತಿ : ಮಹಾಪತ್ರಕರ್ತ ಮಹಾತ್ಮ ಗಾಂಧೀಜಿ (ಸಂತೋಷಕುಮಾರ್ ಗುಲ್ವಾಡಿಯವರ ಇದೇ ಹೆಸರಿನ ಪುಸ್ತಕ ವಿಮರ್ಶೆ) (ಪುಸ್ತಕ ದರ್ಪಣ) – ಸುಂಕಂ ಗೋವರ್ಧನ – ಪುಸ್ತಕ 3 – ಪುಟ 32.
- ಅಬ್ರಹಾಂ ಬೆನ್ ಯೀಯೂ – ಮನು. ವಿ. ದೇವದೇವನ್ – ಪುಸ್ತಕ 17 – ಪುಟ 39.

ಆ

- ಆಧುನಿಕ ಕೊಡಗಿನ ಇತಿಹಾಸ ಕಥನ : ಸಮಕಾಲೀನ ಚಿಂತನೆಗಳ ಒಂದು ವಿಶ್ಲೇಷಣೆ– ಅವಿನಾಶ್. ವಿ – ಪುಸ್ತಕ 24 – ಪುಟ 45.
- ಆಧುನಿಕತೆ ಮತ್ತು ಪರಂಪರೆಯ ಸಾಕ್ಷಿಪ್ರಜ್ಞೆ (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 16 – ಪುಟ 3.

ಇ

- ಇಚ್ಛಾಶಕ್ತಿ ಬೇಕು (ಸಂಪಾದಕೀಯ) – ರಾಜೇಶ್. ಹಂ. ಗು. – ಪುಸ್ತಕ 3 – ಪುಟ 3.
- ಇತಿಹಾಸ ಅಧ್ಯಯನದ ವಿಹಂಗಮ ನೋಟ (ಜಿ.ಎಸ್. ದೀಕ್ಷಿತ ಅವರ South India ; An expedition into the past ಪುಸ್ತಕ ಪರಿಚಯ) – ಜ್ಯೋತ್ಸ್ನಾ ಕಾಮತ್ – ಪುಸ್ತಕ – 11 – ಪುಟ 56.
- 'ಇತಿಹಾಸ ದರ್ಪಣ' ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭ(ವರದಿ) ರಾಜೇಶ್. ಹಂ.ಗು. – ಪುಸ್ತಕ 5 – ಪುಟ 4.
- ಇತಿಹಾಸ ಸಂಶೋಧನಾ ತರಬೇತಿ ಶಿಬಿರ (ಪ್ರಕಟಣೆ) – ರಾಜೇಶ್. ಹಂ. ಗು. – ಪುಸ್ತಕ 23 – ಪುಟ 104.
- ಇತಿಹಾಸಕಾರ ರಾಮ್ ಶರಣ್ ಶರ್ಮಾ – ಮನು. ವಿ. ದೇವದೇವನ್ – ಪುಸ್ತಕ 5 – ಪುಟ 16.
- ಇತಿಹಾಸವನ್ನು ಊಹಾಪೋಹ ಚರಿತ್ರೆಕಾರರಿಂದ ಬಿಡುಗಡೆಗೊಳಿಸಬೇಕು. – ನಾಗರಾಜ. ಕಿ.ರಂ. – ಪುಸ್ತಕ 6–7– ಪುಟ 10.

- 'ಇತಿಹಾಸ'ವಾದ ಆರ್.ಎಸ್. ಶರ್ಮಾ – ವಾಗೀಶ್ವರಿ. ಎಸ್.ಪಿ. – ಪುಸ್ತಕ 10 – ಪುಟ 48.
- ಇದು ಕಾಡಿನ ಕಥೆಯಲ್ಲ (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 20 – ಪುಟ 5.
- ಇದು ಬರ್ಲಿನ್ ! ಇದು ಜರ್ಮನಿಯಾ ! (ಆಗುಂಬೆ ನಟರಾಜ ಅವರ ಹೆಸರಿನ ಪುಸ್ತಕ ವಿಮರ್ಶೆ) – ಸಂಗನಾಳಮಠ. ಯು.ಎನ್. – ಪುಸ್ತಕ 21–22 – ಪುಟ 114.

ಉ

- ಉದಾರೀಕೃತ ಭಾರತ ಮತ್ತು ಶಿಕ್ಷಣ : ಗುಸ್ತೆವೊ ಎಸ್ತೆವಾ ವಾಗ್ವಾದಗಳು – ಪ್ರದೀಪ್ ಕುಮಾರ್ ಶೆಟ್ಟಿ. ಕೆಂಚನೂರು – ಪುಸ್ತಕ 18 – ಪುಟ 59.

ಎ

- ಎಲಹಂಕ ರಾಜ್ಯದ ಪ್ರಭುಗಳಾದ ಬೆಂಗಳೂರು ಕೆಂಪೇಗೌಡರು – ಶಾಸನಗಳ ಹಿನ್ನೆಲೆಯಲ್ಲಿ ಒಂದು ಸೂಕ್ಷ್ಮ ಅಧ್ಯಯನ – ಕೃಷ್ಣಮೂರ್ತಿ ಪಿ. ವಿ. – ಪುಸ್ತಕ 11 – ಪುಟ 40.

ಐ

- ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮ 9 (ವರದಿ) – ರಶ್ಮಿ. ಎಸ್ – ಪುಸ್ತಕ 3 – ಪುಟ 40.
- ಐತಿಹಾಸಿಕ ಮಹತ್ತ್ವದ ಗಿಲಜಿಟ ಹಸ್ತಪ್ರತಿಗಳು ಪರಿಚಯ ಮತ್ತು ವಿವೇಚನೆ – ವಸಂತಮಾಧವ. ಕೆ. ಜಿ. – ಪುಸ್ತಕ 16–ಪುಟ 12.
- ಐ.ಸಿ.ಎಚ್.ಆರ್. ಸಂಸ್ಥೆಯಿಂದ ಸಂಶೋಧನೆಗೆ ಧನಸಹಾಯ (ಪ್ರಕಟಣೆ) ರಾಜೇಶ್. ಹಂ.ಗು. – ಪುಸ್ತಕ 2 – ಪುಟ 32.
- ಐಹೊಳೆ ಪರಿಸರದ ವೀರಗಲ್ಲುಗಳ ಶೋಧನೆ. – ಉಮೇಶ್ ಪತ್ತಾರ್ – ಪುಸ್ತಕ 15 – ಪುಟ 25.

ಒ

- ಒಕ್ಕಲಿಗರು ಒಕ್ಕಲಿಗರ ಪ್ರಭೇದಗಳು ಸ್ಥಿತ್ಯಂತರ–ಸಂಘರ್ಷ–ಸಾಮರಸ್ಯ – ನಾಗರಾಜು ಎಂ. ಎಚ್. – ಪುಸ್ತಕ 21–22– ಪುಟ 17.

ಕ

- ಕಣ್ ಮುಚ್ಚುವ ಕನ್ನಡ ಶಾಲೆಗಳ ಕಣ್ ತೆರೆಸಬಹುದೇ ? (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 11 – ಪುಟ 3.
- ಕನ್ನಡ ಕಟ್ಟುವ ಕೆಲಸ ಎಂದರೇನು (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 9 – ಪುಟ 2.
- ಕನ್ನಡ ಪ್ರದೇಶದ ವೀರಗಲ್ಲುಗಳು – ರಾಜ್ಯ, ಸ್ಥಳೀಯ ಆಡಳಿತ ಮತ್ತು ಭೂ ಹಿಡುವಳಿ ದೃಷ್ಟಿಕೋನದಲ್ಲಿ – ಪುರುಷೋತ್ತಮ. ಎಸ್.–ಪುಸ್ತಕ 20 – ಪುಟ 53.
- ಕನ್ನಡ ಶಾಸನ ಕವಿಗಳು – ಕೊಟ್ರೇಶ್. ಎಂ. – ಪುಸ್ತಕ 19 – ಪುಟ 43
- ಕನ್ನಡ ಶಾಸ್ತ್ರೀಯ ಸ್ಥಾನ–ಸಂಶೋಧನಾ ವಿಧಾನ (ವರದಿ)– ರಶ್ಮಿ. ಎಸ್ – ಪುಸ್ತಕ 3 – ಪುಟ 41.
- ಕನ್ನಡದ ಕನ್ನಡಿಯಲ್ಲಿ ಜ್ಞಾನಜಗತ್ತು (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 14 – ಪುಟ 3.

- ಡಾ. ವಸುಂಧರಾ ಫಿಲಿಯೋಜ಼ಾರವರೊಡನೆ ಇತಿಹಾಸ ದರ್ಪಣದ ಮಾತುಕತೆ – ಸುಂಕಂ ಗೋವರ್ಧನ ಮತ್ತು ಹಂ. ಗು. ರಾಜೇಶ್ – ಪುಸ್ತಕ 11 – ಪುಟ 50.
- ಡಾ. ಹೆಚ್.ಎಸ್.ದೊರೆಸ್ವಾಮಿ ಅವರ ಸಂದರ್ಶನ – ರಾಜೇಶ್. ಹಂ. ಗು. – ಪುಸ್ತಕ 2 – ಪುಟ 12.
- ಡಿ.ಡಿ.ಕೊಸಾಂಬಿ ಹಾಗೂ ಭಾರತೀಯ ಚರಿತ್ರೆ ಅಧ್ಯಯನ – ಅರುಣಿ. ಎಸ್. ಕೆ. – ಪುಸ್ತಕ 3 – ಪುಟ 15.
- ಡಿ.ವಿ.ಜಿ. ಯವರ ಜ್ಞಾಪಕ ಚಿತ್ರಶಾಲೆಯಲ್ಲಿ ಬೆಂಗಳೂರು – ಪವಮಾನ. ಆರ್.ಡಿ – ಪುಸ್ತಕ – 8 – ಪುಟ 71.
- ಡೊಮಿಂಗೊ ಪ್ಯಾಸ್‌ನ ವರದಿ–ಒಂದು ಟಿಪ್ಪಣಿ – ನರಸಿಂಹನ್. ಅ.ಲ.– ಪುಸ್ತಕ 4 – ಪುಟ 103.

ತ

- ತಮಿಳುನಾಡಿನ ಜಿಂಜಿ ನಾಯಕರ ಮೂಲ ಕರ್ನಾಟಕ – ಓತ ನೊಬುಹಿರೋ ಅವರ ಲೇಖನದ ಸಂಗ್ರಹಾನುವಾದ: ಅರುಣಿ. ಎಸ್.ಕೆ. ಪುಸ್ತಕ 6–7– ಪುಟ 32.
- ತಲಕಾಡಿನ ಹೊಸ ಉತ್ಖನನ ಸಂಗತಿಗಳು – ವೇಮಗಲ್ ಮೂರ್ತಿ (ವರದಿ) – ಪುಸ್ತಕ 6–7 – ಪುಟ 55.
- ತುರ್ತುಪರಿಸ್ಥಿತಿ ಕಾಲಘಟ್ಟದ ವ್ಯಂಗ್ಯಚಿತ್ರಗಳು : ಒಂದು ವಿಶ್ಲೇಷಣೆ – ರಶ್ಮಿ. ಎಸ್ – ಪುಸ್ತಕ 19– ಪುಟ 73.
- ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಹಾಲ್ಕುರಿಕೆ ಗ್ರಾಮದ ಸದಾಶಿವರಾಯನ ಅಪ್ರಕಟಿತ ಶಿಲಾಶಾಸನ – ಕಾರ್ತಿಕ್. ಎಸ್. – ಪುಸ್ತಕ 16 – ಪುಟ 35.
- ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ ವಿಚಾರ ಸಂಕಿರಣ (ವರದಿ) ಉಮೇಶ್ ಪತ್ತಾರ್ – ಪುಸ್ತಕ 2 – ಪುಟ 25.
- ತುರುವೇಕೆರೆ ತಾಲ್ಲೂಕು ಮಾದಿಹಳ್ಳಿಯ ಹೊಯ್ಸಳದೊರೆ ನರಸಿಂಹನ ಕಾಲದ ಅಪ್ರಕಟಿತ ಶಾಸನ – ಸುಂಕಂ ಗೋವರ್ಧನ – ಪುಸ್ತಕ 24 – ಪುಟ 105.
- ತುಳುವ ಸಂತತಿಯ ಏಳಿಗೆ – ಕೆಲವು ಕೊಲೆಗಳು – ಮೂಲ: ಶ್ರೀನಿವಾಸ ಶಿಸ್ತಿಲ, ಅನುವಾದ: ಆನಂದ ಪ್ರಸಾದ್ ಎಂ. ಎಸ್ – ಪುಸ್ತಕ 4 – ಪುಟ 26.

ದ

- ದಕ್ಷಿಣ ಭಾರತ ಇತಿಹಾಸ – ಒಂದು ಮರು ಅವಲೋಕನ (ನೊಬೊರು ಕರಾಶಿಮಾ ಅವರ A Concise History of South India- issues and interpretations ಪುಸ್ತಕ ವಿಮರ್ಶೆ) – ಪುರುಷೋತ್ತಮ. ಎಸ್. – ಪುಸ್ತಕ 23 – ಪುಟ 85.

ಧ

- ಧಾರವಾಡ ತಾಲ್ಲೂಕಿನ ಮೂರು ವೀರಶೈವ ಶಾಸನಗಳು – ಶಿವಕುಮಾರ ಪಾವಟೆ – ಪುಸ್ತಕ 6–7 – ಪುಟ 41.

- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 4) – ಮನು. ವಿ. ದೇವದೇವನ್ – ಪುಸ್ತಕ 21–22 – ಪುಟ 61.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 5) – ಮನು. ವಿ. ದೇವದೇವನ್ – ಪುಸ್ತಕ 23– ಪುಟ 35.
- ಪುರಿ ಜಗನ್ನಾಥ ದೇವಾಯದ ಇತಿಹಾಸ (ಭಾಗ 6) – ಮನು. ವಿ. ದೇವದೇವನ್ – ಪುಸ್ತಕ 24– ಪುಟ 57.
- ಪ್ರಾಗಿತಿಹಾಸ ಕಾಲದಲ್ಲಿ ಕರ್ನಾಟಕದ ಸಾಗರೋತ್ತರ ಸಂಬಂಧಗಳು – ಲ.ನ.ಸ್ವಾಮಿ – ಪುಸ್ತಕ 12–13 – ಪುಟ 109.
- ಪ್ರಾಚೀನ ಭಾರತದ ಕಂದಾಯ ವ್ಯವಸ್ಥೆ (ಯು.ಎನ್.ಘೋಷಾಲ್ ಅವರ ಇದೇ ಹೆಸರಿನ ಪುಸ್ತಕ ವಿಮರ್ಶೆ) – ರಾಜೇಶ್. ಹಂ. ಗು. – ಪುಸ್ತಕ 17– ಪುಟ 75.
- ಪ್ರೊ. ಷ. ಶೆಟ್ಟರ್ ಅವರಿಗೆ ಭಾಷಾ ಸಮ್ಮಾನ್ ಗೌರವ (ವರದಿ)– ನಾಗೇಶ್ ಕೆ. – ಪುಸ್ತಕ 2 – ಪುಟ 25.
- ಪ್ರೊ. ಸಬ್ಯಸಾಚಿ ಭಟ್ಟಾಚಾರ್ಯ (ಸಂದರ್ಶನ ದರ್ಪಣ) ಉಮೇಶ್ ಪತ್ತಾರ್ ಮತ್ತು ಬಿ.ಎನ್.ನವೀನ್ – ಪುಸ್ತಕ 3 – ಪುಟ 23.

ಬ

- ಬಂಟ್ಸ್ ಇನ್ ಹಿಸ್ಟರಿ ಅಂಡ್ ಕಲ್ಚರ್ : ಒಂದು ವಿಭಿನ್ನ ಕೃತಿ (ಬಿ.ಸುರೇಂದ್ರ ರಾವ್ ಅವರ ಪುಸ್ತಕ ವಿಮರ್ಶೆ)– ಪ್ರದೀಪ್ ಕುಮಾರ್ ಶೆಟ್ಟಿ. ಕೆಂಚನೂರು– ಪುಸ್ತಕ 21–22– ಪುಟ 105.
- ಬದಲಾಗಬೇಲಿರುವ ಇತಿಹಾಸ ಪಠ್ಯಗಳು–ಒಂದು ಟಿಪ್ಪಣಿ – ಲಕ್ಷ್ಮಣ ತೆಲಗಾವಿ – ಪುಸ್ತಕ 6–7 – ಪುಟ 6.
- ಬದಲಾವಣೆಯತ್ತ ಆರಂಭಿಕ ಮಧ್ಯಕಾಲೀನ ಬೆಂಗಳೂರು ಪರಿಸರ (950–1350) ಹೊಸ ಪರಿವೀಕ್ಷಣೆಗಳ ವಿಶ್ಲೇಷಣೆ – ರಾಜೇಶ್. ಹಂ. ಗು. – ಪುಸ್ತಕ 18–ಪುಟ 11.
- ಬಳ್ಳಾರಿ ಜಿಲ್ಲೆಯ ಸಿಡೇಗಲ್ಲು ಬಸವಣ್ಣನ ಐತಿಹ್ಯ – ಹಾಲಪ್ಪ ಕುಂಬಳಕುಂಟೆ – ಪುಸ್ತಕ 3 – ಪುಟ 29.
- ಬಾಣರಸರ ಶಾಸನಗಳು ಒಂದು ಅಧ್ಯಯನ (ಪಿ. ವಿ. ಕೃಷ್ಣಮೂರ್ತಿಯವರ ಇದೇ ಹೆಸರಿನ ಪುಸ್ತಕ ವಿಮರ್ಶೆ) – ಕಾರ್ತಿಕ್.ಎಸ್.– ಪುಸ್ತಕ 6–7 – ಪುಟ 56.
- ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ (ಷ. ಶೆಟ್ಟರ್ ಅವರ ಇದೇ ಹೆಸರಿನ ಪುಸ್ತಕ ವಿಮರ್ಶೆ) – ದೇವರಕೊಂಡಾರೆಡ್ಡಿ – ಪುಸ್ತಕ 19 – ಪುಟ 101.
- ಬಿಜಾಪುರ ಜಿಲ್ಲೆಯ ಪ್ರಾಚೀನ ಆಡಳಿತದಲ್ಲಿ ಮಹಾಮಂಡಲೇಶ್ವರರ ಪಾತ್ರ – ಗಂಗಾಂಬಿಕೆ. ಎಸ್. – ಪುಸ್ತಕ 14 – ಪುಟ 10.
- ಬಿಪನ್ ಚಂದ್ರ (1928–2014)–ಸುರೇಂದ್ರ ರಾವ್. ಬಿ. –ಪುಸ್ತಕ 23 – ಪುಟ 21.
- ಬೀದರ್ ಜಿಲ್ಲೆಯ ಜೈನಶಾಸನಗಳು (ಅಪ್ಪಣ್ಣ ಹಂಜೆಯವರ ಇದೇ ಹೆಸರಿನ ಪುಸ್ತಕ ಪರಿಚಯ) – ಶಿವಕುಮಾರ ಪಾವಟೆ – ಪುಸ್ತಕ 15 – ಪುಟ 67.

- ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ಕಿರು ಲೇಖನ)–ಶಿವರಾಜ – ಪುಸ್ತಕ 1 – ಪುಟ 25.
- ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಪರಿಷತ್ತು (ಕಿರುಲೇಖನ) – ಸಂಪತ್. ಎಸ್ – ಪುಸ್ತಕ 1 – ಪುಟ 24.
- ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು (ಕಿರುಲೇಖನ) ಸಂಪತ್. ಎಸ್– ಪುಸ್ತಕ 1 – ಪುಟ 24.
- ಭಾಷಿಕ ಯಜಮಾನಿಕೆ : ಭಾಷಾ ರಾಜಕಾರಣದ ಚಾರಿತ್ರಿಕ ನೆಲೆಗಳು. – ಮೋಹನಕೃಷ್ಣ ರೈ.ಕೆ. – ಪುಸ್ತಕ 19 – ಪುಟ 87.

ಮ

- 'ಮಂಗಳವಾಡ' ಅಧ್ಯಯನಕ್ಕೊಂದು ಕೈಪಿಡಿ (ಶಿವಕುಮಾರ್ ಪಾವಟೆ ಅವರ ಮಂಗಳವಾಡ ಮತ್ತು ಇತರ ಲೇಖನಗಳು ಪುಸ್ತಕ ಪರಿಚಯ)–ರಾಜೇಶ್. ಹಂ.ಗು.–ಪುಸ್ತಕ 5–ಪುಟ 41.
- ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಎರಡು ಅಪ್ರಕಟಿತ ಶಾಸನಗಳು – ರಂಗಸ್ವಾಮಿ. ಆರ್. – ಪುಸ್ತಕ 9 – ಪುಟ 30.
- ಮಂಡ್ಯ ಜಿಲ್ಲೆಯ ಚಾಗಶೆಟ್ಟಿಹಳ್ಳಿ ಗ್ರಾಮದ ಸ್ಮಾರಕ ಶಿಲ್ಪಶಾಸನ – ಆರ್. ರಂಗಸ್ವಾಮಿ ಮತ್ತು ಪಾಡೀಗಾರ್. ಎಸ್. ವ್ಹಿ. – ಪುಸ್ತಕ 14 – ಪುಟ 22.
- ಮಂಡ್ಯ ಜಿಲ್ಲೆಯ ಹೊಯ್ಸಳ ದೇವಾಲಯಗಳ ಶಿಲ್ಪಿಗಳು – ಶೋಭ ಮಹೇಶ್ – ಪುಸ್ತಕ 3 – ಪುಟ 20.
- ಮಠದ ಗಂಗಾಧರಯ್ಯ ನಾಗರಾಜ್ – ನರಸಿಂಹನ್. ಅ. ಲ. – ಪುಸ್ತಕ 3 – ಪುಟ 45.
- ಮಡಕೆ ಚೀಲೂರಿನ ಬಂಡೆರೇಖಾ ಚಿತ್ರಗಳು. ಒಂದು ಹೊಸ ಶೋಧ – ದೊಡ್ಡಪ್ಪ. ಬಿ.ಎನ್. ಪುಸ್ತಕ 14 – ಪುಟ 6.
- ಮಧ್ಯಕಾಲೀನ ಕರ್ನಾಟಕದಲ್ಲಿ ಆಹಾರ ಮತ್ತು ಪಾನೀಯಗಳು : ರಸಾನುಭವದ ಕೃತಿ (ಎನ್. ನಂದೀಶ್ವರ್ ಅವರ ಇದೇ ಹೆಸರಿನ ಪುಸ್ತಕ ವಿಮರ್ಶೆ) – ರಶ್ಮಿ. ಎಸ್ – ಪುಸ್ತಕ 21–22– ಪುಟ 111.
- ಮರೆಯಲಾಗದ ಕಿ.ರಂ.ಮೇಷ್ಟ್ರು – ಗೋವಿಂದರಾಜು. ಸಿ.ಆರ್.–ಪುಸ್ತಕ 6–7 – ಪುಟ 8.
- ಮರೆಯಾದ ಮಹಾಮೇರುಗಳು (ನುಡಿಗನ್ನಡಿ) – ರಾಜೇಶ್. ಹಂ. ಗು. – ಪುಸ್ತಕ 23 – ಪುಟ 5.
- ಮಹಮದ್ ಗಾವಾನ್ ; ಹುಡುಕಾಟದ ಸುತ್ತಮುತ್ತ – ದೇವು ಪತ್ತಾರ – ಪುಸ್ತಕ 23 – ಪುಟ 59.
- ಮಹಾತ್ಮ ಗಾಂಧಿ ಮತ್ತು ಠಾಗೂರರ ನಡುವಿನ ವಾತ್ಸಲ್ಯತೆ – ವೇಮಗಲ್ ಸೋಮಶೇಖರ್ – ಪುಸ್ತಕ 11 – ಪುಟ 11.
- ಮಹಾನ್ ಇತಿಹಾಸಗಾರ್ತಿ ರೋಮಿಲಾ ಥಾಪರ್ (ವ್ಯಕ್ತಿ ದರ್ಪಣ) – ರಂಗಸ್ವಾಮಿ. ಸಿ. ಪುಸ್ತಕ 1 – ಪುಟ 17.

- ಸಂಶೋಧನಾ ಸೀಮೋಲ್ಲಂಘನ (ಸಂಪಾದಕೀಯ) – ರಾಜೇಶ್. ಹಂ. ಗು. – ಪುಸ್ತಕ 4 – ಪುಟ 3.
- ಸಂಶೋಧನೆಯ ವಿಧಿ–ವಿಧಾನಗಳು ; ರಾಜ್ಯಮಟ್ಟದ ಕಾರ್ಯಾಗಾರ (ವರದಿ) – ರಶ್ಮಿ. ಎಸ್ – ಪುಸ್ತಕ 4 – ಪುಟ 117.
- ಸಂಶೋಧನೆಯ ಹೊಸ ಸಾಧ್ಯತೆಗಳು ಅಧ್ಯಯನ ಕಮ್ಮಟ (ವರದಿ) – ವಿಜಯಲಕ್ಷ್ಮಮ್ಮ ಜಿ. – ಪುಸ್ತಕ 2 – ಪುಟ 27.
- ಸಂಸ್ಕೃತ ಗ್ರಂಥಗಳ ಚೀನೀ ಭಾಷಾಂತರ ಮೂಲ: ಜಿ.ಎಸ್ ದೀಕ್ಷಿತ್, ಲೇಖನಾನುವಾದ: ಜ್ಯೋತ್ಸ್ನಾ ಕಾಮತ್ – ಪುಸ್ತಕ –6–7 – ಪುಟ 14.
- ಸರ್ಕಾರವನ್ನು ತಲ್ಲಣಗೊಳಿಸಿದ ಅಂತಿಮ ಹೋರಾಟ – ದೊರೆಸ್ವಾಮಿ. ಹೆಚ್. ಎಸ್ – ಪುಸ್ತಕ 3 – ಪುಟ 6.
- ಸಮಕಾಲೀನತೆಗೆ ತೆರೆದುಕೊಂಡ ಬೆಂಗಳೂರಿನ ಕಲಾಶಾಲೆಗಳು – ನರಸಿಂಹನ್. ಅ. ಲ. – ಪುಸ್ತಕ 8 – ಪುಟ 75.
- ಸಮುದ್ರ ಗುಪ್ತನಿಂದ ಸೋತ ಕುಸ್ಥಲಪುರದ ಧನಂಜಯ ಗಂಗ ವಂಶದ ಧನಂಜಯನೇ ? – ರಾಜೇಶ್. ಹಂ. ಗು. – ಪುಸ್ತಕ 1 – ಪುಟ 16.
- ಸಮುದ್ರದ ಹಳ್ಳಿಯ ಪ್ರಾಚ್ಯಾವಶೇಷಗಳು– ಮುತ್ತುರಾಜ – ಪುಸ್ತಕ 16– ಪುಟ 7.
- ಸರ್. ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಮ್ ಮತ್ತು ಅವರ ಪುರಾತತ್ತ್ವ ಅಧ್ಯಯನಗಳು: ಕಿರುನೋಟ – ಅರುಣಿ. ಎಸ್. ಕೆ. – ಪುಸ್ತಕ 21–22– ಪುಟ 75.
- ಸಾರ್ಥಕ ಕೆಲಸ (ಡಾ. ಯೋಗೀಶ್ವರಪ್ಪನವರ ಕಲ್ಪಶೋಧ ಕೃತಿಯ ವಿಮರ್ಶೆ)– ಪರಮಶಿವಮೂರ್ತಿ. ಡಿ. ವಿ.– ಪುಸ್ತಕ 17– ಪುಟ 71.
- ಸಿಂಗರಾಜಪುರ ಗ್ರಾಮದ ಅಪ್ರಕಟಿತ ಶಾಸನಗಳು – ಮಂಜುನಾಥ. ಎಂ. ಕೆ. – ಪುಸ್ತಕ 23 – ಪುಟ 77.
- ಸಿರಾ ತಾಲ್ಲೂಕಿನ ಆಕರ ಕೋಶ (ಎನ್ ನಂದೀಶ್ವರ್ ಅವರ ಸಿರಾ ತಾಲ್ಲೂಕಿನ ಸ್ಮಾರಕಗಳು ಮತ್ತು ಶಾಸನಗಳು ಪುಸ್ತಕ ವಿಮರ್ಶೆ) (ಪುಸ್ತಕ ದರ್ಪಣ) – ಸುಂಕಂ ಗೋವರ್ಧನ – ಪುಸ್ತಕ 2 – ಪುಟ 22.
- ಸುಗ್ರೀವ ನರಸಿಂಹ – ಶೇಷಶಾಸ್ತ್ರಿ. ಆರ್. – ಪುಸ್ತಕ 4 – ಪುಟ 95.
- ಸುದ್ದಿ, ಶೋಧ ದರ್ಪಣ – ಆನಂದ ಪ್ರಸಾದ್ ಎಂ. ಎಸ್ ಮತ್ತು ಹಂ. ಗು. ರಾಜೇಶ್ – ಪುಸ್ತಕ 2 – ಪುಟ 29
- ಸುದ್ದಿ, ಶೋಧ ದರ್ಪಣ (ಸಂಗ್ರಹ)–ಶಿವಕುಮಾರಿ. ಎಂ.ಎಸ್. – ಪುಸ್ತಕ 3 – ಪುಟ 35.
- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ಶ್ರೀಪ್ರಿಯ – ಪುಸ್ತಕ 4 – ಪುಟ 111.
- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ರಶ್ಮಿ. ಎಸ್– ಪುಸ್ತಕ 5 – ಪುಟ 43.
- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ರಶ್ಮಿ. ಎಸ್– ಪುಸ್ತಕ 6–7 – ಪುಟ 70.

- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ರಶ್ಮಿ. ಎಸ್ – ಪುಸ್ತಕ 9 – ಪುಟ 41.
- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ರಶ್ಮಿ. ಎಸ್– ಪುಸ್ತಕ 10 – ಪುಟ 57.
- ಸುದ್ದಿ, ಶೋಧ ದರ್ಪಣ (ಸಂಗ್ರಹ) – ಶಿವಕುಮಾರಿ. ಎಂ.ಎಸ್ ಮತ್ತು ರಶ್ಮಿ. ಎಸ್– ಪುಸ್ತಕ 11 – ಪುಟ 64.
- ಸೋರೆಮಡಿ, ಮಾಂದಾವುದು, ಮುದುಮಡುವು, ತುಂಬೇಪಾಡಿ ಕದನಗಳು ಮತ್ತು ಶ್ರೀಪುರಂಬಿಯುಂ ಯುದ್ಧ –ನಾಗೇಂದ್ರ – ಪುಸ್ತಕ 9 – ಪುಟ 16.
- ಸ್ಪಂದನ ಇತಿಹಾಸ ವೇದಿಕೆಯ ಉದ್ಘಾಟನ ಕಾರ್ಯಕ್ರಮದ ವರದಿ. ರಾಜೇಶ್. ಹಂ. ಗು. – ಪುಸ್ತಕ 1 – ಪುಟ 9.
- ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಹೇಗೆ? – ಚಂದ್ರಶೇಖರ ರೆಡ್ಡಿ(ವಿದ್ಯಾರ್ಥಿ ದರ್ಪಣ)– ಪುಸ್ತಕ 2 – ಪುಟ 34.
- ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರ ಪಾತ್ರ –ಒಂದು ಸ್ಯಾಂಪಲ್ – ದೊರೆಸ್ವಾಮಿ. ಹೆಚ್. ಎಸ್ – ಪುಸ್ತಕ 10 – ಪುಟ 7.

ಹ

- ಹಂಪಿಯ ಪರಿಸರದಲ್ಲಿ ಕೃಷ್ಣದೇವರಾಯನು ನಿರ್ಮಿಸಿದ ದೇವಾಲಯಗಳು – ಅಪರ್ಣ. ಕೂ. ಸ. – ಪುಸ್ತಕ 4 – ಪುಟ 87.
- ಹಂಪೆಯ ಅಶ್ವಪರೀಕ್ಷೆಯ ಅಪರೂಪದ ನಿರೂಪಣಾತ್ಮಕ ಉಬ್ಬುಶಿಲ್ಪಗಳು – ನಾಗರಾಜಪ್ಪ. ಎಸ್ – ಪುಸ್ತಕ 23 – ಪುಟ 49.
- ಹಂಸನೂರು : ಪ್ರಾಗೈತಿಹಾಸಿಕ ವರ್ಣಚಿತ್ರಕಲೆ ನೆಲೆಯ ಅನ್ವೇಷಣೆ – ಮೋಹನ. ರಾ. – ಪುಸ್ತಕ 24 – ಪುಟ 11.
- ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ 20 ನೆಯ ಶತಮಾನದ ಪೂರ್ವಾರ್ಧದ ಇತಿಹಾಸ ಘಟನೆಗಳ ಮೇಲೆ ನಿಶೆ ಸಿದ್ಧಾಂತದ ಪ್ರಭಾವ – ವಸಂತಮಾಧವ. ಕೆ.ಜಿ. – ಪುಸ್ತಕ 11 – ಪುಟ 7.
- ಹತ್ತೊಂಬತ್ತನೇ ಶತಮಾನದ ಕರ್ನಾಟಕದಲ್ಲಿನ ಬ್ರಿಟೀಷ್ ವಿರೋಧಿ ದಂಗೆಗಳು (ನರಗುಂದ ಸಂಸ್ಥಾನವನ್ನು ಅನುಲಕ್ಷಿಸಿ) – ವಗ್ಗರ. ಎ. ಬಿ. – ಪುಸ್ತಕ 18 – ಪುಟ 51.
- ಹದಿನಾರನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಕರ್ನಾಟಕದ ಎರಡು ನಾಯಕ ಮನೆತನಗಳು – ಒಂದು ವಿಶ್ಲೇಷಣೆ – ಒತಾ ನೊಬುಹಿರೊ – ಪುಸ್ತಕ 5 – ಪುಟ 33.
- ಹಲಸೂರು ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಬೃಹತ್ ಕಲ್ಯಾಣಿ ಶೋಧ – ಅರುಣಿ. ಎಸ್.ಕೆ. – ಪುಸ್ತಕ 5 – ಪುಟ 47.
- ಹವ್ಯಾಸಿ ಇತಿಹಾಸಕಾರ ಆಗುಂಬೆ ನಟರಾಜ್ – ಸುಂಕಂ ಗೋವರ್ಧನ – ಪುಸ್ತಕ 14 – ಪುಟ 44.
- ಹಳವಂಡ (ಸಂಪಾದಕೀಯ) – ರಾಜೇಶ್. ಹಂ. ಗು. – ಪುಸ್ತಕ 1 ಪುಟ 3.

- ಹಾಸ್ಯಾಸ್ಪದ ಹೇಳಿಕೆ (ಮನು ದೇವದೇವನ್ ಅವರ ಲೇಖನಕ್ಕೆ ಪ್ರತಿಕ್ರಿಯೆ.) – ಗೋಪಾಲಕೃಷ್ಣ ರಾವ್. ಕೆ.ಜಿ. – ಪುಸ್ತಕ 23 – ಪುಟ 99.
- ಹಿಂಧೂ ಧರ್ಮ ಮತ್ತು ಧರ್ಮಶಾಸ್ತ್ರ – ಪ್ರವೀಣ್ ಕುಮಾರ್. ಟಿ. ಡಿ. – ಪುಸ್ತಕ 15 – ಪುಟ 48.
- ಹುತ್ರಿದುರ್ಗದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು : ಹೊಸ ಹುಡುಕಾಟ – ರಾಜೇಶ್. ಹಂ. ಗು. – ಪುಸ್ತಕ 21–22 – ಪುಟ 9.
- ಹುಲುಕುಡಿ ನಾಡಪ್ರಭುಗಳು – ವೆಂಕಟೇಶ್. ಎಸ್. – ಪುಸ್ತಕ 16 – ಪುಟ 20.
- ಹೆಚ್ಚು ಬೆಳಕಿಗೆ ಬಾರದ ಬೆಂಗಳೂರು ನಗರ ನಿರ್ಮಾಪಕರು – ಸುರೇಶ್ ಮೂನ – ಪುಸ್ತಕ 8 – ಪುಟ 54.
- ಹೈದರಾಬಾದ್ ಕರ್ನಾಟಕ ಮತ್ತು ಡಾ. ಡಿ.ಎಂ. ನಂಜುಂಡಪ್ಪ ವರದಿ. ಸಂತೋಷಕುಮಾರ್. ಹೆಚ್.ವಿ. – ಪುಸ್ತಕ 6–7 – ಪುಟ 51.
- ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಉಪನಗರವಾಗಿ ಷಹರ್ ಗಂಜಾಂನ ಬೆಳವಣಿಗೆ (ವಿಶೇಷವಾಗಿ ಆರ್ಥಿಕ ಪರಿಸ್ಥಿತಿ ಅನುಲಕ್ಷಿಸಿದಂತೆ) – ನಮಿತಾ. ಪಿ – ಪುಸ್ತಕ 18 – ಪುಟ 43.
- ಹೊಯ್ಸಳ ದೊರೆ ಮೂರನೇ ನರಸಿಂಹನ ಕಾಲದ ಎರಡು ಅಪ್ರಕಟಿತ ಶಾಸನಗಳು. – ಮಂಜುನಾಥ. ಎಂ. ಕೆ. – ಪುಸ್ತಕ 21–22– ಪುಟ 118.
- ಹೊಯ್ಸಳ ಶಿಲ್ಪಗಳಲ್ಲಿ ಕುದುರೆಗಳ ಚಿತ್ರಣ – ಶೋಭ ಮಹೇಶ್ – ಪುಸ್ತಕ 1 – ಪುಟ 16.
- ಹೊಸದಾರಿಯಲ್ಲಿ ನಾವು–ನೀವು (ಸಂಪಾದಕೀಯ) – ರಾಜೇಶ್. ಹಂ. ಗು. – ಪುಸ್ತಕ 17 – ಪುಟ 5.
- ಹೊಸ ದಿಕ್ಕಿನೆಡೆಗೆ (ಸಂಪಾದಕೀಯ) – ರಾಜೇಶ್. ಹಂ. ಗು. – ಪುಸ್ತಕ 5 – ಪುಟ 5.
- ಹೊಸದುರ್ಗ ತಾಲ್ಲೂಕಿನ ನವಶೋಧಿತ ಎರಡು ಶೂಲಬ್ರಹ್ಮ ಶಿಲ್ಪಗಳು – ಮಹಂತೇಶ್. ಎನ್. ಎಸ್ – ಪುಸ್ತಕ 11 – ಪುಟ 36.
- ಹೊಸ ಶಾಸನಗಳು (ಮೇಕನಗದ್ದೆ ಲಕ್ಷ್ಮಣಗೌಡ ಅವರ ಇದೇ ಹೆಸರಿನ ಪುಸ್ತಕ ಪರಿಚಯ) (ಪುಸ್ತಕ ದರ್ಪಣ) – ರಾಜೇಶ್. ಹಂ.ಗು. –ಪುಸ್ತಕ 9–ಪುಟ 35.

■

ಮರು ಪ್ರತಿಕ್ರಿಯೆ

□ ಮನು ವಿ. ದೇವದೇವನ್

*ಇತಿಹಾಸ ದರ್ಪಣ*ದ ಇಪ್ಪತ್ತೈದನೆಯ ಸಂಚಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತ ಎ.ಬಿ. ವಗ್ಗರ ಅವರು ಪತ್ರಿಕೆಯ ಸಂಪಾದಕರಾದ ರಾಜೇಶ್ ಅವರಿಗೆ ಬರೆದ ಪತ್ರವನ್ನು ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಇದು ಖಾಸಗಿ ಪತ್ರವೆ ಅಥವಾ ಪ್ರಕಟಣೆಗೆಂದೇ ಬರೆದದ್ದೇ ಎಂಬುದು ಪತ್ರದಿಂದ ಸ್ಪಷ್ಟವಾಗಿಲ್ಲ. ಖಾಸಗಿ ಪತ್ರವೊಂದಕ್ಕೆ ಮೂರನೆಯ ವ್ಯಕ್ತಿಯೊಬ್ಬ ಪ್ರತಿಕ್ರಿಯ ನೀಡುವುದು ಸಮಂಜಸವಲ್ಲ. ಆದಾಗ್ಯೂ, ಪತ್ರ ಪ್ರಕಟಗೊಂಡು ಓದುಗರ ಗಮನಕ್ಕೆ ಬಂದಿದೆ. ಅಲ್ಲದೆ ಸಂಪಾದಕರು ಅದಕ್ಕೆ ಪ್ರತಿಕ್ರಿಯೆ ನೀಡಬೇಕೆಂದು ಕೋರಿಕೊಂಡಿದ್ದಾರೆ. ಆದ್ದರಿಂದ ಈ ಪ್ರತಿಕ್ರಿಯೆಯನ್ನು ನೀಡುತ್ತಿದ್ದೇನೆ.

ಇಪ್ಪತ್ತೈದನೆಯ ಸಂಚಿಕೆಯನ್ನು ಹತ್ತೊಂಬತ್ತನೆಯ ಶತಮಾನದ ಮೈಸೂರು ಪ್ರದೇಶದ ಇತಿಹಾಸಕ್ಕೆ ಸಂಬಂಧಿಸಿದ ಆಕರಗಳ ಸಂಪುಟವಾಗಿ ಹೊರತರುವುದು ಮೂಲ ಉದ್ದೇಶವಾಗಿತ್ತು. ಅದರಲ್ಲಿ ಅನೇಕ ಆಡಳಿತ ದಾಖಲೆಗಳು, ವಿವಿಧ ಸರ್ಕಾರಿ ಇಲಾಖೆಗಳ ಪತ್ರ–ವರದಿಗಳು, ಇತರ ಪತ್ರವ್ಯವಹಾರಗಳು, ಕ್ರಿಶ್ಚಿಯನ್ ಮಿಶನರಿಗಳ ಅನುಭವಗಳು, ಯಾತ್ರಾವಿವರಣೆಗಳು, ಕೃಷಿ – ಅರಣ್ಯ – ಪಕ್ಷಿಮೃಗಾದಿಗಳು – ಸಸ್ಯಸಂಪತ್ತುಗಳ ಕುರಿತ ವರದಿಗಳು, ಬ್ರಿಟಿಶ್ ಪ್ಲ್ಯಾಂಟರ್‌ಗಳ ಕಥನಗಳು –ಹೀಗೆ ಅನೇಕ ರೀತಿಯ ಆಕರಗಳು ಸೇರಿದ್ದವು. ಆದರೆ ಕೊನೆಗೆ ಸಂಚಿಕೆ ತಯಾರಾದಾಗ ಅದು ಸುಮಾರು ಐನೂರು ಪುಟಗಳಷ್ಟು ದೊಡ್ಡ ಸಂಪುಟವಾಯಿತು. ಅದನ್ನು ಅನಿರ್ದಿಷ್ಟವಾಗಿ ಕಿರಿದಾಗಿಸುವುದು ಸರಿಯಲ್ಲವೆಂದ ಕಾರಣ ಸಂಪಾದಕರೊಂದಿಗೆ ಸಮಾಲೋಚಿಸಿ ಕೇವಲ ಹೈದರ್ ಅಲಿ, ಟೀಪೂ ಸುಲ್ತಾನರಿಗೆ ಸೇರಿದ ದಾಖಲೆಗಳನ್ನು ಮಾತ್ರ ಸಂಗ್ರಹಿಸುವುದೆಂದು ನಿರ್ಣಯಿಸಲಾಯಿತು. ಹೀಗೆ ಸಂಚಿಕೆಯನ್ನು ಮರುವಿನ್ಯಾಸಗೊಳಿಸುವ ಸಂದರ್ಭದಲ್ಲಿ ಹಳೆಯ ಪರಿವಿಡಿಯನ್ನು ತೆಗೆದು ಹಾಕಲಾಯಿತು. ಗಡಿಬಿಡಿಯಲ್ಲಿ ಹೊಸ ಪರಿವಿಡಿ ಸೇರ್ಪಡೆಯಾಗದೆ ಉಳಿಯಿತು. ಪರಿವಿಡಿ ಇಂತಿದೆ:

1. ಟೀಪೂ ಸುಲ್ತಾನ್ ತನ್ನ ಅಧಿಕಾರಿಗಳಿಗೆ ಬರೆದ ಪತ್ರಗಳು, ಪುಟ. 11–104.

   ಆಕರ: *Select Letters of Tippoo Sultan to Various Public Functionaries,* Arranged and Translated by William Kirkpatrick, Black, Parry, and Kingsbury, and John Booth, London, 1811, pp. 1-93.

2. ಮೈಸೂರಿನೊಂದಿಗೆ ಬ್ರಿಟಿಶರು ಕಾಲಕಾಲಕ್ಕೆ ನಡೆಸಿದ ಒಪ್ಪಂದಗಳು, ಪುಟ.105–138.

   ಆಕರ: *A Collection of Treaties, Engagements and Sunnuds Relating to India and Neighbouring Countries, Vol. V,* Complied by C.U. Aitchison, Foreign Office Press, Calcutta, 1876, pp. 251-284.

3. ಟೀಪೂಗೆ ಸಂಬಂಧಪಟ್ಟ ಬ್ರಿಟಿಶ್ ಅಧಿಕಾರಿಗಳ ಪತ್ರಗಳು, ಪುಟ 139–223.

   ಆಕರ: *The Despatches, Minutes, and Correspondence, of the Marquess Vellesley, K.G. during His Administation in India, Vol. II,* Edited by Montgomery Martin, W.H. Allen and Co., London, 1834, pp. 17-101.

ವಗ್ಗರ ಅವರು ಆಕರ ಸಂಪುಟಕ್ಕೆ ಸುದೀರ್ಘ ಪ್ರಸ್ತಾವನೆ ಇರಬೇಕಿತ್ತು ಎಂದಿದ್ದಾರೆ. ಅಂಥ ಪ್ರಸ್ತಾವನೆ ಏಕೆ ಬರೆದಿಲ್ಲ ಎಂಬುದನ್ನು ಸಂಚಿಕೆಯ ಹತ್ತನೆಯ ಪುಟದಲ್ಲಿ ಸ್ಪಷ್ಟಪಡಿಸಿದ್ದೇನೆ. ಪ್ರಸ್ತಾವನೆಯಿಂದ ಉಂಟಾಗಬಲ್ಲ ಪೂರ್ವಾಗ್ರಹಗಳನ್ನು ತೊರೆದು ಅಲ್ಲಿ ಸಂಗ್ರಹಿತವಾಗಿರುವ ಆಕರ ಸಾಮಗ್ರಿಗಳನ್ನು ಹೇಗೆ ವಿಶ್ಲೇಷಣೆಗೆ ಒಡ್ಡಬಹುದು ಎಂಬುದನ್ನೂ ಅಲ್ಲಿಯೇ ಸ್ಪಷ್ಟಪಡಿಸಿದ್ದೇನೆ. ಸಂಶೋಧನೆಯನ್ನು ಕೈಗೊಳ್ಳಲು ಉತ್ಸುಕರಾದ ವಿದ್ಯಾರ್ಥಿಗಳಿಗೆ ವೈಧಾನಿಕತೆಯ ನೇರ ಪರಿಚಯವಾಗಲು ಅಗತ್ಯವಾದ ಮಾರ್ಗದರ್ಶನವನ್ನು ಅಲ್ಲಿ ನೀಡಲಾಗಿದೆ. ವಿದ್ಯಾರ್ಥಿ ಹಾಗೂ ಸಣ್ಣಪುಟ್ಟ ನಗರ, ಗ್ರಾಮೀಣ ಪ್ರದೇಶಗಳ ಕಾಲೇಜು ಅಧ್ಯಾಪಕರನ್ನು ಲಕ್ಷ್ಯವಾಗಿಟ್ಟುಕೊಂಡು ಪ್ರಕಟಗೊಳ್ಳುತ್ತಿರುವ ಪತ್ರಿಕೆ *ಇತಿಹಾಸ ದರ್ಪಣ.* ಆದ್ದರಿಂದ ಈ ತರಹದ ವ್ಯಾಸಂಗಗಳು ಸಮರ್ಪಕವೂ ಫಲಪ್ರದವೂ ಆಗಿರುತ್ತದೆ.

ಆಕರ ಗ್ರಂಥವನ್ನು ಪ್ರತ್ಯೇಕ ಹೊರತರಬಹುದಿತ್ತು ಎಂದು ವಗ್ಗರ ಅವರು ಸೂಚಿಸಿದ್ದಾರೆ. ಒಳ್ಳೆಯ ಸಲಹೆ. ಆದರೆ ಹಾಗೆ ಮಾಡಿದಲ್ಲಿ ಅಂಥ ಗ್ರಂಥವನ್ನು ವಿದ್ಯಾರ್ಥಿಗಳಾಗಲಿ, ಗ್ರಾಮೀಣ ಪ್ರದೇಶದ ಶಿಕ್ಷಕರಾಗಲಿ ಖರೀದಿಸಿ ಓದುವ ಸಾಧ್ಯತೆ ಬಹುಕಡಿಮೆಯೆಂದು ನಮಗೆಲ್ಲ ತಿಳಿದೇ ಇದೆ. ಅಂಥ ಆಕರ ಗ್ರಂಥಗಳನ್ನು ವಿಶ್ವವಿದ್ಯಾಲಯಗಳ ಕೆಲವೇ ಕೆಲವು ಶಿಕ್ಷಕರು ಮತ್ತು ದೊಡ್ಡ ನಗರಗಳಲ್ಲಿನ ಕೆಲವು ಗ್ರಂಥಾಲಯಗಳು ಮಾತ್ರ ಖರೀದಿಸುವ ಸಾಧ್ಯತೆಯಿದೆ. ಮಾತ್ರವಲ್ಲ, ಅವು ಪ್ರಬುದ್ಧ ಶೋಧಕರನ್ನು ಉದ್ದೇಶಿಸಿ ಪ್ರಕಟಗೊಳ್ಳುವುದರಿಂದ ಅಲ್ಲಿ ವಗ್ಗರ ಅವರು ಹೇಳಿದಂತೆ ಸುದೀರ್ಘ ಪ್ರಸ್ತಾವನೆಯನ್ನೂ ನೀಡಬಹುದು. *ಇತಿಹಾಸ ದರ್ಪಣ* ತಪ್ಪದೆ ಎಲ್ಲ ಚಂದಾದಾರರಿಗೂ ತಲುಪುವ ಪತ್ರಿಕೆ. ಆದ್ದರಿಂದ ಇದರಲ್ಲಿನ ಆಕರಗಳು ಸಣ್ಣ ನಗರಗಳ ಮತ್ತು ಗ್ರಾಮೀಣ ಪ್ರದೇಶಗಳ ಚಂದಾದಾರರ ಕೈಗೂ ಸೇರುತ್ತದೆ. ಎಲ್ಲ ಓದುಗರಿಗೂ ಈ ಆಕರಗಳಲ್ಲಿ ಆಸಕ್ತಿ ಇರಬೇಕೆಂದಿಲ್ಲ. ಆದರೆ ಎಂದಾದರೂ ಅಗತ್ಯ ಬಿದ್ದಾಗ ತಮ್ಮ ಕೈಯ್ಯಲ್ಲೇ ಆಕರ ಇರುವುದು ಅವರಿಗೆ ನೆರವಾಗುತ್ತದೆ. ಇಪ್ಪತ್ತೈದನೆಯ ಸಂಚಿಕೆ ಪ್ರಕಟವಾಗಿ ಕೆಲವೇ ದಿನಗಳಲ್ಲಿ ಅಂಥದ್ದೊಂದು ಪ್ರಸಂಗ ತಲೆಯೆತ್ತಿತು. ಕರ್ನಾಟಕ ಸರ್ಕಾರವು ತೀಪೂ ಸುಲ್ತಾನ್ ಜಯಂತಿ ಆಚರಿಸಲು ನಿರ್ಧರಿಸಿತು. ಇದು ವಿವಾದಕ್ಕೆ ಗುರಿಯಾಯಿತು. ಪ್ರತಿಭಟನೆಗಳು ನಡೆದವು. ಸರ್ಕಾರದ ಈ ನಿರ್ಣಯ ಸಾವು-ನೋವಿಗೂ ಕಾರಣವಾಯಿತು. ಆ ಸಂದರ್ಭದಲ್ಲಿ *ಇತಿಹಾಸ ದರ್ಪಣ* ಪತ್ರಿಕೆಯ ಓದುಗರಲ್ಲಿ ಕೆಲವರಾದರೂ ಹೈದರ್, ತೀಪು ಕುರಿತ ಆಕರಗಳನ್ನು ಪರಿಶೋಧಿಸಲು ಪತ್ರಿಕೆಯನ್ನು ಕೈಗೆತ್ತಿಕೊಂಡಿರಬಹುದು. ಅಂಥ ಕೆಲವು ಓದುಗರು ನನಗೆ ಕರೆನೀಡಿ ನಡೆಯುತ್ತಿರುವ ವಿವಾದಗಳಿಗೂ ತೀಪೂನ ಇತಿಹಾಸ ಹೇಳಲು ಉಪಯುಕ್ತವಾದ (ಪತ್ರಿಕೆಯಲ್ಲಿ ಸಂಗ್ರಹಿಸಿದ) ಆಕರಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿದರು. ಆಕರಗಳನ್ನು ವಿಶ್ಲೇಷಿಸಿ ಹೊಸ ಇತಿಹಾಸ ರಚಿಸುವ ಅಗತ್ಯವಿದೆ ಎಂಬುದನ್ನು ವ್ಯಕ್ತಪಡಿಸಿದರು. ಹೀಗೆ ಕೆಲವರನ್ನಾದರೂ ಹೊಸ ಆಲೋಚನೆಯ ಕಡೆಗೆ ತಿರುಗಿಸಲು ಪತ್ರಿಕೆಯ ಇಪ್ಪತ್ತೈದನೆಯ ಸಂಚಿಕೆ ನೆರವಾಯಿತು. ನಿರೀಕ್ಷಿಸತಕ್ಕ ನಿಲುವುಗಳನ್ನೇ ತಾಳುವ ನಾಕಾರು ವಿದ್ವಾಂಸರ ಲೇಖನವನ್ನು ಪ್ರಕಟಗೊಳಿಸುವುದಕ್ಕಿಂತ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಓದುಗರನ್ನು ಹೊಸಬಗೆಯಲ್ಲಿ ಆಲೋಚಿಸಲು ಪ್ರೇರಣೆ ನೀಡುವುದು ಸಂಪುಟದ ಪ್ರಮುಖ ಉದ್ದೇಶವಾಗಿತ್ತು. ಬಹುಜನ ಓದುಗರಿಗೆ ಸಮಾಧಾನಕರ ಎನ್ನಿಸುವ ಹೊತ್ತಿಗೆಯೊಂದನ್ನು ಪ್ರಕಟಿಸುವ ಬದಲು ಅನೇಕರಿಗೆ ಅಸಮಾಧಾನ ತೋರಿದರೂ ಮೂರೋ ನಾಲ್ಕೋ ಮಂದಿ ಭಿನ್ನವಾಗಿ ಆಲೋಚಿಸತೊಡಗಿದ್ದಾರೆ ಎಂಬುದು ಸಂಪುಟದ ಸಂಪಾದಕನಾಗಿ ನನಗೆ ಹೆಮ್ಮೆಯನ್ನುಂಟುಮಾಡಿದೆ. ಹೀಗಾಗಿ ಪತ್ರಿಕೆಯ ಸಂಪಾದಕರಾದ ರಾಜೇಶ್ ಅವರು ವಗ್ಗರ ಅವರು ಹೇಳಿದಂತೆ ಯಾವುದೇ ಆರೋಪಣೆಯನ್ನೂ ಹೊರಬೇಕಿಲ್ಲ.

■

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– ಚೆಕ್ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "ಅಕೌಂಟ್ ಪೇ" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/- ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882 ಕ್ಕೆ** ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಚಂದಾ ವಿವರ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೩೦೦/- ರೂ.ಗಳು. **(ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೫೦೦/-ರೂ.ಗಳು)**
ದ್ವೈವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೫೦೦/- ರೂ.ಗಳು. **(ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೯೦೦/-ರೂ.ಗಳು).**

ಚಂದಾ ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು-೫೬೦೦೯೧.
ಮೊ- ೭೮೨೯೪೦೪೦೬೩.

The Editor, 'Itihasa Darpana'
33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

ITIHASA DARPANA (Quarterly): A Peer Reviewed Journal of Historical Research
Kannada. Book-27, October-December: 2015. Pages: 100. Edited by: Rajesh H
#33/A, Near I.T.I College, Kempegowda Nagara, Vishwaneedam-Pos
Bengaluru-560091. Mob:7829404063. Email: itihasadarpana@gmail.com

ISSN 0232-1351
9 770232 135900 >

ಬೆಲೆ : ₹ 100/-